

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 4 ಗುರುವಾರ 2022

ಸಂಪುಟ: 43 | ಸಂಚಿಕೆ: 110 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ದಾವಣಗೆರೆಯಲ್ಲಿ ಅದ್ದೂರಿ ಸಿದ್ದರಾಮೋತ್ಸವ

ದಶದಿಕ್ಕುಗಳಿಂದ ಹರಿದುಬಂದ ಜನಸಾಗರ

● ನಿರಂತರವಾಗಿ ಮೊಳಗಿದ ಜಯಘೋಷ ● ಕಾಂಗ್ರೆಸ್ ಯುವರಾಜ ರಾಹುಲ್‌ಗಾಂಧಿ ದಿಲ್‌ಖುಷ್

ದಾವಣಗೆರೆ, ಆ.3–ವಿಧಾನಸಭೆ ವಿಪಕ್ಷ ನಾಯಕ ಸಿದ್ದ ರಾಮಯ್ಯನವರ 75ನೇ ಹುಟ್ಟು ಹಬ್ಬದ ಅಂಗವಾಗಿ ದಾವಣಗೆರೆಯಲ್ಲಿ ಅವರ ಅಭಿಮಾನಿಗಳು ಆಯೋಜಿಸಿದ್ದ ಅಮೃತ ಮಹೋತ್ಸವ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು. ಅಲ್ಲದೇ ಮುಂಬರುವ ವಿಧಾನಸಭಾ ಚುನಾವಣೆಗೆ ಈ ಸಮಾವೇಶದಲ್ಲಿ ರಣಕಹಳೆ ಮೊಳಗಿತು.

ಎಐಸಿಸಿ ನಾಯಕ ರಾಹುಲ್ ಗಾಂಧಿ ಸಮ್ಮುಖದಲ್ಲಿ ರಾಜ್ಯ ಕಾಂಗ್ರೆಸ್ ನಾಯಕರೆಲ್ಲರೂ ಒಗ್ಗಟ್ಟು ಪ್ರದರ್ಶನ ಮಾಡಿದರು. ವೇದಿಕೆ ಮೇಲೆ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸುವ ಜೊತೆಗೆ ಸಿದ್ದರಾಮಯ್ಯ ಅವರನ್ನು ಬಿಗಿದಪ್ಪಿ ಅಭಿನಂದಿಸಿದ್ದು, ನೆರೆದಿದ್ದ ಲಕ್ಷಾಂತರ ಕಾರ್ಯಕರ್ತರ ಕರ್ತಘೋಷವನ್ನು ಪಡೆಯಿತು.



ದಾವಣಗೆರೆಯಲ್ಲಿ ಬುಧವಾರ ಏರ್ಪಡಿಸಲಾಗಿದ್ದ ವಿಪಕ್ಷ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹುಟ್ಟುಹಬ್ಬದ ಅಮೃತ ಮಹೋತ್ಸವ ಸಮಾರಂಭದಲ್ಲಿ ಜನಸ್ತೋಮದತ್ತ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಜಮೀರ್ ಅಹಮದ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್ ಇನ್ನಿತರರು ಕೈಬೀಸಿ ಹರ್ಷೋದ್ಗಾರಗೈಯ್ಯುತ್ತಿರುವುದು. [ಮತ್ತಷ್ಟು ಸಚಿತ್ರ ವರದಿ: 3 ಹಾಗೂ 7ನೇ ಪುಟ]

ಕುರಿ ಉಡುಗೊರೆ: ಅತೀ ಉತ್ಸಾಹದಿಂದಲೇ ಸಿದ್ದರಾಮಯ್ಯ ಅವರ ಅಭಿಮಾನಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಕೆಲವರು ಕನಕದಾಸರ ವೇಷ ಧರಿಸಿ ಗಮನ ಸೆಳೆದರು. ಹಲವಾರು ಮಂದಿ ಸಿದ್ದರಾಮಯ್ಯ ಅವರಿಗೆ ಹುಟ್ಟು ಹಬ್ಬದ ಉಡುಗೊರೆಯಾಗಿ ಕುರಿಯನ್ನು ಕೊಡಲು ತಂದಿದ್ದು ಕಂಡು ಬಂತು. ಆದರೆ ಅವರಿಗೆ ವೇದಿಕೆ ಹತ್ತಲು ಅವಕಾಶ ದೊರೆಯಲಿಲ್ಲ. ವೇದಿಕೆಯ ಅನತಿ ದೂರದಲ್ಲಿ ಅಭಿಮಾನಿಗಳು ತಂದಿದ್ದ ಸಾವಿರಾರು ಕುರಿಗಳನ್ನು ಕಟ್ಟಲಾಗಿತ್ತು. ಸಿದ್ದರಾಮಯ್ಯನವರಿಗೆ ಉಡುಗೊರೆಯಾಗಿ ಕುರಿಗಳು ಬರಬಹುದು ಎಂದು ನಿರೀಕ್ಷಿಸಿದ್ದ ಆಯೋಜಕರು, ಅವುಗಳಿಗೆ ಆಹಾರವನ್ನೂ ಕೂಡ ಸಿದ್ಧವಾಗಿಟ್ಟುಕೊಂಡಿದ್ದು ಕುರಿಗಳಿಗೆ ಹಲವರು ಮೇವು ನೀಡುತ್ತಿದ್ದ ದೃಶ್ಯಗಳು ಕಂಡು ಬಂದವು. ▶ 3ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್, ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ: ಭ್ರಷ್ಟ ಸರ್ಕಾರ ಕಿತ್ತೊಗೆಯುವಲ್ಲಿ ಒಟ್ಟಾಗಿ ಹೋರಾಡ್ತೇವೆ...



ಬೆಂಗಳೂರು, ಆ.3(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದಿರುವ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಈ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯಲು ಒಗ್ಗಟ್ಟಿನಿಂದ ಹೋರಾಟ ನಡೆಸುತ್ತೇವೆ ಎಂದಿದ್ದಾರೆ.

ದಾವಣಗೆರೆಯಲ್ಲಿ ತಮ್ಮ ಅಭಿಮಾನಿಗಳು ಏರ್ಪಡಿಸಿದ್ದ ತಮ್ಮ 75ನೇ ವರ್ಷದ ಹುಟ್ಟುಹಬ್ಬ ಕಾರ್ಯಕ್ರಮದ ಬೃಹತ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ನಮ್ಮಲ್ಲಿ ಭಿನ್ನಾಭಿಪ್ರಾಯ ತರಲು ಮಾಧ್ಯಮದವರು ಮತ್ತು ಕೆಲವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂಷಿಸಿದರು. ಕಿಕ್ಕಿರಿದಿದ್ದ ಸಮಾವೇಶದಿಂದ ಸಂತುಷ್ಟರಾದ ▶ 7ನೇ ಪುಟಕ್ಕೆ



ಸಿದ್ದರಾಮಯ್ಯ ಜನ್ಮದಿನದ ಅಮೃತ ಮಹೋತ್ಸವ ಸಮಾವೇಶದಲ್ಲಿ ನೆರೆದಿದ್ದ ಭಾರೀ ಜನಸ್ತೋಮ....

ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆದು ರಾಜ್ಯ, ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರೋಣ; ರಾಹುಲ್ ಪ್ರಧಾನಿ ಮಾಡೋಣ...



ಬೆಂಗಳೂರು, ಆ.3(ಕೆಎಂಶಿ)–ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ರಾಜ್ಯ ಹಾಗೂ ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರೋಣ. ಸೋನಿಯಾ ಗಾಂಧಿ ಅವರ ಕೈ ಬಲಪಡಿಸಿ, ರಾಹುಲ್ ಗಾಂಧಿ ಅವರನ್ನು ಪ್ರಧಾನಿಯನ್ನಾಗಿ ಮಾಡೋಣ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕರೆ ನೀಡಿದರು. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಿ, ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆಯನ್ನು ಎದುರಿಸೋಣ. ಈ ರಾಜ್ಯಕ್ಕೆ ನ್ಯಾಯ ಒದಗಿಸಬೇಕಾದರೆ ಕಾಂಗ್ರೆಸ್ ಪಕ್ಷವನ್ನು ವಿಧಾನ ಸೌಧದ ಮೂರನೇ ಮಹಡಿಯಲ್ಲಿ ▶ 7ನೇ ಪುಟಕ್ಕೆ





ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಾಯಕತ್ವದಲ್ಲಿ ರಾಜ್ಯದ ಜನತೆಗೆ

ಉತ್ತಮ ಕಾರ್ಯಕ್ರಮ ನೀಡ್ತೇವೆ...

ಬೆಂಗಳೂರು, ಆ.3(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲಿ ಮುಂದೆಯೂ ಸಹ ರಾಜ್ಯದ ಜನರಿಗೆ ಉತ್ತಮವಾದ ಕಾರ್ಯಕ್ರಮ, ಯೋಜನೆಗಳನ್ನು ನೀಡುತ್ತೇವೆ ಎಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭರವಸೆ ಕೊಟ್ಟರು. ದಾವಣಗೆರೆಯಲ್ಲಿ ಏರ್ಪಡಿಸಿದ್ದ ಸಿದ್ದರಾಮಯ್ಯನವರ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೀಡಿದ್ದ ಅನ್ನಭಾಗ್ಯ, ಕ್ಷೀರ ಭಾಗ್ಯದಂತಹ ಹಲವು ಕಾರ್ಯಕ್ರಮಗಳು ರಾಜ್ಯದ ಜನರ ಮನಸ್ಸಿನಲ್ಲಿ ಉಳಿದಿವೆ.

ವಿಶ್ವದ ನಕ್ಷೆಯಲ್ಲಿ ಕರ್ನಾಟಕವನ್ನು ನೋಡುವಂತೆ ಮಾಡಿದ್ದು ಕಾಂಗ್ರೆಸ್ ಆಡಳಿತ. ಕಾಂಗ್ರೆಸ್ ಸರ್ಕಾರದಲ್ಲಿ ಜನರು ಯಾವುದೇ ಭಯ ಭೀತಿಯಿಲ್ಲದೆ ಬದುಕುತ್ತಿದ್ದರು. ಯಾವುದೇ ಉದ್ಯಮ, ವ್ಯಾಪಾರಕ್ಕೆ ಶಾಂತಿ ಹಾಗೂ ಸಾಮರಸ್ಯ ಅಗತ್ಯ. ರಾಷ್ಟ್ರದಲ್ಲಿ ನೋಟು ರದ್ದು ಮಾಡಿದ್ದರಿಂದ ಜನರು ತೀವ್ರತರವಾದ ಸಂಕಷ್ಟಕ್ಕೆ ಸಿಲುಕಿದರು. ಇದರಿಂದ ಕೆಲವೇ ಕೆಲವು ಉದ್ಯಮಿಗಳ ಹಣ ವರ್ಗಾವಣೆಗೆ ಅನುಕೂಲವಾಯಿತು. ದುಡಿಯುವ ಕಾರ್ಮಿಕರು, ರೈತರನ್ನು ಸಂಕಷ್ಟಕ್ಕೆ ದೂಡಲೆಂದೇ ಜಿಎಸ್ಟಿ ಜಾರಿ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ನಾನು ಹುಟ್ಟುಹಬ್ಬ ದಂತಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ. ಆದರೆ, ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಿದ್ದರಾಮಯ್ಯನವರೊಂದಿಗಿನ ವಿಶೇಷ ಬಾಂಧವ್ಯ ಕಾರಣ ಎಂದರು.



ಸಿದ್ದರಾಮಯ್ಯ ಜನ್ಮದಿನದ ಅಮೃತ ಮಹೋತ್ಸವ ಸಮಾವೇಶದಲ್ಲಿ ಕಾಂಗ್ರೆಸ್ ರಾಹುಲ್‌ಗಾಂಧಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅದ್ದೂರಿಯಾಗಿ ಸನ್ಮಾನಿಸಿ, ಶುಭಾಶಯ ಕೋರಿದರು. ಇದೇ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರನ್ನು ಕಾಣಬಹುದು.

ನಾನು ಅವರನ್ನು ಒಬ್ಬ ವ್ಯಕ್ತಿಯಾಗಿ ಅಷ್ಟೇ ಅಲ್ಲದೇ, ಅನೇಕ ವಿಚಾರದಲ್ಲೂ ಇಷ್ಟ ಪಡುತ್ತೇನೆ. ಬಡ ಹಾಗೂ ದುರ್ಬಲರ ಬಗ್ಗೆ ಸಿದ್ದರಾಮಯ್ಯನವರಿಗಿರುವ ಕಾಳಜಿ ಮೆಚ್ಚುವಂತದ್ದು. ಮುಖ್ಯಮಂತ್ರಿಯಾಗಿದ್ದಾಗ ತಾವು ರೂಪಿಸಿದ್ದಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದರು ಎಂದರು.

ಮಲ್ಲಿಕಾರ್ಜುನ ಖರ್ಗೆ ಗೈರು: ರಾಜ್ಯದಲ್ಲಿ ಭಾರೀ ಕುತೂಹಲ ಸೃಷ್ಟಿಸಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮಕ್ಕೆ ರಾಜ್ಯಸಭೆ ಪ್ರತಿಪಕ್ಷದ ನಾಯಕ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಗೈರಾಗಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮಂಗಳವಾರ ದೇಶದ 12 ಕಡೆ ದಾಳಿ ನಡೆಸಿರುವ ಬೆಳವಣಿಗೆ ಹಿನ್ನೆಲೆಯಲ್ಲಿ ಖರ್ಗೆ ಸಿದ್ದರಾಮೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿಲ್ಲ ಎಂದು ತಿಳಿದುಬಂದಿದೆ.



ಮೈಸೂರಲ್ಲಿ ಗೃಹಶೋಭೆ ಮಾನ್ಸೂನ್ ಶಾಪಿಂಗ್ ಫೆಸ್ಟಿವಲ್‌ಗೆ ಚಾಲನೆ



ಮೈಸೂರು, ಆ. 3– ಮೈಸೂರಿನ ದೊಡ್ಡಕೆರೆ ಮೈದಾನದ ಪಕ್ಕದಲ್ಲಿರುವ ಜೆಎಸ್‌ಎಸ್ ಮೈದಾನದಲ್ಲಿ ಸೈಮನ್ ಎಕ್ಸಿಬಿಟರ್ಸ್ ಸಂಸ್ಥೆ ವತಿಯಿಂದ ಆಯೋಜಿಸಿರುವ ಗೃಹಶೋಭೆ ಮಾನ್ಸೂನ್ ಶಾಪಿಂಗ್ ಫೆಸ್ಟಿವಲ್‌ಗೆ ಮಾಜಿ ಶಾಸಕ ವಾಸು ಮತ್ತು ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಪ್ರದರ್ಶನದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿ ಇಲ್ಲಿ ಲಭ್ಯವಾಗುತ್ತದೆ. ಗೃಹಬಳಕೆಗೆ ಬೇಕಾದ ಪದಾರ್ಥಗಳು ಕೂಡ ಒಂದೇ ಸೂರಿನಡಿ ಸಿಗಲಿದೆ. ಈ ಪ್ರದರ್ಶನ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಗೃಹಶೋಭೆಯ ವ್ಯವಸ್ಥಾಪಕ ನಾಗಚಂದ್ರ ಮಾತನಾಡಿ, ಕಳೆದ 25 ವರ್ಷದಿಂದ ಸಾಂಸ್ಕೃತಿಕ ರಾಜಧಾನಿ, ಹೆಮ್ಮೆಯ ಮೈಸೂರು ಜಿಲ್ಲೆಯಲ್ಲಿ ಸೈಮನ್ ಎಕ್ಸಿಬಿಟರ್ಸ್ ಸಂಸ್ಥೆ ವತಿಯಿಂದ ಗೃಹಶೋಭೆ ವಸ್ತು ಪ್ರದರ್ಶನವನ್ನು ಏರ್ಪಡಿಸುತ್ತಾ ಬರಲಾಗುತ್ತಿದೆ. ಸೀಸನ್‌ಗೆ ತಕ್ಕಂತೆ ವರ್ಷಕ್ಕೆ ಮೂರು ಬಾರಿ ಈ ಪ್ರದರ್ಶನ ನಡೆಸಲಾಗುತ್ತದೆ.

ಅಂತೆಯೇ ಈ ಬಾರಿ ಮಾನ್ಸೂನ್ ಶಾಪಿಂಗ್ ಫೆಸ್ಟಿವಲ್ ಆಯೋಜಿಸಲಾಗಿದೆ. ಕೊರೊನಾ ಹಾಗೂ ಹಲವು ಕಾರಣಗಳಿಂದ ಪ್ರದರ್ಶನ ನಡೆಸಲು ಸಾಧ್ಯವಾಗಿರಲಿಲ್ಲ. ಪ್ರದರ್ಶನದಲ್ಲಿ ನಾನಾ ವ್ಯಾಪಾರಸ್ಥರ ಉತ್ಪನ್ನಗಳನ್ನು ಒಂದೇ ಸೂರಿನಡಿ ಕಾಣಬಹುದು. ಮುಂಗಾರು ಮಳೆಯಲ್ಲಿ ಶಾಪಿಂಗ್ ಉತ್ಸವ ಮಾಡುವ ಮೂಲಕ ಮಾರುಕಟ್ಟೆಯನ್ನು ಜೀವಂತವಾಗಿಡುವ ಕೆಲಸ ಇದಾಗಿದೆ ಎಂದರು. ಪ್ರದರ್ಶನದಲ್ಲಿ ಪ್ರಥಮ ಬಾರಿಗೆ ಅಂಬ್ರಲಾ ಸ್ಟ್ರೀಟ್ ಎಂಬ ಹೊಸ ಕಾನ್ಸೆಪ್ಟ್ ಮಾಡಲಾಗಿದೆ. ಇದರ ಜೊತೆಗೆ ಮಕ್ಕಳಿಗೆ ಇಷ್ಟವಾಗಲು ಸ್ಪೇಸ್‌ಟೂರ್ ಇದೆ. ಒಂದು ದಿನ ಬಾಹ್ಯಾಕಾಶದಲ್ಲಿ ಇರುವ ಅನುಭವವನ್ನು ಇದು ನೀಡಲಿದೆ. 100ಕ್ಕೂ ಹೆಚ್ಚು ಮಳಿಗೆಗಳನ್ನು ಗ್ರಾಹಕರಿಗೆ ತಲುಪಿಸುವ ಕೆಲಸ ಮಾಡಲಾಗಿದೆ. ವಿಶೇಷವಾಗಿ ಸಿಂಗಾಪೂರ್ ಟವರ್, ಐಫೆಲ್ ಟವರ್ ಮಾದರಿಯನ್ನು ವಿನ್ಯಾಸಗೊಳಿಸಲಾಗಿದೆ. ಅಮ್ಯೂಸ್‌ಮೆಂಟ್ ಪಾರ್ಕ್, ಬೇರೆ ಬೇರೆ ಜಿಲ್ಲೆ ತಿನಿಸು ಸವಿಯುವ ಫುಡ್ ಫೆಸ್ಟ್ ಇದೆ. ಮಳೆಗಾಲದಲ್ಲಿ ಕುಟುಂಬದ ಜೊತೆ ಎರಡು ಗಂಟೆಕಾಲ ಕಳೆಯಲು ಇದು ಬೆಸ್ಟ್ ಪ್ಲೇಸ್ ಎಂದರು. ಈ ಪ್ರದರ್ಶನ ಆ.28ರವರೆಗೆ ತಿಂಗಳ ಕಾಲ ಇರಲಿದೆ. ಬೆ.11ರಿಂದ ರಾತ್ರಿ 9ರವರೆಗೆ ನಾಗರಿಕರು ಭೇಟಿ ನೀಡಬಹುದು.

ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆಗೆ ಆಂಬುಲೆನ್ಸ್ ಕೊಡುಗೆ



ಇತ್ತೀಚೆಗೆ ಮೈಸೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆಡಳಿತ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ವತಿಯಿಂದ ಮೈಸೂರಿನ ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆಗೆ ಆಂಬುಲೆನ್ಸ್ ಅನ್ನು ಕೊಡುಗೆಯಾಗಿ ನೀಡಲಾಯಿತು. ಎಸ್‌ಬಿಐ ಜನರಲ್ ಮ್ಯಾನೇಜರ್ ಅನುರಾಗ್ ಜೋಶಿ, ಎಒ5 ಡೆಪ್ಯುಟಿ ಜನರಲ್ ಮ್ಯಾನೇಜರ್ ರಾಜೇಶ್ ಕುಮಾರ್ ಚೌಧರಿ ಅವರು ಎಸ್‌ಬಿಐ ಬ್ಯಾಂಕ್ ಮೆಡಿಕಲ್ ಆಫೀಸರ್ ಡಾ.ಪಿ.ಎನ್.ವೀಣಾ ಅವರೊಂದಿಗೆ ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ರಾಕೇಶ್ ಅವರಿಗೆ ಆಂಬುಲೆನ್ಸ್ ಕೀಯನ್ನು ಹಸ್ತಾಂತರಿಸಿದರು. ಈ ವೇಳೆ ಡಾ.ಸೈಯದ್ ಮತ್ತು ಡಾ.ಎಸ್.ವಿನಯ್ ಹಾಜರಿದ್ದರು.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಆ.3– ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಹಾಗೂ ಜಿಲ್ಲಾ, ರಾಜ್ಯ ಮತ್ತು ಅಂತರರಾಜ್ಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ ಬ್ಯಾಂಕಿನ ಸದಸ್ಯರ ಪ್ರತಿಭಾವಂತ ಮಕ್ಕಳಲ್ಲಿ ಮೂವರಿಗೆ ತಲಾ 3,000 ರೂ. ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸ ಬಯಸುವವರು ತಮ್ಮ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಆ.8ರೊಳಗೆ ಬ್ಯಾಂಕಿನ ವ್ಯವಸ್ಥಾಪಕರಿಗೆ ಸಲ್ಲಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

ನಾಳೆ ಬೆರಳ್‌ಗೆ ಕೊರಳ್ ನಾಟಕ ಪ್ರದರ್ಶನ

ಮೈಸೂರು,ಆ.3(ಪಿಎಂ)– ನಾಲ್ವಡಿ ಸೋಶಿಯಲ್ ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ಆ.5ರಂದು ರಾಷ್ಟ್ರಕವಿ ಕುವೆಂಪು ವಿರಚಿತ 'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಹಾಗೂ ನಾಟಕ ನಿರ್ದೇಶಕ ದಿನೇಶ್ ಚಮ್ಮಾಳಿಗೆ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 7ಕ್ಕೆ ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನಾಟಕದ ಪ್ರದರ್ಶನ ನಡೆಯಲಿದೆ. ಸದರಿ ನಾಟಕವನ್ನು ಟ್ರಸ್ಟ್‌ನಿಂದ ಮೊದಲ ಬಾರಿಗೆ ಪ್ರದರ್ಶನ ಮಾಡಿದಾಗ, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಇದೀಗ ಪ್ರೇಕ್ಷಕರ ಅಪೇಕ್ಷೆ ಮೇರೆಗೆ ಮರು ಪ್ರದರ್ಶನ ನೀಡಲಾಗುತ್ತಿದೆ ಎಂದು ಹೇಳಿದರು.

ನಾಟಕವು 2 ಗಂಟೆ ಅವಧಿ ಒಳಗೊಂಡಿದೆ. ನಾಟಕ ಆರಂಭಕ್ಕೂ ಮುನ್ನ ಸ್ಥಳದಲ್ಲೇ ಟಿಕೆಟ್ (150 ರೂ.) ದೊರೆಯಲಿದೆ. ನಾಟಕಕ್ಕೆ ಶ್ರೀನಿವಾಸ್ ಭಟ್ (ಚೀನಿ) ಸಂಗೀತ ನೀಡಿದ್ದು, ಬಿ.ಎಂ.ರಾಮಚಂದ್ರ ಅವರ ಪ್ರಸಾದನವಿದೆ ಎಂದರು. ಪ್ರಸಾದನ ಕಲಾವಿದ ಮತ್ತು ರಂಗಕರ್ಮಿ ಬಿ.ಎಂ.ರಾಮಚಂದ್ರ ಮಾತನಾಡಿ, ಸದರಿ ಟ್ರಸ್ಟ್ ತನ್ನ ಪ್ರತಿ ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುತ್ತಿದೆ. ನಾಟಕವು ಹಳಗನ್ನಡ ಒಳಗೊಂಡಿದ್ದು, ಅವುಗಳನ್ನು ಸರಳೀಕರಣಗೊಳಿಸಿ ಸುಮಾರು 4 ತಿಂಗಳ ಕಾಲ ತಾಲೀಮು ನಡೆಸಲಾಗಿದೆ. ಜೊತೆಗೆ ಈ ತಂಡದ ಎಲ್ಲರೂ ಹವ್ಯಾಸಿ ಕಲಾವಿದರು ಎಂದು ಹೇಳಿದರು. ಟ್ರಸ್ಟ್ ಖಜಾಂಚಿ ಕವಿತಾ, ಸದಸ್ಯ ಕೃಷ್ಣಮೂರ್ತಿ ತಲಕಾಡು, ನಾಟಕದ ಪಾತ್ರಧಾರಿ ಅಕ್ಷರ್ ಎನ್.ವಿಶ್ವದೀಪ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಆ.6ರಂದು ಮೈಸೂರು ಉದ್ಯೋಗ ಮೇಳ

ಮೈಸೂರು,ಆ.3(ಪಿಎಂ)– ಎಡಿನ್ ಬ್ರಿಡ್ಜ್ ಫೌಂಡೇಷನ್, ಕ್ರೆಸ್ಟಾ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಂಡ್ ಆರ್ಟ್ಸ್ ಮತ್ತು ಮೈಸೂರ್ ಹೆಚ್‌ಆರ್ ಫೋರಂ ಸಂಯುಕ್ತಾಶ್ರಯದಲ್ಲಿ ಆ.6ರಂದು 'ಮೈಸೂರು ಉದ್ಯೋಗ ಮೇಳ' ಆಯೋಜಿಸಲಾಗಿದೆ ಎಂದು ಎಡಿನ್ ಸಂಸ್ಥೆಯ ಸಿಎಸ್‌ಆರ್ ವಿಭಾಗದ ಮುಖ್ಯಸ್ಥೆ ಹೇಮಲತಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಮೈಸೂರಿನ ಆಲನಹಳ್ಳಿಯ ಬನ್ನೂರು ರಸ್ತೆಯಲ್ಲಿರುವ ಕ್ರೆಸ್ಟಾ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಂಡ್ ಆರ್ಟ್ಸ್ ಸಂಸ್ಥೆ ಆವರಣದಲ್ಲಿ ಉದ್ಯೋಗ ಮೇಳ ನಡೆಯಲಿದೆ ಎಂದರು.

ಐಟಿ, ಬಿಪಿಓ, ಕೆಪಿಓ, ಉತ್ಪಾದನೆ, ಮಾರಾಟ, ಹಣಕಾಸು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿರುವ 1500ಕ್ಕೂ ಹೆಚ್ಚು ಉದ್ಯೋಗಗಳಿಗೆ ಈ ಮೇಳ ನಡೆಯಲಿದೆ. ಟ್ರಾನ್ಸ್ ಕಾಮ್, ಹೆಚ್‌ಜಿಎಸ್, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸೇರಿದಂತೆ 30ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಮೇಳದಲ್ಲಿ ಪಾಲ್ಗೊಳ್ಳಲಿವೆ ಎಂದರು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ಇನ್ನಿತರ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಮೇಳದಲ್ಲಿ ಪಾಲ್ಗೊಳ್ಳಬಹುದು. ಉದ್ಯೋಗಾಕಾಂಕ್ಷಿಗಳು ಗೂಗಲ್ ಲಿಂಕ್‌ನಲ್ಲಿ (https://forms.gle/ye5VUnQruTdG27in6) ಉಚಿತವಾಗಿ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 70220 36998, 99640 05854 ಸಂಪರ್ಕಿಸಬಹುದು ಎಂದರು. ಎಡಿನ್ ಸಿನರ್ಜಿ ಮುಖ್ಯಸ್ಥ ಎಂ.ಫಣೀಶ್, ಎಡಿನ್ ಬ್ರಿಡ್ಜ್ ಮುಖ್ಯಸ್ಥ ಪ್ರತಾಪ್ ಹಾಸನ್, ಕ್ರೆಸ್ಟಾ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಂಡ್ ಆರ್ಟ್ಸ್‌ನ ಪ್ರಾಂಶುಪಾಲ ರಾಕೇಶ್, ಪ್ರಾಧ್ಯಾಪಕಿ ಇರಾನಿ ಮೇರಿಡವ್ ಗೋಷ್ಠಿಯಲ್ಲಿದ್ದರು.

ರಾಜ್ಯದಲ್ಲಿ ಮತ್ತೆ 2 ಸಾವಿರ ಗಡಿ ದಾಟಿದ ಕೊರೊನಾ ಕೇಸ್

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಮತ್ತೆ ಹೆಚ್ಚಳವಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ 2136 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,12,522ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಕೊರೊನಾದಿಂದ ಇಬ್ಬರು ಮೃತಪಟ್ಟಿದ್ದು, ಇದರೊಂದಿಗೆ ಸಾವಿನ ಸಂಖ್ಯೆ 40,108ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ ಇಂದು 1,584 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,39,918ಕ್ಕೆ ಏರಿಕೆಯಾಗಿದೆ.

ಮೈಸೂರು ಕುಂಬಾರಕೊಪ್ಪಲು ಕಾಲೋನಿಯಲ್ಲಿ ಶಾಸಕ ಎಲ್.ನಾಗೇಂದ್ರ ಪಾದಯಾತ್ರೆ

ಸಾರ್ವಜನಿಕರ ಕುಂದು–ಕೊರತೆ ಆಲಿಸಿ, ಶೀಘ್ರವೇ ಸಮಸ್ಯೆಗಳ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ

ಮೈಸೂರು,ಆ.3(ಪಿಎಂ)–ಚಾಮರಾಜ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕುಂಬಾರಕೊಪ್ಪಲು ಕಾಲೋನಿಯಲ್ಲಿ ಸೋಮವಾರ ಪಾದಯಾತ್ರೆ ನಡೆಸಿದ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಸಾರ್ವಜನಿಕರ ಕುಂದು–ಕೊರತೆ ಆಲಿಸಿ, ಕಾಲಮಿತಿಯಲ್ಲಿ ಸಮಸ್ಯೆಗಳನ್ನು ಶೀಘ್ರವೇ ಪರಿಹರಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಲ್ಲಿನ ಮಹದೇಶ್ವರ ದೇವಸ್ಥಾನದ ಬಳಿಯಿಂದ ಪಾದಯಾತ್ರೆ ಪ್ರಾರಂಭಿಸಿದ ಶಾಸಕರು, ಕಾಲೋನಿಯ ಪ್ರತಿ ರಸ್ತೆಯಲ್ಲಿ ಸಂಚರಿಸಿ, ನಿವಾಸಿಗಳ ಅಹವಾಲು ಆಲಿಸಿ, ಪರಿಹಾರ ಸೂಚಿಸಿದರು. ಇಲ್ಲಿನ ಸಮುದಾಯ ಭವನದ ಮಹಡಿಯಲ್ಲಿ ಪಾಲಿಕೆಯಿಂದ ಕೊಠಡಿ ನಿರ್ಮಿಸಲಾಗುತ್ತಿದೆ. 40 ವರ್ಷಗಳ ಹಿಂದೆ ಸದರಿ ಭವನ ನಿರ್ಮಿಸಿರುವ ಹಿನ್ನೆಲೆಯಲ್ಲಿ ಕಾಂಕ್ರಿಟ್ ಪಿಲ್ಲರ್ ನಿರ್ಮಿಸಿ ಬಳಿಕ ಕೊಠಡಿ ನಿರ್ಮಾಣಕ್ಕೆ ಕ್ರಮ ವಹಿಸಬೇಕೆಂದು ಸ್ಥಳೀಯರು ಶಾಸಕರಲ್ಲಿ ಕೋರಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಕಟ್ಟಡದ ಸುಸ್ಥಿತಿ ಬಗ್ಗೆ ವರದಿ ಪಡೆದು ನಂತರ ಸೂಕ್ತ ರೀತಿಯಲ್ಲಿ ಕಾಮಗಾರಿ ನಡೆಸುವಂತೆ ಪಾಲಿಕೆ ಅಭಿವೃದ್ಧಿ ಅಧಿಕಾರಿ ಮನುಗೌಡ ಅವರಿಗೆ ನಿರ್ದೇಶನ ನೀಡಿದರು.

ರಸ್ತೆ ಅಭಿವೃದ್ಧಿಗೆ ಕ್ರಮ: ಕಾಲೋನಿಯಲ್ಲಿನ ಬಹುತೇಕ ರಸ್ತೆಗಳು ಹಾಳಾಗಿದ್ದು, ಇದರಿಂದ ಸುಗಮ ಸಂಚಾರ ಸಾಧ್ಯವಾಗದೇ ಪರದಾಡುವಂತಾಗಿದೆ. ರಸ್ತೆಗಳ ಅಭಿವೃದ್ಧಿಗೆ ಕ್ರಮ ವಹಿಸಬೇಕೆಂದು ಇಲ್ಲಿನ ನಿವಾಸಿಗಳು ಶಾಸಕರಲ್ಲಿ ಮನವಿ ಮಾಡಿದರು. ಇದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಶಾಸಕರು, ಮಹಾನಗರ ಪಾಲಿಕೆ ನಿಧಿ ಹಾಗೂ ಶಾಸಕರ ನಿಧಿಯಿಂದ ಅನುದಾನ ಕಲ್ಪಿಸಿ ಶೀಘ್ರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು. ಅಲ್ಲದೆ, ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಸಂಬಂಧ ಅಂದಾಜುಪಟ್ಟಿ ಸಿದ್ಧಪಡಿಸುವಂತೆ ಪಾಲಿಕೆ ಅಭಿವೃದ್ಧಿ ಅಧಿಕಾರಿ ಹಾಗೂ ಇಂಜಿನಿಯರಿಗೆ ಸೂಚನೆ ನೀಡಿದರು.

ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕಾಲೋನಿಯಲ್ಲಿ ನಿರ್ಮಿಸಿರುವ ಮನೆಗಳ ಸಂಕೀರ್ಣದಲ್ಲಿ ವಿದ್ಯುತ್ ಸಂಪರ್ಕ ಸಮರ್ಪಕವಾಗಿಲ್ಲದೆ, ಕೇಬಲ್‌ಗಳು ತುಂಡಾಗಿರುವುದನ್ನು ಸ್ವತಃ ಗಮನಿಸಿದ ಶಾಸಕರು, 15 ದಿನಗಳ ಒಳಗೆ ಎಲ್ಲವನ್ನೂ ಸರಿಪಡಿಸಿ ತಮಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಲ್ಲದೆ, ಇಲ್ಲಿನ ಮನೆಗಳ ಸಂಪ್ ದುರಸ್ತಿ, ಮೋಟಾರ್ ಅಳವಡಿಕೆ, ಮೇಲ್ಟ್ಯಾವಣಿ ಟ್ಯಾಂಕ್ ಅಳವಡಿಸಲು ಕ್ರಮ ಕೈಗೊಳ್ಳುವಂತೆಯೂ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಮೈಸೂರಿನ ಕುಂಬಾರಕೊಪ್ಪಲು ಕಾಲೋನಿಯಲ್ಲಿ ಸೋಮವಾರ ಪಾದಯಾತ್ರೆ ನಡೆಸಿದ ಶಾಸಕ ಎಲ್.ನಾಗೇಂದ್ರ ಸಾರ್ವಜನಿಕರ ಕುಂದು ಕೊರತೆ ಆಲಿಸಿದರು.

ಶೀಘ್ರದಲ್ಲಿ ಹಕ್ಕುಪತ್ರ ವಿತರಣೆ: ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕಾಲೋನಿಯಲ್ಲಿ ನಿರ್ಮಿಸಿರುವ ಮನೆಗಳ ಸಂಕೀರ್ಣದಲ್ಲಿ ವಾಸ ಮಾಡುತ್ತಿರುವ ಕುಟುಂಬಗಳಿಗೆ ಶೀಘ್ರವೇ ಮನೆಗಳ ಹಕ್ಕುಪತ್ರ ನೀಡಲಾಗುವುದು. ಈ ಸಂಬಂಧ ಆಶ್ರಯ ಸಮಿತಿಯಲ್ಲಿ ಚರ್ಚಿಸಿ, ಈಗಾಗಲೇ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಶಾಸಕರು ಇದೇ ವೇಳೆ ಇಲ್ಲಿನ ನಿವಾಸಿಗಳಿಗೆ ತಿಳಿಸಿದರು.

ಪೈಪ್‌ಲೈನ್ ಅಳವಡಿಸಲು ಕ್ರಮಕ್ಕೆ ಸೂಚನೆ: ಕುಡಿಯುವ ನೀರಿಗೆ ಸಮಸ್ಯೆ ಇರುವ ಬಗ್ಗೆ ಸಾರ್ವಜನಿಕರಿಂದ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಎಲ್ಲಾ ಮನೆಗಳಿಗೂ ಹೊಸ ಸಂಪರ್ಕ ನೀಡಲು ಪೈಪ್‌ಲೈನ್ ಅಳವಡಿಸುವ ಸಂಬಂಧ ಅಂದಾಜು ಪಟ್ಟಿ ತಯಾರಿಸಿ, ತ್ವರಿತಗತಿಯಲ್ಲಿ ಕಾಮಗಾರಿ ಆರಂಭಕ್ಕೆ ಕ್ರಮ ಕೈಗೊಳ್ಳಬೇಕೆಂದು ವಾಣಿವಿಲಾಸ ಅಭಿಯಂತರರಿಗೆ ಶಾಸಕರು ಸೂಚನೆ ನೀಡಿದರು.

ಇಲ್ಲಿನ ಮಳೆ ನೀರು ಚರಂಡಿಯಲ್ಲಿ ಹೂಳು ತುಂಬಿರುವುದನ್ನು ಗಮನಿಸಿದ ಶಾಸಕರು, ಕೂಡಲೇ ಈ ಹೂಳನ್ನು ತೆರವುಗೊಳಿಸಿ, ಚರಂಡಿಗೆ ರಕ್ಷಣಾ ಗೋಡೆ ನಿರ್ಮಿಸಲು ಕ್ರಮ ವಹಿಸುವಂತೆ ಹಾಜರಿದ್ದ ಪಾಲಿಕೆ ವಲಯ ಆಯುಕ್ತರಿಗೆ ಸೂಚನೆ ನೀಡಿದರು.

ಬಳಿಕ ಪಿಕೆಟಿಬಿ ಸ್ಯಾನಿಟೋರಿಯಂನ ಹಿಂಭಾಗದ ಕಾಲೋನಿಯ ರಸ್ತೆಗಳಲ್ಲಿ ಸಂಚರಿಸಿದ ಶಾಸಕರು, ಸಾರ್ವಜನಿಕರ ಕುಂದುಕೊರತೆ ಆಲಿಸಿದರು. ಅಲ್ಲದೆ ಇಲ್ಲಿ ಭಾರೀ ಗಾತ್ರದ ಮರದ ಕೊಂಬೆಗಳು ಹರಡಿ ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಗಿರುವುದನ್ನು ಗಮನಿಸಿದ ಶಾಸಕರು, ಕೂಡಲೇ ಮರದ ಕೊಂಬೆಗಳನ್ನು ತೆರವುಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅರ್ಹವಿರುವ ಪಿಂಚಣಿ ಮಂಜೂರಿಗೆ ಕ್ರಮ: ಹಲವು ನಿರ್ಗತಿಕರು, ಬಡವರು, ವಿಧವೆಯರು, ವಯೋವೃದ್ಧರು ತಮಗೆ ಪಿಂಚಣಿ ಸೌಲಭ್ಯ ಕಲ್ಪಿಸುವಂತೆ ಶಾಸಕರಲ್ಲಿ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಕಾಲೋನಿಯ ಎಲ್ಲಾ ಮನೆಗಳಿಗೂ ಭೇಟಿ ನೀಡಿ ಅರ್ಹರಿರುವವರಿಗೆ ಪಿಂಚಣಿ ಮಂಜೂರು ಮಾಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲಿದ್ದ ರಾಜಸ್ವ ನಿರೀಕ್ಷಕರಿಗೆ ಸೂಚನೆ ನೀಡಿದರು.

ನಿವೇಶನವಿರುವ ಬಡವರಿಗೆ ಮನೆ ನಿರ್ಮಾಣ: ಕಾಲೋನಿಯಲ್ಲಿ ನಿವೇಶನ ಹೊಂದಿರುವ ಬಡ ಕುಟುಂಬಗಳಿಗೆ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ನಿರ್ಮಿಸಿಕೊಡಲು ಈಗಾಗಲೇ ಸರ್ವೇ ಕಾರ್ಯ ನಡೆಸಲಾಗಿದೆ. ಅರ್ಹ ಫಲಾನುಭವಿಗಳು ತಮ್ಮ ವಂತಿಗೆಯ 48 ಸಾವಿರ ರೂ.ಗಳನ್ನು ಮಂಡಳಿಗೆ ಪಾವತಿ ಮಾಡಿದರೆ, ಅವರಿಗೆ 4.98 ಲಕ್ಷ ರೂ. ವೆಚ್ಚದಲ್ಲಿ ಮೂರುಕಾಲು ಚದರ ವಿಸ್ತೀರ್ಣದಲ್ಲಿ ಮನೆ ನಿರ್ಮಿಸಿಕೊಡಲು ಕ್ರಮ ವಹಿಸುವುದಾಗಿ ಶಾಸಕರು ತಿಳಿಸಿದರು.

ಮಹಾನಗರ ಪಾಲಿಕೆ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಮುಖಂಡರಾದ ಕುಮಾರಗೌಡ, ದಿನೇಶ್‌ಗೌಡ, ನರಸಿಂಹಮೂರ್ತಿ, ಭೈರಪ್ಪ, ಅಶ್ವಥ, ಪ್ರಮೋದ, ಪ್ರವೀಣ್, ರಾಮು, ಸರ್ವೇಶ್, ಕಿರಣ್, ನಾಗ, ಜಯಣ್ಣ, ಅಶೋಕ, ಮಂಜು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಸಕರ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಮಧ್ಯವರ್ತಿಗಳಿಗೆ ಅವಕಾಶವಿಲ್ಲದಂತೆ ಸಾರ್ವಜನಿಕರ ಕೆಲಸ ಕಾರ್ಯ ಮಾಡಿ: ಶಾಸಕ ಎಲ್.ನಾಗೇಂದ್ರ ಸೂಚನೆ

ಮೈಸೂರಿನ ವಿವಿ ಮೊಹಲ್ಲಾದ ಮೈಸೂರು ಮಹಾನಗರ ಪಾಲಿಕೆ ಆಶ್ರಯ ಯೋಜನೆಯ ಶಾಖೆಗೆ ಬುಧವಾರ ದಿಢೀರ್ ಭೇಟಿ ನೀಡಿ ಪರಿಶೀಲಿಸಿದ ಶಾಸಕ ಎಲ್.ನಾಗೇಂದ್ರ, ಮಧ್ಯವರ್ತಿಗಳಿಗೆ ಅವಕಾಶ ನೀಡದೇ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಶೀಘ್ರ ಮಾಡಿಕೊಡುವಂತೆ ಶಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ತಮ್ಮ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆಶ್ರಯ ಯೋಜನೆ ಕೆಲಸ–ಕಾರ್ಯಗಳ ಪ್ರಗತಿ, ಹಕ್ಕು ಖುಲಾಸೆ ಪತ್ರ ವಿತರಣೆ, ಕಂದಾಯ ನಿವೇಶಗಳ ಮಾಲೀಕರಿಗೆ ಹಕ್ಕುಪತ್ರ ವಿತರಣೆ ಕುರಿತಂತೆ ಕೈಗೊಂಡಿರುವ ಕ್ರಮಗಳನ್ನು ಶಾಸಕರು ಪರಿಶೀಲಿಸಿದರು. ಇದೇ ವೇಳೆ ಹಾಜರಿದ್ದ ಸಾರ್ವಜನಿಕರ ಕುಂದು ಕೊರತೆಗಳನ್ನು ಶಾಸಕರು ಆಲಿಸಿದರು. ಚಾಮರಾಜ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಸದಸ್ಯರಾದ ಅನೂಜ್ ಸರಸ್ವತ್, ಮಹೇಶ್, ದಿನೇಶ್‌ಗೌಡ ಮತ್ತಿತರರು ಹಾಜರಿದ್ದರು.

ಪ್ಲಾಸ್ಟಿಕ್ ನಿಷೇಧ ಸಂಬಂಧ ವರ್ತಕರು, ಹೋಟೆಲ್ ಮಾಲೀಕರ ಜೊತೆ ಪಾಲಿಕೆ ಅಧಿಕಾರಿಗಳ ಸಭೆ

- ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಸ್ಪಷ್ಟನೆ
- ಪಾಲಿಕೆಯೊಂದಿಗೆ ಸಹಕರಿಸಲು ಮನವಿ

ಪರಿಸರ ಸಂರಕ್ಷಣೆಗೆ ಪ್ಲಾಸ್ಟಿಕ್ ನಿಷೇಧ ಅನಿವಾರ್ಯ

ಮೈಸೂರು, ಆ.3(ಎಂಟಿವೈ)– ಪರಿಸರ ಸಂರಕ್ಷಣೆ ದೃಷ್ಟಿಯಿಂದ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಏಕ ಬಳಕೆಗೆ ಪ್ಲಾಸ್ಟಿಕ್ ಬಳಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಪ್ಲಾಸ್ಟಿಕ್ ಬಳಕೆ ಮತ್ತು ಮಾರಾಟ ನಿಷೇಧ ಸಂಬಂಧ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವರ್ತಕರು, ಹೋಟೆಲ್ ಮಾಲೀಕರೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಮಿತಿ ಮೀರಿದ ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಒಂದೇ ಬಾರಿ ಬಳಸುವಂತಹ ಪ್ಲಾಸ್ಟಿಕ್ ಬಳಕೆ ನಿಷೇಧಿಸಿ, ಆದೇಶ ಹೊರಡಿಸಿದೆ. ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಪಾಲಿಕೆ ಉದ್ದೇಶಿಸಿದೆ. ವರ್ತಕರು, ಹೋಟೆಲ್ ಮಾಲೀಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಏಕ ಬಳಕೆ ಪ್ಲಾಸ್ಟಿಕ್ ಅನ್ನು ದೇಶದಾದ್ಯಂತ ನಿಷೇಧಿಸಲಾಗಿದೆ. ಅಲ್ಲದೇ ಬಳಕೆ ಮತ್ತು ಮಾರಾಟವನ್ನು ನಿಷೇಧಿಸಲಾಗಿದೆ. ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದರೆ ಅಥವಾ ಕಸದ ರೂಪದಲ್ಲಿ ಬಿಸಾಡುವ ವಾಣಿಜ್ಯ ಮಳಿಗೆ ಮಾಲೀಕರು, ಸಾರ್ವಜನಿಕರು ಹಾಗೂ ನಿವಾಸಿಗಳಿಗೂ ದಂಡ ವಿಧಿಸಲು ಅವಕಾಶವಿದೆ. ಉತ್ಪಾದಕರಿಗೆ 500 ರೂ.ನಿಂದ 1 ಲಕ್ಷ ರೂ. ವರೆಗೂ ದಂಡ ವಿಧಿಸಬಹುದು.

ಮಾರಾಟಗಾರರಿಗೆ 3ರಿಂದ 10 ಸಾವಿರ ರೂ. ದಂಡದೊಂದಿಗೆ 5 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಆದ್ದರಿಂದ ಪ್ಲಾಸ್ಟಿಕ್ ನಿಷೇಧಕ್ಕೆ ಎಲ್ಲರೂ ಸಹಕಾರ ನೀಡಬೇಕು. ಈಗಾಗಲೇ 1350 ಕೆಜಿ ಪ್ಲಾಸ್ಟಿಕ್ ವಶಕ್ಕೆ ಪಡೆದು 12 ಲಕ್ಷ ರೂ. ದಂಡ ಸಂಗ್ರಹಿಸಲಾಗಿದೆ. ದಂಡ ಸಂಗ್ರಹಿಸುವುದು ಪಾಲಿಕೆ ಉದ್ದೇಶವಲ್ಲ. ಪರಿಸರ ಮತ್ತು ಮಣ್ಣಿಗೆ ಹಾನಿಕಾರವಾಗಿರುವ ವಸ್ತುಗಳನ್ನು ನಿಯಂತ್ರಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಮೊದಲ ಬಾರಿಗೆ ವರ್ತಕರಿಗೆ ದಂಡ ವಿಧಿಸುತ್ತಿಲ್ಲ. ಬರೀ ಸೂಚನೆ ಕೊಡುತ್ತೇವೆ. ಎರಡನೇ ಬಾರಿ ದಂಡ ವಿಧಿಸುತ್ತೇವೆ. ಮೂರನೇ ಸಲ ಪರವಾನಗಿ ರದ್ದು ಮಾಡಲಾಗುತ್ತದೆ. ಇದಕ್ಕೆಲ್ಲಾ ವರ್ತಕರು ಅವಕಾಶ ಕೊಡಬಾರದು. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಈಗಾಗಲೇ ಆಲೋಚಿಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಎಡಿಸಿ ರೂಪಾ, ಪರಿಸರ ಮಾಲಿನ್ಯ ಮಂಡಳಿಯ ಕನ್ಸಲ್ಟೆಂಟ್ ವಿಜಯ್ ಕುಮಾರ್, ಪಾಲಿಕೆಯ ಹೆಲ್ತ್ ಇನ್ಸ್‌ಪೆಕ್ಟರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಭೆಯಲ್ಲಿ ಜಾಗೃತಿ: ಸುದ್ದಿಗೋಷ್ಠಿಗೂ ಮುನ್ನ ವರ್ತಕರು, ಹೋಟೆಲ್ ಉದ್ಯಮಿಗಳೊಂದಿಗೆ ನಡೆದ ಸಭೆಯಲ್ಲಿ ಯಾವ ಬಗೆಯ ಪ್ಲಾಸ್ಟಿಕ್ ನಿಷೇಧಿಸಲಾಗಿದೆ, ಯಾವುದನ್ನು ಬಳಸಬಹುದು ಎಂದು ಜಾಗೃತಿ ಮೂಡಿಸಲಾಯಿತು. ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಪೇಪರ್ ಕವರ್ ಬಳಸುವಂತೆಯೂ ಸಲಹೆ ನೀಡಲಾಯಿತು.



ಮೈಸೂರು ಪಾಲಿಕೆ ಕಚೇರಿಯಲ್ಲಿ ವರ್ತಕರು ಹಾಗೂ ಹೋಟೆಲ್ ಉದ್ಯಮಿಗಳೊಂದಿಗೆ ನಡೆದ ಸಭೆಯಲ್ಲಿ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಬಳಸಬಹುದಾದ ಹಾಗೂ ನಿಷೇಧಿಸಿರುವ ಪ್ಲಾಸ್ಟಿಕ್ ಬಗ್ಗೆ ಅರಿವು ಮೂಡಿಸಿದರು. ಚಿತ್ರದಲ್ಲಿ ಪಾಲಿಕೆ ಎಡಿಸಿ ರೂಪಾ, ಪರಿಸರ ಮಾಲಿನ್ಯ ಮಂಡಳಿಯ ಕನ್ಸಲ್ಟೆಂಟ್ ವಿಜಯ್ ಕುಮಾರ್ ಇನ್ನಿತರರನ್ನು ಕಾಣಬಹುದು.

ಅರ್ಥಪೂರ್ಣವಾಗಿ ಸ್ವಾತಂತ್ರ್ಯೋತ್ಸವ ಆಚರಣೆ



ಮೈಸೂರು, ಆ.3– ಕಳೆದ ಎರಡು ವರ್ಷಗಳು ಕೊರೊನಾ ಹಾವಳಿ ಹಿನ್ನೆಲೆಯಿಂದ ಸರಳವಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗಿತ್ತು. ಈ ಬಾರಿ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಗುವುದೆಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರು ತಿಳಿಸಿದರು ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಡಳಿತ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಬನ್ನಿಮಂಟಪದಲ್ಲಿ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರು ಧ್ವಜಾರೋಹಣ ನೆರವೇರಿಸುವರು. ಪೊಲೀಸ್ ಇಲಾಖೆಯಿಂದ ಆಕರ್ಷಕ ಪಥ ಸಂಚಲನ ಹಾಗೂ ಧ್ವಜ ವಂದನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ. ಬಿ.ಎಸ್. ಮಂಜುನಾಥ್‌ಸ್ವಾಮಿ ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆ ಅರ್ಥಪೂರ್ಣ ಆಚರಣೆಗೆ ವಿವಿಧ ಸಮಿತಿಗಳಾದ ಪರೇಡ್ ಮತ್ತು ಸಾಂಸ್ಕೃತಿಕ ಉಪಸಮಿತಿ, ಸಾರಿಗೆ ಉಪಸಮಿತಿ, ಸ್ವಾಗತ ಸಮಿತಿ, ಬಹುಮಾನ ಆಯ್ಕೆ ಸಮಿತಿ, ಸನ್ಮಾನ ಉಪಸಮಿತಿ, ಪ್ರಚಾರ ಸಮಿತಿಗಳನ್ನು ರಚಿಸಲಾಗಿದೆ ಈ ಬಾರಿಯೂ ಪ್ಲಾಸ್ಟಿಕ್ ಧ್ವಜಗಳನ್ನು ನಿಷೇಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.08.2022 ಗುರುವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಸಪ್ತಮೀ, ನಕ್ಷತ್ರ : ಚಿತ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಸಂಪೂರ್ಣ ಋಗ್ವೇದ ಪುಷ್ಪಮಾಲಾ ಪಾರಾಯಣ ಪರಿಸಮಾಪ್ತಿ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.
- **ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್, ಮೈಸೂರು ವಲಯ :** ಕೆಎಸ್‌ಸಿಎ ಟಿ–20 ಕ್ರಿಕೆಟ್ ಟೂರ್ನಮೆಂಟ್ ಮಹಾರಾಜ ಟ್ರೋಫಿಗೆ ಚಾಲನೆ, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಕಿಚ್ಚ ಸುದೀಪ್, ಮುಖ್ಯ ಅತಿಥಿಗಳು : ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಖಜಾಂಚಿ ವಿನಯ್ ಮೃತ್ಯುಂಜಯ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10ಕ್ಕೆ.
- **ರಾಗ ಮ್ಯೂಸಿಕ್ ಅಕಾಡೆಮಿ:** ಶ್ರೀಮದ್ ಭಾಗವತ ಸಪ್ತಾಹ, ವಿದ್ವಾನ್ ಮಾನಸ ನಯನ ಅವರಿಂದ ಹಾಡುಗಾರಿಕೆ, ವಿದ್ವಾನ್ ಎಂ. ಕೇಶವ್–ವಯೋಲಿನ್, ವಿದ್ವಾನ್ ಸಾಯಿ ಶಿವು ಲಕ್ಷ್ಮೀ ಕೇಶವ್ – ಮೃದಂಗ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಜೈ ಭುವನೇಶ್ವರಿ ಕನ್ನಡ ಸಂಘ ಕುವೆಂಪು ವೃತ್ತ :** ಶ್ರೀ ಬಲಮುರಿ ಗಣಪತಿ ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಶ್ರೀ ಪ್ರಸನ್ನ ನವಗ್ರಹ ದೇವತೆಗಳಿಗೆ ನ್ಯಾಸಗಳು ಅವಾಹನ, ದೇವಾಂತ ಪ್ರಾಣಪ್ರತಿಷ್ಠೆ ಪ್ರಧಾನ ಹೋಮ, ಬೆಳಗ್ಗೆ 8.30ಕ್ಕೆ ಮಹಾಪೂರ್ಣಾಹುತಿ, ಕುಂಭಾಭಿಷೇಕ, ನಿರೀಕ್ಷಣ, ಮಹಾನೈವೇದ್ಯ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನದ ಆವರಣ, ರಾಜೀವ್‌ನಗರ.
- **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.
- **ರಾಘವೇಂದ್ರಸ್ವಾಮಿ ಮಠ :** ಪಂಡಿತ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ರಾಮಾಚಾರಿತ್ರ್ಯ ಮಂಜರಿಯ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 6.30 ರಿಂದ.
- **ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್ :** ಪದಗ್ರಹಣ ಸಮಾರಂಭ, ಪದಗ್ರಹಣ ಅಧಿಕಾರಿ : ಎಸ್. ವಾಸುದೇವನ್, ಗೌರವ ಅತಿಥಿಗಳು : ಡಾ. ಬಿ. ಚಂದ್ರ, ಜಿ. ನಾರಾಯಣ್‌ಲಾಲ್, ಹೆಚ್.ಎಂ. ಹರೀಶ್, ಸ್ಥಳ: ರೋಟರಿ ವೆಸ್ಟ್ ಹಾಲ್, ಸರಸ್ವತಿಪುರಂ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು

- **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಸುರಂಗ ಕವಿಕೃತ ತ್ರಿಷಷ್ಟಿ ಪುರಾತನ ಚಾರಿತ್ರಂ ಕುರಿತು ಪ್ರವಚನ, ಡಿ.ಎಂ.ಸಿದ್ದಲಿಂಗಸ್ವಾಮಿ ಅವರಿಂದ ವಾಚನ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಬಾಂಬೆ ಸಹೋದರಿಯರು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.30 ದೇವರನಾಮ–ಪುಷ್ಪಾ ವಿ.ಶಂಕರ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ– ಜಿ.ಪುಷ್ಪಲತಾ, 4.30 ಸಂಧ್ಯಾರಾಗ–ಹಿರಿಯ ರಂಗ ಕಲಾವಿದೆ ಹರಿಪ್ರಸಾದ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ– ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ರತ್ನಮ್ಮ ಹಾಗೂ ಚಂದ್ರಶೇಖರ ಮೂರ್ತಿ ಅವರೊಂದಿಗೆ ಸಂದರ್ಶನ, 9.00 ಯುವವಾಣಿ– ಬಟ್ಟೆ ಬ್ಯಾಗ್ ತಯಾರಕ ಹಾಗೂ ಗ್ರಾಮೀಣ ಕರಕುಶಲ ಕಲಾವಿದ ಬಿ.ವಿ.ಅಶೋಕ್ ಕುಮಾರ್ ಅವರೊಂದಿಗೆ ಮಾತುಕತೆ, 10.00 ನಾಟಕ–ನೆನಪು ಸಾಯುವುದಿಲ್ಲ. ರಚನೆ– ವಸುಮತಿ ಉಡುಪ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ



ದಾವಣಗೆರೆಯಲ್ಲಿ ಅದ್ದೂರಿ ಸಿದ್ದರಾಮೋತ್ಸವ

ದಶದಿಕ್ಕುಗಳಿಂದ ಹರಿದುಬಂದ ಜನಸಾಗರ

ಒಂದನೇ ಪುಟದಿಂದ

500ಕ್ಕೂ ಹೆಚ್ಚು ಜಾನಪದ ಕಲಾ ತಂಡಗಳು ಕಾರ್ಯಕರ್ತರನ್ನು ರಂಜಿಸಿದವು. ಸಿದ್ದರಾಮಯ್ಯ ವೇದಿಕೆಗೆ ಆಗಮಿಸುವ ಮುನ್ನ ವೇದಿಕೆ ಮೇಲೆ ಜಾನಪದ ಕಲಾ ತಂಡಗಳು ನೆರೆದಿದ್ದ ಅಭಿಮಾನಿಗಳನ್ನು ರಂಜಿಸಿದವು. ಸಿದ್ದರಾಮಯ್ಯನವರ ಜನಪರ ಕಾರ್ಯಕ್ರಮಗಳ ಹೆಸರಿನಲ್ಲೇ ಗೀತೆಗಳನ್ನು ರಚಿಸಲಾಗಿದ್ದು, ಅವುಗಳನ್ನು ಇಂಪಾದ ಧ್ವನಿಯಲ್ಲಿ ಗಾಯಕರು ಹಾಡುತ್ತಿದ್ದರೆ, ಅದಕ್ಕೆ ತಕ್ಕಂತೆ ನೃತ್ಯ ಪ್ರದರ್ಶನವೂ ನಡೆಯಿತು. ಸಿದ್ದರಾಮಯ್ಯ ಗುಣಗಾನ ಮಾಡಿದ ಹಾಡುಗಳು ಮೊಳಗುತ್ತಿದ್ದರೆ, ನೆರೆದಿದ್ದ ಅಭಿಮಾನಿಗಳು ಸಿದ್ದರಾಮಯ್ಯ ಅವರಿಗೆ ಜಯಕಾರ ಕೂಗುತ್ತಾ, ನೃತ್ಯ ಮಾಡುತ್ತಿದ್ದ ದೃಶ್ಯಗಳು ಕಂಡು ಬಂದವು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದಿದ್ದ ಹಲವಾರು ಭಾಗ್ಯಗಳನ್ನು ಬಿಂಬಿಸುವಂತಹ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಅದಕ್ಕಾಗಿಯೇ ಬೃಹತ್ ಪೆಂಡಾಲ್ ನಿರ್ಮಿಸಲಾಗಿತ್ತು. ಈ ಸ್ಥಳದಲ್ಲೂ ಕೂಡ ಯೋಜನೆಗಳ ಹೆಸರಲ್ಲಿ ಸಿದ್ದರಾಮಯ್ಯ ಹೆಸರು ಸೇರಿಸಿ ರಚಿಸಿದ್ದ ಗೀತೆಗಳು ಮೊಳಗುತ್ತಿದ್ದವು.

ಸಮಾವೇಶದಲ್ಲಿ ಡಿ.ಕೆ.ಶಿವಕುಮಾರ್, ರಾಹುಲ್ ಗಾಂಧಿ ಅವರುಗಳು ಸಿದ್ದರಾಮಯ್ಯನವರನ್ನು ಅಭಿನಂದಿಸಿದಾಗ ಜಯಕಾರ ಹಾಗೂ ಕರಘೋಷ ಮುಗಿಲು ಮುಟ್ಟಿತು. ಸಮಾವೇಶದ ಕೊನೆಯಲ್ಲಿ ಸಿದ್ದರಾಮಯ್ಯ ಮಾತನಾಡಲು ಮೈಕ್ ಬಳಿ ಬಂದಾಗ ಕೆಲ ನಿಮಿಷಗಳ ಕಾಲ ಜಯಘೋಷಗಳು ಮೊಳಗಿದವು. ಕೊನೆಗೆ ಸಿದ್ದರಾಮಯ್ಯನವರು ಸಾಕು-ಸಾಕು ಎಂದು ಹೇಳಿದರು. ಭಾಷಣ ಆರಂಭಿಸುತ್ತಲೇ ಲಕ್ಷಾಂತರ ಜನ ಸೇರಿದ್ದ ಸ್ಥಳದಲ್ಲಿ ನಿಶ್ಯಬ್ದ ಮನೆ ಮಾಡಿದ್ದು, ಸಿದ್ದರಾಮಯ್ಯನವರ ಮಾತಿಗೆ ಅವರ ಅಭಿಮಾನಿಗಳು ಹ್ಯಾಗೆ ಶಿಸ್ತುಬದ್ಧವಾಗಿ ನಡೆದುಕೊಳ್ಳುತ್ತಾರೆ ಎಂಬುದಕ್ಕೆ ಸಾಕ್ಷಿಯಂತಿತ್ತು.

ವಿವಿಐಪಿಗಳು ವಿಶ್ರಾಂತಿ ಪಡೆಯಲೆಂದೇ ವೇದಿಕೆ ಸನಿಹ ಮೂರು ಕ್ಯಾರವಾನ್‌ಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಪುನೀತ್ ರಾಜ್‌ಕುಮಾರ್ ಅವರಿಗಾಗಿ ತಯಾರಿಸಿದ್ದ ಕ್ಯಾರವಾನ್ ಅನ್ನು ರಾಹುಲ್ ಗಾಂಧಿಯವರಿಗೆ ಮೀಸಲಿಡಲಾಗಿತ್ತು.

ಸಾಗರದೋಪಾದಿಯಲ್ಲಿ ಆಗಮಿಸಿದ ಅಭಿಮಾನಿಗಳು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಅಮೃತ ಮಹೋತ್ಸವವನ್ನು ಬೆಣ್ಣೆ ನಗರಿ ದಾವಣಗೆರೆಯಲ್ಲಿ ಐತಿಹಾಸಿಕ ಸಮಾವೇಶವಾಗಿ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಇಂದು ಆಚರಿಸಿದರು. ಸಿದ್ದರಾಮೋತ್ಸವದಲ್ಲಿ ಭಾಗವಹಿಸಲು ಮಂಗಳವಾರದಿಂದಲೇ ದಶ ದಿಕ್ಕುಗಳಿಂದಲೂ ಅಭಿಮಾನಿಗಳು ದಾವಣಗೆರೆಯತ್ತ ಹರಿದು ಬಂದರು. ರಾಜ್ಯದ



ಎಲ್ಲಾ ಜಿಲ್ಲೆಗಳಿಂದಲೂ ಸಾಗರದೋಪಾದಿಯಲ್ಲಿ ಸಿದ್ದರಾಮಯ್ಯ ಅಭಿಮಾನಿಗಳು ದಾವಣಗೆರೆಯತ್ತ ಬಂದಿದ್ದು, ಮಂಗಳವಾರ ರಾತ್ರಿ ಬೆಂಗಳೂರು-ಪುಣೆ ಹೆದ್ದಾರಿಯ ಎರಡೂ ಬದಿಗಳಲ್ಲೂ ಸುಮಾರು 6 ಕಿ.ಮೀ.ಗೂ ಹೆಚ್ಚು ವಾಹನ ದಟ್ಟಣೆ ಉಂಟಾಗಿತ್ತು. ಇದರಿಂದಾಗಿ ದಿನ ನಿತ್ಯ ಸಂಚರಿಸುವ ಬಸ್‌ಗಳು ಹಾಗೂ ಇತರ ವಾಹನಗಳ ಸಂಚಾರ ದುಸ್ತರವಾಯಿತು. ಪೊಲೀಸರಿಗೆ ಸಂಚಾರ ನಿರ್ವಹಣೆ ಸವಾಲಾಗಿ ಪರಿಣಮಿಸಿತು.

ಕಾಂಗ್ರೆಸ್‌ನ ಹಿರಿಯ ಮುಖಂಡರು ಹುಬ್ಬಳ್ಳಿಯ ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಹೂಡಿದ್ದರು. ಅವರೆಲ್ಲರೂ ಇಂದು ಬೆಳಗ್ಗೆ 6 ಗಂಟೆ ನಂತರ ದಾವಣಗೆರೆಗೆ ಹೊರಡಲು ಯೋಜಿಸಿದ್ದರು. ಆದರೆ ವಾಹನ ದಟ್ಟಣೆಯನ್ನು ಗಮನಿಸಿದ ಪೊಲೀಸ್ ಅಧಿಕಾರಿಗಳು, ಬೆಳಗ್ಗೆ 6 ಗಂಟೆಗೆ ಹುಬ್ಬಳ್ಳಿಯಿಂದ ಹೊರಟರೆ, ನಿಗದಿತ ಸಮಯಕ್ಕೆ ದಾವಣಗೆರೆ ತಲುಪಲು ಸಾಧ್ಯವಾಗದು ಎಂದು ಸಂದೇಶ ರವಾನಿಸಿದ್ದರಿಂದ ಮಧ್ಯ ರಾತ್ರಿಯೇ ಕಾಂಗ್ರೆಸ್ ಮುಖಂಡರೂ ಕೂಡ ದಾವಣಗೆರೆಯತ್ತ ಪ್ರಯಾಣ ಬೆಳೆಸಿದರು. ಈ ಮುಖಂಡರಿಗೂ ವಾಹನ ದಟ್ಟಣೆಯ ಬಿಸಿ ತಟ್ಟಿತು. ಬೆಂಗಳೂರು-ಪುಣೆ ಹೆದ್ದಾರಿ, ಎನ್.ಹೆಚ್.48ರ ಬೈಪಾಸ್ ರಸ್ತೆಗೆ ಹೊಂದಿಕೊಂಡಂತಿರುವ ಶಾಮನೂರು ಪ್ಯಾಲೇಸ್ ಗ್ರೌಂಡ್‌ನಲ್ಲಿ ಸಿದ್ದರಾಮೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಾಹನ ನಿಲುಗಡೆಗಾಗಿಯೇ ಸುಮಾರು 50 ಎಕರೆ ಪ್ರದೇಶವನ್ನು ಸಜ್ಜುಗೊಳಿಸಲಾಗಿತ್ತು. ಸಾಗರದೋಪಾದಿ ವಾಹನಗಳು ಹರಿದು ಬಂದ ಪರಿಣಾಮ ಪಾರ್ಕಿಂಗ್ ಪ್ರದೇಶ ಭರ್ತಿಯಾಗಿ ಹೆದ್ದಾರಿಯ ಇಕ್ಕೆಲಗಳಲ್ಲೂ ವಾಹನಗಳನ್ನು ನಿಲ್ಲಿಸಿದ್ದರಿಂದಾಗಿ ಸಮಾವೇಶ ಆರಂಭವಾದ ನಂತರವೂ ಕೂಡ ದಿನ ನಿತ್ಯ ಓಡಾಡುವ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿ ವಾಹನಗಳು ನಿಧಾನಗತಿಯಲ್ಲಿ ಚಲಿಸಿದ ಪರಿಣಾಮ ಕಿ.ಮೀ.ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲಬೇಕಾಯಿತು.

ಸಮಾವೇಶಕ್ಕೆ ಆಗಮಿಸಿದ್ದ ಕಾರ್ಯಕರ್ತರು ಹಾಗೂ ಅಭಿಮಾನಿಗಳಿಗಾಗಿ ಬೆಳಗಿನ ಉಪಾಹಾರ ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು.

ಲಕ್ಷಾಂತರ ಮಂದಿ ಆಗಮಿಸುವ ನಿರೀಕ್ಷೆ ಇದ್ದುದ್ದರಿಂದ ಆಹಾರ ಪೂರೈಕೆಗಾಗಿ 750 ಕೌಂಟರ್‌ಗಳನ್ನು ಸ್ಥಾಪಿಸಲಾಗಿತ್ತು. ಎಲ್ಲಾ ಕೌಂಟರ್‌ಗಳ ಮುಂಭಾಗವೂ ಮರದ ಬ್ಯಾರಿಕೇಡ್‌ಗಳನ್ನು ನಿರ್ಮಿಸಿ, ಯುವ ಕಾಂಗ್ರೆಸ್ ಕಾರ್ಯಕರ್ತರು ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಿದರಾದರೂ, ಆಹಾರ ಪಡೆಯಲು ನೂಕು-ನುಗ್ಗಲು ಉಂಟಾಯಿತು.

ಮಧ್ಯಾಹ್ನದ ಊಟಕ್ಕೆ 6 ಲಕ್ಷದಷ್ಟು ಮೈಸೂರುಪಾಕ್ ತಯಾರಿಸಲಾಗಿತ್ತಾದರೂ, ಬಹುತೇಕರಿಂದ ಮೈಸೂರುಪಾಕ್ ದೊರೆಯಲಿಲ್ಲ ಎಂಬ ಮಾತುಗಳು ಕೇಳಿಬಂದವು. ಸಮಾವೇಶ ಮುಗಿದ ನಂತರವೂ ಹಲವು ಗಂಟೆಗಳ ಕಾಲ ಬೆಂಗಳೂರು-ಪುಣೆ ರಸ್ತೆಯಲ್ಲಿ ವಾಹನ ದಟ್ಟಣೆ ಕಂಡುಬಂತು.

ಮುರುಘಾ ಶ್ರೀ ಮಠದಲ್ಲಿ ರಾಹುಲ್ ಗಾಂಧಿಗೆ 'ಲಿಂಗದೀಕ್ಷೆ'



ಚಿತ್ರದುರ್ಗ, ಆ.3-ದಾವಣಗೆರೆಯಲ್ಲಿ ಇಂದು ನಡೆದ ಸಿದ್ದರಾಮಯ್ಯನವರ ಹುಟ್ಟು ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದ ಎಐಸಿಸಿ ನಾಯಕ ರಾಹುಲ್ ಗಾಂಧಿ ಚಿತ್ರದುರ್ಗ ಮುರುಘಾ ಮಠಕ್ಕೆ ಭೇಟಿ ನೀಡಿ, ಶ್ರೀ ಶಿವಮೂರ್ತಿ ಮುರುಘ ಶ್ರೀಗಳಿಂದ ಲಿಂಗ ದೀಕ್ಷೆ ಪಡೆದರು.

ಸಮಾವೇಶಕ್ಕೂ ಮುನ್ನ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮುರುಘಾ ಮಠಕ್ಕೆ ಭೇಟಿ ನೀಡಿದ ರಾಹುಲ್ ಗಾಂಧಿ, ಅಲ್ಲಿನ ಮೂಲ ಗದ್ದುಗೆಗೆ ನಮಿಸಿದರು. ನಂತರ ಶ್ರೀಗಳ ಬಳಿ ಬಸವ ತತ್ವದ ಬಗ್ಗೆ ವಿವರಗಳನ್ನು ಪಡೆದರು. ಮುರುಘಾ ಶ್ರೀಗಳು ಸೇರಿದಂತೆ ನಾನಾ ಮಠಗಳ ಶ್ರೀಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ರಾಹುಲ್ ಗಾಂಧಿಯವರಿಗೆ ಲಿಂಗ ಪೂಜೆ ಹಾಗೂ ಲಿಂಗಾಯತ ಧರ್ಮದ ಮಹತ್ವವನ್ನು ವಿವರಿಸಿದ ಶ್ರೀಗಳು, ಲಿಂಗ ಧಾರಣೆ ಮಾಡಿದರು. ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ ಖಂಡ್ರೆ, ಸಲೀಂ ಅಹಮದ್, ಸಾಮಾಜಿಕ ನ್ಯಾಯ ಘಟಕದ ಅಧ್ಯಕ್ಷ ಸಿ.ಎನ್.ದ್ವಾರಕಾನಾಥ್ ಉಪಸ್ಥಿತರಿದ್ದರು.

'ಮೈಸೂರು ಹುಲಿಯಾ', 'ಸೆಲ್ಫ್ ಮೇಡ್ ಸಿದ್ದಣ್ಣ' ಹಾಡು ರಿಲೀಸ್

ದಾವಣಗೆರೆ, ಆ.3- ದಾವಣಗೆರೆಯಲ್ಲಿ ಇಂದು ನಡೆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಅವರಿಗಾಗಿ ತಯಾರಾದ ಎರಡು ಹಾಡುಗಳನ್ನು ರಿಲೀಸ್ ಮಾಡಲಾಯಿತು. ಒಂದು ಹಾಡಿಗೆ 'ಮೈಸೂರು ಹುಲಿಯಾ' ಎಂದು ಹೆಸರಿಟ್ಟಿದ್ದರೆ, ಮತ್ತೊಂದು ಗೀತೆಗೆ 'ಸೆಲ್ಫ್ ಮೇಡ್ ಸಿದ್ದಣ್ಣ' ಎಂದು ಶೀರ್ಷಿಕೆ ಇಡಲಾಗಿತ್ತು. ಈ ಎರಡು ಹಾಡುಗಳನ್ನೂ ಜೇಮ್ಸ್ ಚಿತ್ರದ ನಿರ್ದೇಶಕ ಚೇತನ್ ಕುಮಾರ್ ಬರೆದಿದ್ದಾರೆ. 'ಸಲಗದ ಟಿಣಿಂಗ್ ಮಿಣಿಂಗ್' ಹಾಡು ಹೇಳುವ ಮೂಲಕ ಖ್ಯಾತಿಯಾಗಿರುವ ಗಿರಿಜಾ ಸಿದ್ಧಿ ಒಂದು ಗೀತೆಯನ್ನು ಹಾಡಿದ್ದು, ಮತ್ತೊಂದು ಹಾಡನ್ನು ಚುಟುಚುಟು ಹಾಡಿನ ಖ್ಯಾತಿಯ ರವೀಂದ್ರ ಸೊರಗಾವಿ ಹಾಡಿದ್ದಾರೆ. ಈ ಎರಡೂ ಹಾಡುಗಳು ಸಿದ್ಧರಾಮಯ್ಯ ಅವರ ಜೀವನ ಮತ್ತು ಹೋರಾಟದ ಗೀತೆಗಳಾಗಿದ್ದು, ವೀರ ಸಮರ್ಥ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿ ಬಂದಿವೆ.

7ನೇ ವರ್ಷದ ಪುಣ್ಯಸ್ಮರಣೆ



ರವಿಕುಮಾರ್. ಆರ್
ಮಾತೃ ಹಾರ್ಡ್‌ವೇರ್

ನಿಧನ: 4.8.2015

ದು:ಖತಪ್ತರು
ಪತ್ನಿ, ಮಗ ಹಾಗೂ ಕುಟುಂಬ ವರ್ಗದವರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ದಿನಾ ಸಕ್ಕರೆ ಡಬ್ಬ ಓಪನ್ ಮಾಡಿ ಯಾಕೆ ನೋಡ್ತೀರಾ?
ಗಂಡ : ಡಾಕ್ಟ್ರು ಪ್ರತಿದಿನ ಶುಗರ್ ಚೆಕ್ ಮಾಡಿ ಅಂತ ಹೇಳಿದ್ದಾರೆ. ಅದಕ್ಕೆ!

ಮೈಸೂರು ಮಿತ್ರ
ಗುರುವಾರ, 4 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

'ಮುಗ್ಧತೆ' ಹಾಗೂ 'ಆತ್ಮ ವಿಶ್ವಾಸ' ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ. –ಮಾರ್ಕ್‌ಟ್ವೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ರೀತಿ ತಪ್ಪಿದರೂ ನೀತಿ ತಪ್ಪಬಾರದು

ನಿಮ್ಮ ಪತ್ರಗಳು

ವಿಜಯನಗರ 4ನೇ ಹಂತದಲ್ಲಿ ಕುಡಿಯುವ ನೀರಿಗೂ ಬರ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ, ಅತ್ಯಂತ ದೊಡ್ಡ ಬಡಾವಣೆ ಎಂಬ ಹೆಗ್ಗಳಿಕೆ. ಆದರೆ ಕುಡಿಯುವ ನೀರಿಗೂ ಈ ಬಡಾವಣೆಯಲ್ಲಿ ಬರ. ನಮ್ಮ ಮನೆ ಇರುವುದು ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿ. ಎರಡು ದಿನಕ್ಕೊಮ್ಮೆ ರಾತ್ರಿ 3 ಗಂಟೆಯಿಂದ ಬೆಳಗ್ಗೆ 6 ರವರೆಗೆ ನೀರು ಬಿಡುತ್ತಾರೆ. ಅಂದರೆ 3 ಗಂಟೆ ಮಾತ್ರ ನೀರು ಬರುತ್ತದೆ. ಅರ್ಧ ಸಂಪೂ ತುಂಬುವುದಿಲ್ಲ. ಕೆಲವೊಮ್ಮೆ 2ನೇ ದಿನವು ನೀರು ಬಿಡುವುದಿಲ್ಲ. ವಾಟರ್‌ಮೆನ್ ಕೇಳಿದರೆ 2 ಬೋರ್‌ವೆಲ್ ಮಾತ್ರ ಇರುವುದು ನೀರು ಸಾಕಾಗುವುದಿಲ್ಲ ಎನ್ನುತ್ತಾರೆ. ಬಡಾವಣೆಗೆ ನೀರು ಸಾಕಾಗುವುದಿಲ್ಲ ಎನ್ನುವುದಾದರೆ ಬಡಾವಣೆಯ ಅವಶ್ಯಕತೆಗೆ ತಕ್ಕಂತೆ ಬೋರ್‌ವೆಲ್ ಆದರೂ ತೆಗೆಸಿ ನೀರು ಪೂರೈಸಿ, ನೀವು ಕಬಿನಿ ನೀರು ಕೊಡುವವರೆಗಾದರೂ ಬೋರ್‌ವೆಲ್ ನೀರನ್ನಾದರೂ ಕೊಡಿ. ಬೋರ್‌ವೆಲ್ ಕೊರೆಸಲು ಪ್ರಾಧಿಕಾರಕ್ಕೆ ಕಷ್ಟವೇ, ವಿಜಯನಗರ 4ನೇ ಹಂತ ಪ್ರಾಧಿಕಾರಕ್ಕೆ ಆದಾಯ ನೀಡಿಲ್ಲವೇ. ಸಮುದ್ರದಲ್ಲಿ ಉಪ್ಪಿಗೆ ಬರವೇ, ನಮಗೂ ಟ್ಯಾಂಕರ್ ನೀರು ಹಾಕಿಸಿ ಸಾಕಾಗಿ ಹೋಗಿದೆ. ನಾನು ಏರಿಯಾ ಇಂಜಿನಿಯರ್ ಗಮನಕ್ಕೂ ತಂದೆ, ಏನೂ ಪ್ರಯೋಜನವಾಗಿಲ್ಲ. ದೊಡ್ಡ ಬಡಾವಣೆ ಎಂಬ ಪ್ರತಿಷ್ಠೆಗೆ ಬಿದ್ದು ಈ ಬಡಾವಣೆಗೆ ಬಂದು ನರಕ ಅನುಭವಿಸುವಂತಾಗಿದೆ. ಮೂಲಭೂತ ಸೌಲಭ್ಯ ಕೊಡುವುದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕರ್ತವ್ಯ. ಹೀಗಿರುವಾಗ ಕುಡಿಯುವ ನೀರನ್ನಾದರೂ ಸಮರ್ಪಕವಾಗಿ ಪ್ರತಿದಿನ ನೀಡುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

–ಬಿ.ಜಿ.ರಂಗೇಗೌಡ, ಮೈಸೂರು.

ಆಸ್ಥಾನ್ ವಿದ್ವಾನ್ ಪದವಿ, ಪ್ರಶಸ್ತಿ ಸಂಗೀತಗಾರರಿಗೆ ಮಾತ್ರ ಮೀಸಲೆ?

ಮಾನ್ಯರೆ,

ನಾವು ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ರಾಜ್ಯವನ್ನು ಆಳುತ್ತಿದ್ದ ರಾಜ ಮಹಾರಾಜರನ್ನು ವಿದ್ವತ್ ವಲಯದ – ಕವಿಗಳು, ಪಂಡಿತರು, ತಮ್ಮ ಸ್ವಾರ್ಥ ಸಾಧನೆಗಾಗಿ ಆಯಾಯ ವಲಯದ ರಾಜರನ್ನು ಕುರಿತು 'ನಭೂತೋ ನ ಭವಿಷ್ಯತಿ" – ಎಂಬಂತೆ ಅವರನ್ನು ಹೊಗಳಿ ಆ ರಾಜರ ಕೃಪೆಗೆ ಪಾತ್ರರಾಗಿ ಪಡೆದುಕೊಂಡ ಸೌಲಭ್ಯ, ಪ್ರಶಸ್ತಿ, ಪುರಸ್ಕಾರ ಅಗಣಿತವಾದವು. ಆ ರಾಜರಿಗೆ ಹೊಗಳಿಸಿಕೊಳ್ಳು ವಲ್ಲಿಯೇ ತೃಪ್ತಿ. ಇಂತಹವುಗಳನ್ನು ಎಲ್ಲಾ ರಾಜರ ಕಾಲದಲ್ಲಿಯೂ ಕಾಣಬಹುದು, ಓದಬಹುದು. ಆದರೆ ಆ ರಾಜರುಗಳ ಕಾಲದಲ್ಲಾದ ಉದಾಹರಣೆಗೆ ಚೋಳ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ, ಹೊಯ್ಸಳ, ಅರಸುಗಳ ಕಾಲದಲ್ಲಾದ ಚಿತ್ರ/ಶಿಲ್ಪಾದಿಗಳು ಅಂದು ಮಾತ್ರವಲ್ಲ ಇಂದಿಗೂ ಪ್ರವಾಸೋದ್ಯಮವನ್ನು ಬಲಪಡಿಸುತ್ತಿವೆ. ಆ ರಾಜರ ಹೆಸರನ್ನು ಉಳಿಸಿವೆ, ಉಳಿಸುತ್ತಲೂ ಇವೆ. ಕಲೆ ಶಿಲ್ಪಾದಿಗಳನ್ನು ಮಾಡಿದವರಿಗೆ ದೊರತದ್ದು – ಅಂದಂದಿನ ಕೂಲಿ ಮಾತ್ರ. ಹೆಸರಿನ ದಾಖಲೆಯಂತೂ ಇಲ್ಲವೇ ಇಲ್ಲ.

ಈ ವಿವರಣೆಗೆ ಸಾಕ್ಷಿಯಾಗಿ ನಮ್ಮ ಮೈಸೂರಿನ ಒಡೆಯರ್ ಕಾಲದಲ್ಲಾದ ಅರಮನೆಯೊಳಗಿನ ವೈವಿಧ್ಯಮಯವಾದ –ಚಿತ್ತಾರಗಳನ್ನು, ಕಲ್ಲು, ಮರ, ಲೋಹ ಮತ್ತಿತರ ಮಾಧ್ಯಮಗಳಿಂದಾದ ಕರಕುಶಲಕಲೆಗಳನ್ನು ನೋಡಲು ಜನಸಾಗರ ನಿತ್ಯವೂ ಬರುತ್ತಾ ಇದೆಯೇ ವಿನಃ ಯಾವ ಸಂಗೀತಗಾರರನ್ನು ನೋಡಲು ಬರುತ್ತಿಲ್ಲ.

ಪ್ರವಾಸೋದ್ಯಮದ ಮೂಲಕ ಪ್ರತಿದಿನ – ಲಕ್ಷಗಟ್ಟಲೇ ಹಣ ಶೇಖರಣೆಯಾಗುತ್ತಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗಿದ್ದಾಗ್ಯೂ ರಾಜಪ್ರಭುತ್ವ ಹೋಗಿ – ಪ್ರಜಾಪ್ರಭುತ್ವ ಇರುವ ಕಾಲದಲ್ಲಿಯೂ ಆಸ್ಥಾನ ವಿದ್ವಾನ್ ಪದವಿ/ಪ್ರಶಸ್ತಿ ಸಂಗೀತ ಗಾರರಿಗೆ ಮೀಸಲಿಡಬೇಕೆ? ಈ ವಿಷಯವನ್ನು ಕರ್ನಾಟಕದ ಘನ ಸರ್ಕಾರ ಮರು ಪರಿಷ್ಕರಣೆ ಏಕೆ ಮಾಡಬಾರದು? ಇವೆಲ್ಲವನ್ನು ಸೂಕ್ತ ರೀತಿಯಲ್ಲಿ ಚಿಂತಿಸಿ ಈ ವರ್ಷದಿಂದಲಾದರೂ ಆಸ್ಥಾನ ವಿದ್ವಾನ್ ಪದವಿ/ಪ್ರಶಸ್ತಿಯನ್ನು ದಸರಾ ಸಂದರ್ಭದಲ್ಲಿ ಓರ್ವ ಕಲಾವಿದ ಮತ್ತು ಶಿಲ್ಪಿಗೆ ನೀಡುವಂತಾಗಲಿ ಎಂದು ಕನ್ನಡನಾಡಿನ ಸಮಗ್ರ ಚಿತ್ರ ಮತ್ತು ಶಿಲ್ಪಕಲಾವಿದರ ಪರವಾಗಿ ಕಳಕಳಿಯ ಮನವಿ.

–ಎಲ್. ಶಿವಲಿಂಗ, ಹಿರಿಯ ಕಲಾವಿದ ಮತ್ತು ಶಿಲ್ಪಿ, ಮೈಸೂರು ಆರ್ಟ್ ಗ್ಯಾಲರಿ, ಮೈಸೂರು.

ಬೀಡಾಡಿ ದನ ಕರುಗಳ ಹಾವಳಿ ತಪ್ಪಿಸಿ



ಮಾನ್ಯರೆ,

ಮೈಸೂರಿನ ಎನ್.ಆರ್. ಮೊಹಲ್ಲಾದಿಂದ ಉದಯಗಿರಿ ಪಿ ಅಂಡ್ ಟಿ ಕ್ವಾಟ್ರಸ್‌ಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬೀಡಾಡಿ ದನ ಕರುಗಳ ಹಾವಳಿ ಹೆಚ್ಚಾಗಿದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಅಲ್ಲದೆ ಹಲವು ಅಪಘಾತಗಳು ಸಂಭವಿಸಿವೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಗೋವುಗಳನ್ನು ತೆರವುಗೊಳಿಸಿ ಜನರ ಸುಗಮ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ಜಾಕಿ, ಉದಯಗಿರಿ, ಮೈಸೂರು.

ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಅತ್ಯಂತ ಖಂಡನೀಯ

ಮಾನ್ಯರೆ,

ದೇಶದ ಜನರು ಮೊದಲೇ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಅದರಲ್ಲಿ ಈಗ ಕೇಂದ್ರ ಸರ್ಕಾರ ಹೇಳಿರುವ ಪ್ರಕಾರ ಪ್ಯಾಕಿಂಗ್ ಮಾಡಿರುವ ಪ್ರತಿಯೊಂದು ಆಹಾರ ಪದಾರ್ಥಗಳ ಮೇಲೆ ಶೇ. 5 ರಷ್ಟು ಜಿಎಸ್‌ಟಿ ವಿಧಿಸಿರುವುದು ಖಂಡನೀಯ. ಇದರಿಂದ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರುತ್ತದೆ. ಜೊತೆಗೆ ಬಡ ಜನರಿಗೆ ಕಷ್ಟವಾಗುತ್ತದೆ. ಕೇಂದ್ರ ಸರ್ಕಾರ ಘೋಷಿಸಿರುವ ಆಹಾರ ಪದಾರ್ಥಗಳ ಮೇಲಿನ ಐದು ಪರ್ಸೆಂಟ್ ಜಿಎಸ್‌ಟಿಯನ್ನು ಕೈಬಿಡಬೇಕು. ಬಡಜನರ ಹಿತ ಕಾಪಾಡಬೇಕು.

–ನಿತಿನ್ ಹೆಚ್.ಸಿ., ಮಹಾರಾಜ ಕಾಲೇಜು, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಭಾರತದ ಪ್ರಪ್ರಥಮ ಮಹಿಳಾ ಹೌಸ್ ಸರ್ಜನ್ ಡಾ. ಮುತ್ತುಲಕ್ಷ್ಮಿ ರೆಡ್ಡಿ

ಇನ್ನು ಕೆಲವೇ ದಿನಗಳಲ್ಲಿ ನಾವು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸಲಿದ್ದೇವೆ. ಈ ಆಚರಣೆಗೆ ವಿಶೇಷ ಅರ್ಥ ಬರುವುದು, ಸ್ವತಂತ್ರ ಪೂರ್ವದಲ್ಲೇ ಸಾಮಾಜಿಕ ಅನ್ಯಾಯಗಳ ವಿರುದ್ಧ ಸಮರ ಸಾರಿ ಸ್ವಾತಂತ್ರ್ಯ ಎಂದರೆ ನಿಜವಾದ ಅರ್ಥದಲ್ಲಿ ಈ ಅನ್ಯಾಯಗಳಿಂದ ವಿಮುಕ್ತಿಯನ್ನು ಪಡೆಯುವುದು ಎಂಬ ತತ್ವಕ್ಕೆ ಬದ್ಧರಾಗಿ ಹೋರಾಟದ ಹಾದಿಯನ್ನು ಹಿಡಿದವರ ಸಾಧನೆಗಳನ್ನು ಸ್ಮರಿಸಿ, ಸಂಭ್ರಮಿಸುವುದರ ಮೂಲಕ. ಅವೈಚಾರಿಕ ಕಟ್ಟುಪಾಡುಗಳ ಬಂಧನಗಳಲ್ಲಿ ಮಹಿಳೆಯರನ್ನು ಕಟ್ಟಿ ಹಾಕಿ ಅವರ ಬದುಕನ್ನು ಅರ್ಥಹೀನವಾಗಿಸಿದ್ದ ಸಂಪ್ರದಾಯಗಳ ವಿರುದ್ಧ ದ್ವನಿಯೆತ್ತಿ ಅವುಗಳನ್ನು ಎದುರಿಸಲು ಒಂದು ಶತಮಾನದ ಹಿಂದೆಯೇ ಕಾರ್ಯಪ್ರವೃತ್ತರಾದ ಧೀಮಂತ ಮಹಿಳೆಯೊಬ್ಬರ ಜೀವನ ಗಾಥೆಯನ್ನು ಇಂದಿನ ಅಂಕಣದಲ್ಲಿ ಸೆರೆ ಹಿಡಿದಿಡಲು ಯತ್ನಿಸಲಾಗಿದೆ. ಇಂದಿನ ಆಧುನಿಕ ಯುಗದಲ್ಲಿ ಕೂಡ ಲಿಂಗ ಸಮಾನತೆಯ ಸಂಘರ್ಷಕ್ಕೆ ಸವಾಲನ್ನು ಎಸೆದಿರುವ ಎಲ್ಲ ಮೌಲ್ಯಾಚರಣೆಗಳನ್ನು ಕೊನೆಗೊಳಿಸಲು ಸಾಧ್ಯವಾಗದಿರುವಂಥ ಪರಿಸ್ಥಿತಿ ಇರುವಾಗ ಕಾನೂನು, ಚಳವಳಿ, ಆರೋಗ್ಯ ಸುಧಾರಣೆ, ಬರವಣಿಗೆ, ಭಾಷಣ– ಇವುಗಳೆಲ್ಲದರ ಮೂಲಕ ಸಾಮಾಜಿಕ ಕ್ರಾಂತಿಯನ್ನು ಸಾರಿದ ಡಾ.ಮುತ್ತುಲಕ್ಷ್ಮಿ ರೆಡ್ಡಿ ನಿಜವಾದ ಅರ್ಥದಲ್ಲಿ ಓರ್ವ ಪಾತ್ರ ಮಾದರಿಯೇ ಸರಿ.



ಮುತ್ತುಲಕ್ಷ್ಮಿ ಜನಿಸಿದ್ದು ತಮಿಳುನಾಡಿನ ಪುದುಕೋಟೆ ಎಂಬ ಪಟ್ಟಣದಲ್ಲಿ 1886ನೇ ಇಸವಿಯಲ್ಲಿ. ಅವರ ತಂದೆ ನಾರಾಯಣ ಸ್ವಾಮಿ ಅವರು ಪುದುಕೋಟೆಯ ಮಹಾರಾಜಾ ಕಾಲೇಜಿನ ಪ್ರಾಂಶುಪಾಲರಾಗಿದ್ದವರು. ಅವರ ತಾಯಿ ಚಂದ್ರಮ್ಮಾಳ್ ದೇವದಾಸಿ. ಆಕೆಯನ್ನು ವಿವಾಹವಾದರು ಎಂಬ ಕಾರಣಕ್ಕಾಗಿ ಮುತ್ತುಲಕ್ಷ್ಮಿ ಅವರ ತಂದೆಯವರಿಗೆ ಕುಟುಂಬ ಬಹಿಷ್ಕಾರ ಹಾಕಿತ್ತು. ತನ್ನ ತಾಯಿಯ ಕುಟುಂಬದೊಡನೆ ನಿಕಟ ಸಂಬಂಧ ಹೊಂದಿದ್ದರಿಂದ ಮುತ್ತುಲಕ್ಷ್ಮಿ ಅವರಿಗೆ ದೇವದಾಸಿಯರ ಬದುಕಿನ ವಾಸ್ತವಗಳನ್ನು ಹತ್ತಿರದಿಂದ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಸಾಂಪ್ರದಾಯಿಕ ಕಟ್ಟಳೆಗಳನ್ನು ದಾಟಿ ಮುತ್ತುಲಕ್ಷ್ಮಿ ಅವರ ತಂದೆ ತಮ್ಮ ಮಗಳನ್ನು ಶಾಲೆಗೆ ಸೇರಿಸಿದರು. ಆಕೆ ಋತುಮತಿಯಾದಾಗ ಶಾಲೆಯಿಂದ ಬಿಡಿಸಿ ಮನೆಯಲ್ಲಿಯೇ ಶಿಕ್ಷಣವನ್ನು ಕೊಡಿಸಲಾಯಿತು.

ಮೆಟ್ರಿಕ್ ಮುಗಿಸಿದ ನಂತರ ಮುತ್ತುಲಕ್ಷ್ಮಿ ವಿವಾಹವಾಗಬೇಕೆಂಬ ತಾಯಿಯ ಸಲಹೆಯನ್ನು ಒಪ್ಪದೆ ಹೆಣ್ಣು ಮಕ್ಕಳು ಪುರುಷರ ಅಧೀನಕ್ಕೆ ಒಳಪಡದೆ ತಮ್ಮ ಬದುಕನ್ನು ತಾವೇ ರೂಪಿಸಿಕೊಂಡು ಸ್ವತಂತ್ರವಾಗಿ ಜೀವನ ನಡೆಸಲು ಕಲಿಯಬೇಕೆಂದು ವಾದಿಸಿ ಮಹಾರಾಜಾ ಕಾಲೇಜಿಗೆ ಸೇರಲು ಆಕೆ ಅರ್ಜಿಯನ್ನು ಸಲ್ಲಿಸಿದರು. ಮುತ್ತುಲಕ್ಷ್ಮಿ ಕಾಲೇಜು ಸೇರಿದರೆ, ಆಕೆಯ ಪ್ರಗತಿಪರ ಧೋರಣೆಗಳು ಇತರ ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ ಎಂದು ಕಾಲೇಜಿನ ಪ್ರಾಂಶುಪಾಲರು ಹಾಗೂ ಪೋಷಕರಿಂದ ವಿರೋಧ ವ್ಯಕ್ತವಾಯಿತಂತೆ. ಆಗಿನ ಪುದುಕೋಟೆ ರಾಜ ಈ ವಿರೋಧಗಳನ್ನು ತಿರಸ್ಕರಿಸಿ ಆಕೆಗೆ ಪ್ರವೇಶ ನೀಡಿದ್ದೇ ಅಲ್ಲದೆ, ವಿದ್ಯಾರ್ಥಿ ವೇತನವನ್ನೂ ನೀಡಿದ್ದರಂತೆ. ತಾನು ಶಾಲಾ ಶಿಕ್ಷಕಿಯಾಗಬೇಕೆಂಬ ತಂದೆಯ ಸಲಹೆಯನ್ನು ಒಪ್ಪದೆ, ಇನ್ನೂ ಹೆಚ್ಚಿನ ಮಟ್ಟದ ಶಿಕ್ಷಣವನ್ನು ಪಡೆಯಬೇಕೆಂಬ ಹಂಬಲವನ್ನು ಹೊಂದಿದ್ದ ಅವರು ಮದ್ರಾಸ್ ಮೆಡಿಕಲ್ ಕಾಲೇಜನ್ನು ಸೇರಿ ಅದುವರೆಗೂ ಕೇವಲ ಪುರುಷರಿಗೆ ಮಾತ್ರ ಮೀಸಲಾಗಿದ್ದ ಆ ಕಾಲೇಜನ್ನು ಸೇರಿದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದೇ ಅಲ್ಲದೆ ಅಪೂರ್ವ ಸಾಧನೆಗಳನ್ನು ಮಾಡಿದರು.

ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಕೋರ್ಸಿಗೆ ದಾಖಲಾಗಲು ಅವರು ಆಗಮಿಸಿದಾಗ ಸಾಕಷ್ಟು ಪ್ರತಿರೋಧ ವ್ಯಕ್ತವಾಯಿತು. ಅದನ್ನು ಲೆಕ್ಕಿಸದೆ ಅವರು ತಮ್ಮ ಶಿಕ್ಷಣವನ್ನು ಪೂರೈಸಿದರಷ್ಟೇ ಅಲ್ಲ, ಅನೇಕ ಚಿನ್ನದ ಪದಕಗಳು ಹಾಗೂ ಬಹುಮಾನಗಳನ್ನು ಪಡೆದದ್ದು ಅವರ ಶೈಕ್ಷಣಿಕ ಸಾಮರ್ಥ್ಯಕ್ಕೆ ಸಾಕ್ಷಿ. ಶಸ್ತ್ರಚಿಕಿತ್ಸೆ ವಿಷಯದಲ್ಲಿ ಅವರು ಪಡೆದದ್ದು 100 ಕ್ಕೆ 100 ಅಂಕಗಳು.

> “ ಮೆಟ್ರಿಕ್ ಮುಗಿಸಿದ ನಂತರ ಮುತ್ತುಲಕ್ಷ್ಮಿ ವಿವಾಹವಾಗಬೇಕೆಂಬ ತಾಯಿಯ ಸಲಹೆಯನ್ನು ಒಪ್ಪದೆ ಹೆಣ್ಣು ಮಕ್ಕಳು ಪುರುಷರ ಅಧೀನಕ್ಕೆ ಒಳಪಡದೆ ತಮ್ಮ ಬದುಕನ್ನು ತಾವೇ ರೂಪಿಸಿಕೊಂಡು ಸ್ವತಂತ್ರವಾಗಿ ಜೀವನ ನಡೆಸಲು ಕಲಿಯಬೇಕೆಂದು ವಾದಿಸಿ ಮಹಾರಾಜಾ ಕಾಲೇಜಿಗೆ ಸೇರಲು ಆಕೆ ಅರ್ಜಿಯನ್ನು ಸಲ್ಲಿಸಿದರು. ಮುತ್ತುಲಕ್ಷ್ಮಿ ಕಾಲೇಜು ಸೇರಿದರೆ, ಆಕೆಯ ಪ್ರಗತಿಪರ ಧೋರಣೆಗಳು ಇತರ ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ ಎಂದು ಕಾಲೇಜಿನ ಪ್ರಾಂಶುಪಾಲರು ಹಾಗೂ ಪೋಷಕರಿಂದ ವಿರೋಧ ವ್ಯಕ್ತವಾಯಿತಂತೆ. ಆಗಿನ ಪುದುಕೋಟೆ ರಾಜ ಈ ವಿರೋಧಗಳನ್ನು ತಿರಸ್ಕರಿಸಿ ಆಕೆಗೆ ಪ್ರವೇಶ ನೀಡಿದ್ದೇ ಅಲ್ಲದೆ, ವಿದ್ಯಾರ್ಥಿ ವೇತನವನ್ನೂ ನೀಡಿದ್ದರಂತೆ.

ಮುತ್ತುಲಕ್ಷ್ಮಿ ಅವರು ಭಾರತದ ಪ್ರಥಮ ಮಹಿಳಾ ವೈದ್ಯಕೀಯ ಪಧವೀದರೆ ಹಾಗೂ ಮಹಿಳಾ ಹೌಸ್ ಸರ್ಜನ್. ತಮ್ಮ ಶಿಕ್ಷಣವನ್ನು ಪೂರೈಸಿ ಮದರಾಸಿನ ಎಗ್ ಮೋರ್ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್. ಆಗಿ ವೃತ್ತಿ ಪ್ರವೇಶ ಮಾಡಿದ ಅವರು ತಮ್ಮ ಸಹೋದ್ಯೋಗಿಯಾಗಿದ್ದ ಡಾ. ಸುಂದರ ರೆಡ್ಡಿ ಅವರನ್ನು ವಿವಾಹವಾದರು. ತಮ್ಮನ್ನು ಸಮಾನರಂತೆ ನಡೆಸಿಕೊಳ್ಳಬೇಕು ಹಾಗೂ ತಮ್ಮ ವೃತ್ತಿ ಜೀವನಕ್ಕೆ ಯಾವುದೇ ಅಡ್ಡಿಗಳು ಬರಬಾರದು ಎಂಬ ಷರತ್ತಿನ ಮೇಲೆ ಅವರು ವಿವಾಹಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿದ್ದು. ಅವರ ವಿವಾಹ ನಡೆದದ್ದು 1914ನೇ ಇಸವಿಯಲ್ಲಿ, ಅವರ 28ನೇ ವಯಸ್ಸಿನಲ್ಲಿ ಎಂಬುದು ಉಲ್ಲೇಖಾರ್ಹ. ಒಂದು ಶತಮಾನದ ನಂತರವೂ ವಿವಾಹವನ್ನು ಅಸಮಾನ ಸಂಬಂಧಗಳನ್ನು ಆಧರಿಸಿದ ಸಂಸ್ಥೆಯಾಗಿ ಮುಂದುವರೆಸಿಕೊಂಡು ಬರುತ್ತಿರುವವರು ಹಾಗೂ ತಮ್ಮ ಹೆಣ್ಣು ಮಕ್ಕಳನ್ನು ಬಾಲ್ಯ ವಿವಾಹದ ನೊಗಕ್ಕೆ ಸಿಲುಕಿಸುತ್ತಿರುವ ಪೋಷಕರು ಮುತ್ತುಲಕ್ಷ್ಮಿ ಅವರ ಬದುಕಿನ ಪುಟಗಳಿಂದ ಕಲಿಯಬೇಕಾದ ಅನೇಕ ಪಾಠಗಳಲ್ಲಿ ಇದು ಒಂದಷ್ಟೆ.

ವೈದ್ಯಕೀಯ ಕ್ಷೇತ್ರಕ್ಕೆ ಡಾ. ಮುತ್ತುಲಕ್ಷ್ಮಿ ರೆಡ್ಡಿ ಅವರು ನೀಡಿದ ಮತ್ತೊಂದು ಮಹತ್ತರ ಕೊಡುಗೆಯೆಂದರೆ ಇಂದು ಜಗತ್ಪ್ರಸಿದ್ಧವಾಗಿದ್ದು ಆರ್ಥಿಕ ಅನುಕೂಲಗಳಿಂದ ವಂಚಿತರಾಗಿರುವ ಸಾವಿರಾರು ಜನರಿಗೆ ಕ್ಯಾನ್ಸರ್ ಚಿಕಿತ್ಸೆಯನ್ನು ನೀಡುತ್ತಿರುವ ಅಡ್ಯಾರ್ ಕ್ಯಾನ್ಸರ್ ಆಸ್ಪತ್ರೆಯ ಸ್ಥಾಪನೆಯಲ್ಲಿ ಅವರು ವಹಿಸಿದ ಪಾತ್ರ. ತಮ್ಮ ಸಹೋದರಿ ಕ್ಯಾನ್ಸರ್‌ನಿಂದ ಮೃತ ಪಟ್ಟಾಗ ಆ ರೋಗದ ಚಿಕಿತ್ಸೆಗಾಗಿ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂಬ ಕನಸನ್ನು ಕಟ್ಟಿ ಅದನ್ನು ಸಾಕಾರ ಮಾಡಿದ್ದೇ ಅಲ್ಲದೆ ತಮ್ಮ ವೈದ್ಯ ಪುತ್ರನಲ್ಲಿಯೂ ಬಡ ಕ್ಯಾನ್ಸರ್ ಪೀಡಿತರ ಸೇವೆಯಲ್ಲಿ ತೊಡಗುವ ಬದ್ಧತೆಯನ್ನು ಬೆಳೆಸಿದರು. 1954ರಲ್ಲಿ ಒಂದು ಗುಡಿಸಿಲಿನಲ್ಲಿ ಅವರು ಪ್ರಾರಂಭ ಮಾಡಿದ ಈ ಆಸ್ಪತ್ರೆ ಇಂದು ಇಡೀ ಜಗತ್ತಿನಲ್ಲೇ 'ಶ್ರೇಷ್ಠ' ಎಂದು ಪರಿಗಣಿತವಾಗಿರುವ ಕ್ಯಾನ್ಸರ್ ಆಸ್ಪತ್ರೆಗಳ ಸಾಲಿನಲ್ಲಿರುವುದು ಡಾ. ಮುತ್ತುಲಕ್ಷ್ಮಿ ರೆಡ್ಡಿ ಅವರ ಜೀವಮಾನ ಸಾಧನೆಗೆ ಒಂದು ನಿದರ್ಶನವಷ್ಟೇ.

ಡಾ. ಮುತ್ತುಲಕ್ಷ್ಮಿ ರೆಡ್ಡಿ ಅವರ ಕಾರ್ಯ ವ್ಯಾಪ್ತಿ ಅವರ ವೈದ್ಯಕೀಯ ವೃತ್ತಿಗೆ ಮಾತ್ರ ಸೀಮಿತವಾಗಿರಲಿಲ್ಲ. 1917 ರಲ್ಲೇ ಮಹಿಳಾ ಚಳವಳಿಯೊಡನೆ ತಮ್ಮನ್ನು ಗುರುತಿಸಿಕೊಂಡ ಅವರು 'ವಿಮೆನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅವರ ಈ ಪ್ರಯತ್ನದಲ್ಲಿ ಕೈ ಜೋಡಿಸಿದವರು ಮಹಿಳಾ ಹಕ್ಕುಗಳ ಹೋರಾಟದಲ್ಲಿ ಮುಂಚೂಣಿಯಲ್ಲಿದಂಥ ಆನಿ ಬೆಸೆಂಟ್ ಮತ್ತು ಮಾರ್ಗರೆಟ್ ಕಸಿನ್ಸ್. ವಿಧಾನ ಪರಿಷತ್ತಿನ ಸದಸ್ಯರಾಗಿ ಮಹಿಳಾ ಹಕ್ಕುಗಳು ಹಾಗೂ ಅವರ ಸ್ವಾಭಿಮಾನದ ರಕ್ಷಣೆಗಾಗಿ ಮುತ್ತುಲಕ್ಷ್ಮಿ ಅವರು ಕೈಗೊಂಡ ಕಾನೂನಾತ್ಮಕ ಕ್ರಮಗಳು ಸಾರ್ವಕಾಲಿಕ ಪ್ರಸ್ತುತೆಯನ್ನು ಹೊಂದಿರುವಂಥವು. ಇದಕ್ಕೆ ಸ್ಪಷ್ಟ ನಿದರ್ಶನಗಳೆಂದರೆ ಅವರು ಮಂಡಿಸಿದ ದೇವದಾಸಿ ವ್ಯವಸ್ಥೆಯ ನಿಷೇಧ ವಿಧೇಯಕ, ವಿವಾಹಕ್ಕೆ ಹೆಣ್ಣಿನ ಒಪ್ಪಿಗೆಯನ್ನು ಪಡೆಯುವ ವಯಸ್ಸಿನ ಏರಿಕೆ, ಬಹು ಸಂಗಾತಿ ವಿವಾಹವನ್ನು ನಿಷೇಧಿಸುವ ವಿಧೇಯಕ, ಅನೈತಿಕ ಸಾಗಾಣಿಕೆಯನ್ನು ಅಡೆಗಟ್ಟುವ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಗಟ್ಟುವ ಕಾಯಿದೆಗಳು. ಮುಸ್ಲಿಂ ಹೆಣ್ಣು ಮಕ್ಕಳಿಗೆ ಅವರು ತೆರೆದ ವಿದ್ಯಾರ್ಥಿನಿಲಯ, ದಲಿತ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲು ಮಾಡಿದ ವ್ಯವಸ್ಥೆ ಹಾಗೂ ದೇವದಾಸಿಯರಿಗೆ ಶಿಕ್ಷಣ ನೀಡಲು ಅವರಿಂದ ಆರಂಭವಾದ 'ಅವ್ವೈ ಇಲ್ಲಮ್' ಎಂಬ ಸಂಸ್ಥೆ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅವರಿಗಿದ್ದ ಬದ್ಧತೆಗೆ ಸಾಕ್ಷಿಯಾಗಿದೆ. ಈ ಎಲ್ಲ ಕಾಯಿದೆಗಳ ಹಿಂದಿದ್ದ ಅವರ ಬದ್ಧತೆ ಹಾಗೂ ಕಾರ್ಯತತ್ಪರತೆಯನ್ನು ಅರಿಯಲೆತ್ನಿಸಿದಾಗ ಮಹಿಳಾ ಚಳವಳಿ ಕಳೆದ 3–4 ದಶಕಗಳಿಂದ ನಡೆಸುತ್ತಿರುವ ಮಹಿಳಾ ಹಕ್ಕುಗಳ ಹೋರಾಟಕ್ಕೆ ಅವರು ಸುಮಾರು 90 ವರ್ಷಗಳ ಹಿಂದೆಯೇ ಅಡಿಪಾಯವನ್ನು ಈ ದೇಶದಲ್ಲಿ ಹಾಕಿದ್ದರು ಎಂಬ ವಿಷಯ ನಮ್ಮ ಮುಂದೆ ಎದ್ದು ನಿಲ್ಲುತ್ತದೆ.

ತಮ್ಮ 81ನೇ ವಯಸ್ಸಿನಲ್ಲಿ ನಿಧನರಾದ ಡಾ ಮುತ್ತುಲಕ್ಷ್ಮಿ ರೆಡ್ಡಿ ಅವರು ತಮ್ಮ ಬದುಕಿನಲ್ಲಿ ಮಾಡಿದ ಸಾಧನೆಗಳು ಅಪಾರ. ದೇಶದ ಪ್ರಥಮ ವೈದ್ಯೆ, ವಿಧಾನ ಪರಿಷತ್ತಿನ ಪ್ರಥಮ ಮಹಿಳಾ ಸದಸ್ಯೆ, ಜನ ಪ್ರತಿನಿಧಿ, ಸಮಾಜ ಸುಧಾರಕಿ, ಬರಹಗಾರ್ತಿ, ಜನನಾಯಕಿ– ಅವರ ಸಾಧನೆಗಳು ಪಸರಿಸಿದ ಕ್ಷೇತ್ರಗಳು ಎಷ್ಟೊಂದಿವೆ. ಅವರ ಹೆಸರನ್ನು 1947 ರಲ್ಲಿ ಕೆಂಪು ಕೋಟೆಯ ಮೇಲೆ ಹಾರಿಸಲಾದ ಸ್ವತಂತ್ರ ಭಾರತದ ಪ್ರಥಮ ಧ್ವಜದಲ್ಲಿ ಸೇರಿಸಲಾಗಿತ್ತಂತೆ. 1956ರಲ್ಲಿ ಅವರಿಗೆ ಪದ್ಮ ಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು. ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ್ದರೂ ಅವರು ತಮ್ಮ ಸರಳತೆ, ಸಜ್ಜನಿಕೆ ಹಾಗೂ ಕಾರ್ಯದಕ್ಷತೆಗಳನ್ನು ಜೀವಿತದ ಕೊನೆಯವರೆಗೂ ಉಳಿಸಿಕೊಂಡಿದ್ದರು.

ಡಾ. ಮುತ್ತುಲಕ್ಷ್ಮಿ ರೆಡ್ಡಿ ಮತ್ತು ಅವರು ಹಾಕಿದ ಜಾಡಿನಲ್ಲಿ ನಡೆದು ಈ ದೇಶದ ಮಹಿಳಾ ಹಕ್ಕುಗಳ ಹೋರಾಟಕ್ಕೆ ಅಪರಿಮಿತ ಕೊಡುಗೆಗಳನ್ನು ನೀಡಿದವರ ಬದುಕು ಹಾಗೂ ಅವರು ಬಿಟ್ಟು ಹೋಗಿರುವ ಜೀವನ ಮೌಲ್ಯಗಳ ಬಗ್ಗೆ ಇನ್ನು ಮುಂದಾದರೂ ಸಾಮಾಜಿಕ ಚಳವಳಿಗಳು, ಮಹಿಳಾ ಅಧ್ಯಯನ ಮುಂತಾದ ಕೋರ್ಸುಗಳು ಯುವ ಜನತೆಗೆ ಪರಿಚಯ ಮಾಡಬೇಕಾಗಿದೆ.

ಆ.13ರ ಮುಂಜಾನೆಯಿಂದ ಆ.15ರ ಸೂರ್ಯಾಸ್ತದವರೆಗೆ ರಾಜ್ಯದ 75 ಲಕ್ಷ ಮನೆಗಳ ಮೇಲೆ ತ್ರಿವರ್ಣ ಧ್ವಜಾರೋಹಣ

- ಕರ್ನಾಟಕ ಬಿಜೆಪಿ ಗುರಿ
- ಪ್ರತಿ ವಿಧಾನಸಭೆಯ 35 ಸಾವಿರ ಮನೆಗಳಂತೆ ರಾಷ್ಟ್ರ ಧ್ವಜಾರೋಹಣ
- ಇಡೀ ದೇಶದಲ್ಲಿ 20 ಕೋಟಿ ಮನೆಗಳ ಮೇಲೆ ಧ್ವಜ ಹಾರಿಸುವುದು ಪ್ರಧಾನಿ ಮೋದಿ ಗುರಿ



ಎಸ್.ರವಿಕುಮಾರ್

ಬೆಂಗಳೂರು, ಆ.3(ಕೆಎಂಶಿ)– ಸ್ವಾತಂತ್ರ್ಯ ಅಮೃತೋತ್ಸವ ವರ್ಷದ ಹಿನ್ನೆಲೆಯಲ್ಲಿ ಆಗಸ್ಟ್ 13ರ ಸೂರ್ಯೋದಯದಿಂದ ಆ.15ರ ಸೂರ್ಯಾಸ್ತದವರೆಗೆ ರಾಜ್ಯದ ಕನಿಷ್ಠ 75 ಲಕ್ಷ ಮನೆಗಳ ಮೇಲೆ ತ್ರಿವರ್ಣ ಧ್ವಜಾರೋಹಣ ನೆರವೇರಿಸುವ ಗುರಿಯನ್ನು ಕರ್ನಾಟಕ ಬಿಜೆಪಿ ಹೊಂದಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 224 ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ ತಲಾ 35,000 ಮನೆಗಳ ಮೇಲೆ ಅಂದರೆ 75 ಲಕ್ಷಕ್ಕೂ ಹೆಚ್ಚು ಮನೆಗಳಲ್ಲಿ ರಾಷ್ಟ್ರ ಧ್ವಜಾರೋಹಣ ನಡೆಯಲಿದೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಇಡೀ ದೇಶದಲ್ಲಿ 20 ಕೋಟಿಗಿಂತ ಹೆಚ್ಚು ಮನೆಗಳಲ್ಲಿ ಧ್ವಜಾರೋಹಣ ಮಾಡಲು ಕರೆ ಕೊಟ್ಟಿದ್ದಾರೆ. 75ನೇ ಸ್ವಾತಂತ್ರ್ಯದ ಹಬ್ಬವನ್ನು ಸಂಭ್ರಮದಿಂದ, ಪ್ರಜಾಪ್ರಭುತ್ವದ ಅತ್ಯಂತ ದೊಡ್ಡ ರಾಷ್ಟ್ರೀಯ ಹಬ್ಬವಾಗಿ ಬೃಹತ್ ಪ್ರಮಾಣದಲ್ಲಿ ಆಚರಿಸಲು ಕರೆ ಕೊಟ್ಟಿದ್ದಾರೆ ಎಂದರು.

58 ಸಾವಿರ ಬೂತ್‌ಗಳು, 311 ಮಂಡಲಗಳು, 2500 ಶಕ್ತಿ ಕೇಂದ್ರಗಳು, ಮಹಾಶಕ್ತಿ ಕೇಂದ್ರಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್‌ಗಳಲ್ಲಿ ಸಭೆಗಳನ್ನು ಏರ್ಪಡಿಸಲಾಗುತ್ತಿದೆ. ಪೂರ್ವ ತಯಾರಿ ನಡೆದಿದೆ. ಪೂರ್ವ ಯೋಜನೆ, ಪೂರ್ಣ ಯೋಜನೆ ಯಶಸ್ವಿ ಕಾರ್ಯ ಯೋಜನೆ ಎಂಬ ಪರಿವಾರದ ಮಾತಿನಂತೆ ಕಾರ್ಯಪ್ರವೃತ್ತರಾಗಿದ್ದೇವೆ ಎಂದು ತಿಳಿಸಿದರು.

ಆಗಸ್ಟ್ 4, 5, 6 ಈ ಮೂರು ದಿನಗಳಲ್ಲಿ ರಾಜ್ಯದ 58 ಸಾವಿರಕ್ಕೂ ಮಿಕ್ಕಿ ಬೂತ್‌ಗಳಲ್ಲಿ ಪಕ್ಷದ ಬೂತ್ ಸಮಿತಿಗಳ ಸಭೆ, ಹಾಗೆಯೇ ಶಕ್ತಿ ಕೇಂದ್ರ, ಮಹಾಶಕ್ತಿ ಕೇಂದ್ರ, ಮಂಡಲ ಹಾಗೂ ಜಿಲ್ಲಾ ಮಟ್ಟಗಳಲ್ಲಿ ವಿವಿಧ ಮೋರ್ಚಾ–ಪ್ರಕೋಷ್ಠಗಳು, ಪಕ್ಷದ ಶಾಸಕರು ಹಾಗೂ ಸಂಸದರ ನೇತೃತ್ವದಲ್ಲಿ ಸಭೆಗಳನ್ನು ನಡೆಸಿ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಪೂರ್ವ ತಯಾರಿಯನ್ನು ಮಾಡಲಾಗುವುದು ಎಂದು ವಿವರಿಸಿದರು.

ಧ್ವಜದ ಜೊತೆ ಕೋಲನ್ನು ಹೊಂದಿಸಿಕೊಳ್ಳುವುದು, ಧ್ವಜವನ್ನು ಸರಿಯಾಗಿ ಹಾರಿಸಲು ತರಬೇತಿಯನ್ನು ಪ್ರತಿ ಮಂಡಲದಲ್ಲಿ ಏರ್ಪಡಿಸಲು ಸೂಚಿಸಲಾಗಿದೆ. ಧ್ವಜ ಗೌರವವನ್ನು ಕಾಪಾಡಲು ಎಲ್ಲ ಮಂಡಲಗಳಲ್ಲಿ ಧ್ವಜದ ಶ್ರೇಷ್ಠತೆ ಕುರಿತು ಕಾರ್ಯಕರ್ತರಿಗೆ ತಿಳಿಸಲಾಗುತ್ತಿದೆ ಎಂದು ಎನ್.ರವಿಕುಮಾರ್ ತಿಳಿಸಿದರು.



75 ತಾಲೂಕು ಕೇಂದ್ರಗಳಲ್ಲಿ ಬೃಹತ್ ತ್ರಿವರ್ಣ ಧ್ವಜ ಯಾತ್ರೆ ನೆರವೇರಲಿದ್ದು, ಸಾವಿರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ. 175 ಕಡೆಗಳಲ್ಲಿ ಸೈಕಲ್ ಜಾಥಾ, ಬೈಕ್ ಜಾಥಾವನ್ನು ಯುವ ಮೋರ್ಚಾ ವತಿಯಿಂದ ನಡೆಸಲಾಗುವುದು. ರೈತ ಮೋರ್ಚಾ ವತಿಯಿಂದ 75 ಕಡೆಗಳಲ್ಲಿ ಅಲಂಕೃತ ಎತ್ತಿನ ಬಂಡಿಯಲ್ಲಿ ತ್ರಿವರ್ಣ ಧ್ವಜಯಾತ್ರೆಯು ನಡೆಯಲಿದೆ.

ಮಹಿಳಾ ಮೋರ್ಚಾ ನೇತೃತ್ವದಲ್ಲಿ 175 ಕಡೆಗಳಲ್ಲಿ ಕಿತ್ತೂರು ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವ ಮತ್ತಿತರ ಭಾವಚಿತ್ರದೊಂದಿಗೆ ತ್ರಿವರ್ಣ ಧ್ವಜದ ಮಹಿಳಾ ಜಾಥಾ ಏರ್ಪಡಿಸಲಾಗುವುದು ಎಂದು ರವಿಕುಮಾರ್ ತಿಳಿಸಿದರು.

ಖಾದಿ, ಕಾಟನ್, ಸ್ವದೇಶಿ ಉಡುಪುಗಳನ್ನು ಧರಿಸಿ ಎಲ್ಲ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಇದು ಸ್ವದೇಶಿ ಚಳವಳಿ, ಆರ್ಥಿಕತೆಗೆ ಬಲ ತುಂಬಲಿದೆ ಎಂದು ನುಡಿದರು.

ಆಗಸ್ಟ್ 10, 11, 12ರಂದು ಪಥ ಸಂಚಲನ, ಪ್ರಭಾತ್ ಪೇರಿ, ಮ್ಯಾರಥಾನ್, ವಾಕಥಾನ್, ಸೈಕ್ಲೋಥಾನ್, ಭಾರತ್ ಮಾತಾ ಪೂಜನಾ ನಡೆಯಲಿದೆ. ಕರ್ನಾಟಕ ಸರಕಾರ 'ಅಮೃತ ಭಾರತಿಗೆ ಕನ್ನಡದಾರತಿ' ಅಡಿಯಲ್ಲಿ ಬಿಡುಗಡೆಗೊಳಿಸಿದ ಸ್ವಾತಂತ್ರ್ಯದ ಹೋರಾಟ ಕುರಿತ 75 ಪುಸ್ತಕಗಳನ್ನು ಶಿಕ್ಷಣ ಸಂಸ್ಥೆಗಳು, ಜನರಿಗೆ ತಲುಪಿಸಲು ಯೋಜಿಸಲಾಗಿದೆ. ಪುಸ್ತಕ ಬಿಡುಗಡೆ ಯೋಜನೆ ಶ್ಲಾಘನೀಯ ಎಂದು ಮೆಚ್ಚುಗೆ ಸೂಚಿಸಿದರು.

ಇದು ಗಿನ್ನಿಸ್ ದಾಖಲೆ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮುಂದಿನ 25 ವರ್ಷಗಳಲ್ಲಿ ನಮ್ಮ ದೇಶದ ಮುನ್ನಡೆಯುವಿಕೆ ಹಾಗೂ ಪ್ರಪಂಚದಲ್ಲಿ ಭಾರತ ಮೊದಲು ಎಂಬ ಸ್ಥಾನ ಪಡೆಯುವ ಕುರಿತಂತೆ ತಿಳಿಸಲಾಗುವುದು ಎಂದರು.

ಇನ್ನೂ 4 ದಿನ ಭಾರೀ ಮಳೆ

- ಕರಾವಳಿ, ಮಲೆನಾಡು ಮಾತ್ರವಲ್ಲ ಬಯಲು ಪ್ರದೇಶದಲ್ಲೂ ಆರ್ಭಟ
- ರಾಜ್ಯದೆಲ್ಲೆಡೆ ಎಚ್ಚರ ವಹಿಸಲು ಹವಾಮಾನ ತಜ್ಞರ ಸಲಹೆ ಸೂಚನೆ

ಬೆಂಗಳೂರು,ಆ.3(ಕೆಎಂಶಿ)–ರಾಜ್ಯದಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆ ಮುಂದಿನ 4 ದಿನಗಳ ಕಾಲ ಇದೇ ಪ್ರಮಾಣದಲ್ಲಿ ಬೀಳಲಿದೆ. ಕರಾವಳಿ, ಮಲೆನಾಡು ಪ್ರದೇಶವಲ್ಲದೆ, ಬಯಲು ಪ್ರದೇಶದಲ್ಲೂ ಭಾರೀ ಮಳೆಯಾಗಲಿದ್ದು, ಈ ಬಗ್ಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಹವಾಮಾನ ತಜ್ಞರು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ.



ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ ನಿನ್ನೆ ಮಳೆ, ನೆರೆಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ವೇಳೆ ಈ ಮಾಹಿತಿ ನೀಡಿದ್ದಾರೆ. ಬಯಲು ಸೀಮೆಯಲ್ಲಿ ಮಳೆ ಧಾರಾಕಾರವಾಗಿ ಸುರಿಯುತ್ತಿರುವುದರಿಂದ ಖಾಲಿ ಇದ್ದ ಕೆರೆಕಟ್ಟೆಗಳು ಭರ್ತಿಯಾಗಿ, ಕೆಲವೆಡೆ ಏರಿ ಒಡೆದು ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಈ ಪ್ರವಾಹ ತೀವ್ರತೆ ಹೆಚ್ಚಾಗಿ ಇನ್ನು ಕೆಲವು ಕೆರೆ, ಕಟ್ಟೆಗಳು ಒಡೆಯುವ ಸಾಧ್ಯತೆಗಳಿವೆ. ನದಿ, ಕೆರೆ ಪಾತ್ರಗಳಲ್ಲಿ ಹಾಗೂ ಕೆಳಮಟ್ಟದಲ್ಲಿ ವಾಸಿಸುವವರಿಗೆ ಸುರಕ್ಷಾ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ.

ನಿರಂತರವಾಗಿ ಬೀಳುತ್ತಿರುವ ಮಳೆ ಕಾರಣ ಹವಾಮಾನ ವೈಪರೀತ್ಯವಲ್ಲ. ಮುಂಗಾರು ಮಳೆಯೇ ತೀವ್ರಗೊಂಡಿದ್ದು, ರಾಜ್ಯಾದ್ಯಂತ ವ್ಯಾಪಕ ಪ್ರಮಾಣದಲ್ಲಿ ಬೀಳುತ್ತಿದೆ. ರಾಜ್ಯದ ಭೂಪ್ರದೇಶದ ಮೇಲೆ ಟಿಯರ್ ಜೋನ್ ನಿರ್ಮಾಣಗೊಂಡಿರುವುದರಿಂದ ಮಳೆ ಪ್ರಮಾಣ ಹೆಚ್ಚಾಗುತ್ತಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ. ವಾಯುಭಾರ ಕುಸಿತ ಮುನ್ನ ವಾತಾವರಣದಲ್ಲಿ ಉಂಟಾಗುವ ಪ್ರಕ್ರಿಯೆ ಇದಾಗಿದ್ದು, ದಿನದಿಂದ ದಿನಕ್ಕೆ ಮುಂಗಾರು ಚೇತರಿಕೆಯಾಗಿ ರಾಜ್ಯದಲ್ಲಿ ಮಳೆಯ ಆರ್ಭಟ ಜೋರಾಗಿದೆ. ಇದರಿಂದ ಭಾಗಶಃ ಮೋಡ ಮುಸುಕಿದ ವಾತಾವರಣ ಕಂಡುಬರಲಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಗುಡುಗು, ಮಿಂಚಿನಿಂದ ಕೂಡಿದ ಸುರಿಮಳೆಯಾಗಲಿದೆ. ಕರಾವಳಿ ಪ್ರದೇಶದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿದ್ದಾರೆ. ಅದೇ ರೀತಿ ಮಲೆನಾಡು ಭಾಗದಲ್ಲೂ ವ್ಯಾಪಕ ಮಳೆಯಾಗಲಿದೆ ಎಂಬ ಮಾಹಿತಿ ನೀಡಿದ್ದಾರೆ.

ಉತ್ತರ ಕರ್ನಾಟಕದ ಒಂದೆರಡು ಕಡೆ ಭಾರೀ ಮಳೆಯಾದರೂ ಚದುರಿದಂತೆ ಸಾಧಾರಣ ಮಳೆಯಾಗಲಿದೆ. ಇನ್ನು ಬೆಂಗಳೂರು ಸೇರಿದಂತೆ ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಕೆಲವೆಡೆ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿದ್ದಾರೆ.

ಹೀಗಾಗಿ ಜಿಲ್ಲಾಡಳಿತ ಎಲ್ಲಾ ರೀತಿಯಿಂದಲೂ ಸಜ್ಜಾಗಿರುವಂತೆ ಸರ್ಕಾರ ಸೂಚನೆ ನೀಡಿದೆ. ಜನ, ಜಾನುವಾರುಗಳ ರಕ್ಷಣೆ, ಸೇತುವೆ ಕುಸಿತ, ಕೆರೆ, ಕಟ್ಟೆ ಒಡೆಯುವುದು, ಭೂ ಕುಸಿತ ಹಾಗೂ ಮನೆ ಕುಸಿತದ ಘಟನೆಗಳು ಸಂಭವಿಸಿದಾಗ ತಕ್ಷಣವೇ ನೆರವಿಗೆ ಧಾವಿಸುವಂತೆ ನಿರ್ದೇಶನ ನೀಡಲಾಗಿದೆ. ಸತತವಾಗಿ ಸುರಿಯುತ್ತಿರುವ ಮಳೆಯಿಂದ ಸಾವಿರಾರು ಕೋಟಿ ರೂ. ಬೆಳೆ ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗೆ ನಷ್ಟ ಉಂಟಾಗಿದೆ. ಈಗಾಗಲೇ 30ಕ್ಕೂ ಹೆಚ್ಚು ಮಂದಿ ಮಳೆಗೆ ಪ್ರಾಣ ಕಳೆದುಕೊಂಡಿದ್ದಾರೆ. ಸಾವಿರಾರು ಮನೆಗಳು ಹಾನಿಯಾಗಿವೆ.

ಕೆಲವೆಡೆ ಅತಿವೃಷ್ಟಿಯಿಂದಾಗಿ ಬೇಸಾಯವನ್ನೇ ತಾತ್ಕಾಲಿಕವಾಗಿ ನಿಲ್ಲಿಸುವಂತಾಗಿದೆ. ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಕಳೆದ ತಿಂಗಳು ಉಂಟಾದ ಭೂ ಕುಸಿತ, ಮನೆ ಹಾನಿ ಹಾಗೂ ಬೆಳೆ ನಷ್ಟದ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಛತ್ರ ಖಾಲಿ ಇದೆ
ದಿನಾಂಕ – ಆಗಸ್ಟ್ 20 ಮತ್ತು 21, 2022.
GLN Convention Hall
9845129666, 9606225582

ಮನೆ ಬಾಡಿಗೆಗೆ
30x40
ಡಬಲ್ ಬೆಡ್ ರೂಂ, ಅಟ್ಯಾಚ್ ಬಾತ್ ರೂಂ ಸೋಲಾರ್ 2nd Floor, #214, 7th Cross, 2nd Stage, Hebbal, Near :- CITB Choultry Madegowda Circle
8618000572
9986149622

WANTED
• OFFICE EXECUTIVES &
• OFFICE STAFFS (M/F)
(Practical Knowledge of computer is must)
Salary: based on Experience
Retired persons with computer knowledge also may apply. Contact:
7795301535 / 9448031964
Email: mundursri2001@rediffmail.com

40x40 ಅಳತೆಯ 'A' ಖಾತೆಯುಳ್ಳ ಸೈಟು ಮಾರಾಟಕ್ಕಿದೆ 16 ಲಕ್ಷದ 50 ಸಾವಿರಗಳು ಮಾತ್ರ, TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

WANTED
- Driver
- Accountant
- Dtp and Designer
- Front Office Assistant (Lady candidate)

9448067939/9739569260

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

WANTED URGENTLY
Office Assistant - Female (5 Numbers) Age-18, 28, Qualification: 10th, 2nd PUC or Any Degree, Salary 8000 to 12000/-, Office : J&K Enterprises, Mogarahalli, (Manti), K.R.S. Road, Near Bank of Baroda, Mysore
9964942491 / 9164307146
ವಸತಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ.

NEW HOUSE FOR SALE
ವಿನಾಯಕ ಎನ್‌ಕ್ಲೆವ್ 1st Stage MUDA ಹೊಸ ಮನೆ
20x30 G/F
ಮಾರಾಟಕ್ಕಿದೆ. (ಹೂಟಗಳ್ಳಿ)
9880583184

ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
20X30, 30X40 & 30X50
ಪೊಲೀಸ್ ಲಾಟಿಟ್ ಮತ್ತು ಲಲಿತಾದ್ರಿಪುರ ನಡುವೆ 3999/– ಚದರ ಅಡಿ. ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

GOLD FINANCE
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5200
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್ ಮೈಸೂರು
ಮೊ: 8050345574

ಪ್ರವಾಸ
8-9-2022 – 14 ದಿನಗಳ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್ ಚಾರ್ಧಾಮ್ ಪ್ರವಾಸ. 5-10-2022 – 16 ದಿನಗಳ ಅಷ್ಟಜ್ಯೋತಿರ್ಲಿಂಗ ದರ್ಶನ, ನಾಸಿಕ್, ಶಿರಡಿ, ಓಂಕಾರೇಶ್ವರ್ ಉಜ್ಜಯಿನಿ, ಮಹಾಕಾಳೇಶ್ವರ ವಲ್ಲಭಬಾಯಿ, ಪಟೇಲರ ಪ್ರತಿಮೆ, ದ್ವಾರಕಾ, ಸೋಮನಾಥ್, ಮಾತ್ರಗಯಾ. ಸಂಪರ್ಕಿಸಿ: ವಿಷ್ಣನ್ ಟೂರ್ ಅಂಡ್ ಟ್ರಾವೆಲ್ಸ್, ತ್ಯಾಗರಾಜನಗರ, ಬೆಂಗಳೂರು–70
8050629305, 9342287551

ಹಾಲು ಅಣಬೆ
2 ದಿನಗಳ ಪ್ರಾಯೋಗಿಕ ತರಬೇತಿ ದಿನಾಂಕ 14 & 15 ಆಗಸ್ಟ್ ಸ್ಥಳ: ಹೊಂಗೆ ಫಾರ್ಮ್ಸ್, ರೂಪನಗರ, ಮೈಸೂರು.
9606077068 / 7760299773
7022727475

ಬೇಕಾಗಿದ್ದಾರೆ
ಖಾಸಗಿ ಬ್ಯಾಂಕಿನಲ್ಲಿ ಕೆಲಸ ಮಾಡಲು ಯುವಕ – ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: PUC, Degree, ವೇತನ: ರೂ.12,000/– ದಿಂದ 25,000/–. ಸಂಪರ್ಕಿಸಿ:
9980812378
9980814578

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

K.H.B Site for Sale
30x40 Near Citizen School, Nanjanagud, Rate: 2600/Sqft
9448322796

ತಕ್ಷಣ ಬೇಕಾಗಿದ್ದಾರೆ
ಸೆರಾಮಿಕ್ ಫೀಲ್ಡ್ ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸ್ಥಳ: ಬನ್ನಿಮಂಟಪ
7795662367, 0821-2598024

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS Age Limit	8000/- 18 to 35

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು, ಟೈಲರುಗಳು, ಹೆಲ್ಪರುಗಳು, ಆಫೀಸ್ ಬಾಯ್ (Office Boy) ಮತ್ತು ಸೆಕ್ಯೂರಿಟಿಗಳು ಬೇಕಾಗಿದ್ದಾರೆ. ESI, PF, ವಾರದ ರಜೆ, ಬೋನಸ್, ಕೆಲವು ಸ್ಥಳಗಳಿಗೆ ಬಸ್ಸಿನ ಸೌಕರ್ಯವಿರುತ್ತದೆ. ಸಂಪರ್ಕಿಸಿ:
7795285485, 8105249880

WANTED
Front Office Assistant / Receptionist for a Reputed Lodge with Experience (New Sayaji Rao Road) Contact:
9740985284

ROOM FOR RENT
Office Purpose Only Space 10.5x12 feet, 1st Floor 2376/18 New Kantharajurs Road, Jayanagara, Mysore
9738652752

ಬೇಕಾಗಿದ್ದಾರೆ
ಪ್ರೌಢ ಶಾಲಾ ವಿಭಾಗಕ್ಕೆ ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧನೆ ಮಾಡುವ ಶಿಕ್ಷಕರು ಬೇಕಾಗಿದ್ದಾರೆ. ವಿದ್ಯಾರ್ಹತೆ: ಬಿ.ಎಸ್.ಇಡಿ. (ಹೆಚ್.ಐ) ಅಥವಾ ಬಿ.ಎಸ್ಸಿ. ಬಿ.ಎಡ್. ನಿಮ್ಮ ಪೂರ್ಣ ವಿದ್ಯಾರ್ಹತೆ ಹಾಗೂ ಇತರೆ ಮಾಹಿತಿಯನ್ನು ಈ ಕೆಳಕಂಡ ಇ–ಮೇಲ್‌ಗೆ ಕಳುಹಿಸಿ
sairangadeafschool@gmail.com
ಅಥವಾ 9342112736 ಸಂಖ್ಯೆಗೆ ಸಂಪರ್ಕಿಸಿ.

ಮಹಿಳೆಯರಿಂದ ಮಹಿಳೆಯರಿಗೆ ಜರ್ಮನ್ ಬೆಳ್ಳಿ ಪದಾರ್ಥಗಳು
ಕೇವಲ ಒಂದು ಗ್ರಾಂಗೆ 10 ರೂ.ಗಳಿಗೆ ಜರ್ಮನ್ ಬೆಳ್ಳಿಯಲ್ಲಿ ದೀಪ, ತಟ್ಟೆ, ಚೊಂಬು, ಪಂಚಪಾತ್ರೆ, ಉದ್ಧರಣೆ, ಕುಂಕುಮ ಬಟ್ಟಲು, ಲಕ್ಷ್ಮಿ ಮುಖವಾಡ, ಇನ್ನಿತರ ಯಾವುದೇ ಪೂಜಾ ಪದಾರ್ಥಗಳು ದೊರೆಯುತ್ತದೆ. ಸಂಪರ್ಕಿಸಿ:
8073309855

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30 ವರ್ಷ. ವಿದ್ಯಾರ್ಹತೆ: 7 ರಿಂದ PUC ಮತ್ತು ITI. ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಮುಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
Mob: 9035381989

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿರುವ A.W.G. ಕಂಪನಿಯೊಂದಕ್ಕೆ Freshers + Experience ಆದ 327 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC = 128, ITI, JOC - 79, Any Degree - 98, MBA - 22. ವಯೋಮಿತಿ: 18 ರಿಂದ 38 ವರ್ಷಗಳು. ತಿಂಗಳಿಗೆ 25000 – 34000 (ಉಚಿತ ವಸತಿ). ಸಂಪರ್ಕಿಸಿ: ಅಮೂಲ್ಯ
9663481922, 9844219943

WANTED
Mathematics (PCM) and Science (CBZ) Teachers immediately for BGS English Medium School.
Contact:
9110867065, 7349306481

WANTED IMMEDIATELY
Accounts Executives, (B.Com / BBM) Male,
Store Incharge, (Any Degree) Male, Age Below 30 yrs, Experience: Min 2 yrs.
Address: THE AKSHAYAPATRA FOUNDATION MYSORE. No. 31, 18th Cross, Jayanagar, Mysore

SITE FOR SALE
30x40
Jnanabharathi Layout 2nd Stage, Dadada Halli, East Face, MUDA Khata, Direct Owner Selling
Price: 21 Lacs
9342123373

AFFIDAVIT
I, Mithur Shyama Bhat, S/o Bhima Bhat. M, residing at 3-2/5, 2nd Floor, Radhakrishna Medicals Building, Ratha Beedi, Kushalnagar, Kodagu-571234 have changed my name from Shama Bhat Mithur to Mithur Shyama Bhat for all future purpose, sworn in before Notary K.B. Maheshkumar on 2.8.2022.
Sd/- Mithur Shyama Bhat

DOCUMENT LOST
I, Javeed Ahmed, No. 27, 1st Cross, KEB Colony, N E of Mahadevapura, Udayagiri, Mysuru-570 019, lost Possession Certificate issued Dtd. 24-5-1974 by the then CITB, Mysore (Now MUDA) of Site No. 27. Finders please contact:
Mob: 9611833228

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಸರ್ಕಲ್‌ನಲ್ಲಿ 1 ಎಕರೆ 4 ಗುಂಟೆ ಮಾವಿನ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ:
7483381701
ಮತ್ತು ಕಂಚಮಳ್ಳಿ ಮುಖ್ಯ ರಸ್ತೆಯಲ್ಲಿ 19 ಗುಂಟೆ ಜಮೀನು ಪೂರ್ತಾ ಅಭಿವೃದ್ಧಿ ಪಡಿಸಲಾಗಿದೆ ಮಾರಾಟಕ್ಕಿದೆ.
9945661696 / 8618848886

WANTED FEMALE TELECALLERS
Language: Kannada, English & Hindi, Qualification: SSLC / PUC / Degree / Post Graduation, Salary: Rs. 8,000 to Rs. 15,000 + Incentive
9538688412

WANTED
Experience in Automobile field with Tally and Computer knowledge
1) Supervisor
2) Electrician
Contact: MARC Industries #68 B/1 L & T Infosys Road, Hootagalli Industrial Area, Belavadi, Mysore - 570018
8050066556
Email: marcindia@rediffmail.com

WANTED TEACHERS
Ideal School Yelwala Hindi and Kannada Language Teachers Retired Teachers can also apply
9900593211
9845353761

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಿಸ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸು ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತತಕ್ಷಣ. ಖಾಯಂ ವಿಳಾಸ: ಸುಬ್ಬರ್ ಬಸ್‌ಸ್ಟ್ಯಾಂಡ್ ಹತ್ತ, ಇರ್ವಿನ್ ರೋಡ್, ಆಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಹತ್ತ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

Star Solar Renewable Energy


JUST Easy EMI 19,499/- 200 Ltr
www.starsolar.net
Old system Exchange offer available
Manufacturing : Belawadi Industrial Sub,Mysore
9945616293 / 9449966293

ಬೇಕಾಗಿದ್ದಾರೆ
ಆಫೀಸ್ ಬಾಯ್, ಸೇಲ್ಸ್ ಗರ್ಲ್ ಸೇಲ್ಸ್ ಸೂಪರ್‌ವೈಸರ್ ಬೇಕಾಗಿದ್ದಾರೆ
ಸಂಬಳ 12000/-
Ph.9380142144

ತಕ್ಷಣ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ ಕೆಲಸ ಮಾಡಲು 7th, SSLC, PUC, ITI, Diploma, Any Degree, Pass / Fail ಆದವರಿಗೆ Cashier, Billing, Data Entry, Receptionist ಮತ್ತು Packers, Movers, Helpers, Maintaner ಮುಂತಾದ ಕೆಲಸಕ್ಕೆ 636 ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಬಳ 14000/– 38000/– (ESI+PF+OT) ಸೇರಿ ಪರತ್ತು ಅನ್ವಯ
99808850141 / 7676939277

ಮನೆ ಬಾಡಿಗೆಗೆ
30x40
ಡಬಲ್ ಬೆಡ್ ರೂಂ, ಅಟ್ಯಾಚ್ ಬಾತ್ ರೂಂ, ಕಾರ್ ಪಾರ್ಕಿಂಗ್. #1080, 3rd Stage, ಕೆಸರೆ, ಕಲ್ಪವೃಕ್ಷನಗರ
9880753956
9880856696

ಮಲ್ಲಿಕಾರ್ಜುನ ಟೂರ್ಸ್
ಗುಜರಾತ್ ವಿಮಾನ ಪ್ರವಾಸ: 3–9–2022 ಪಟೇಲ್ ಪ್ರತಿಮೆ, ನಿಷ್ಕಳಂಕ ಮಹಾದೇವ, ಸೋಮನಾಥ, ನಾಗೇಶ್ವರ, ದ್ವಾರಕ, ಪೋರ್ ಬಂದರ್, ಸಬರಮತಿ ಆಶ್ರಮ ಇತರೆ. ರೂ.29,500/–, 7 ದಿನಗಳು.
8496044942
ತುಮಕೂರು.

ಕಳೆದಿದೆ
ದೇವರಾಜಪ್ಪ, ಕಂದಾಯನಗರ, 1ನೇ ಹಂತ ಶ್ರೀರಾಂಪುರ, 2ನೇ ಹಂತ, ಮೈಸೂರು ನಿವೇಶನ ಸಂಖ್ಯೆ 222 ರ ಅಸಲು ನಿವೇಶನ ಖಾತಾ ಪತ್ರ ಮತ್ತು ಕಂದಾಯಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
9686321717

ಬೇಕಾಗಿದ್ದಾರೆ
ಪ್ರಸಿದ್ಧ ಹೋಟೆಲ್‌ಗಳಿಗೆ ಹೌಸ್ ಕೀಪಿಂಗ್ (House Keeping) ಮತ್ತು ಕಿಚನ್ ಕ್ಲೀನಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ESI, PF, ಆಕರ್ಷಕ ಸಂಬಳ ದೊರೆಯುತ್ತದೆ.
6364443999

FOR SALE
A) 30x40, 30x50 sites available attch Brahmins E block Layout
B) 12x30 s/w corner House Sharada Devi Nagar
C) 20x30 sites in Vijayanagar 4th stage
D) 20x30 G+1 New House University Layout
E) 12 /36 house Near Vijaya Bank Circle Kuvempu Nagar
PRAKRUTHI PROPERTIES
90359 90359 / 95386 90359

ವರಮಹಾಲಕ್ಷ್ಮಿ ಪೂಜೆ ಮಾಡಲು Teapoy ದೊರೆಯುತ್ತದೆ
SHRE SIDDAGANGA FURNITURE
Near Devegowda Circle, Bannur Ring Road, Alanahalli, Mysore - 570028
8217582103 / 9141601765

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
8/9/2022 – ಕಾಶಿ ವಿಶ್ವನಾಥ್, ಜಾರ್ಖಂಡ್, ಬೈದ್ಯನಾಥ್, ಗಯಾ, ಬುದ್ಧ ಗಯಾ, ಚಿತ್ರಕೂಟ, ನೈಮಿಷಾರಣ್ಯ, ಅಯೋಧ್ಯೆ. 10/10/2022– ದೆಹಲಿ, ವೈಷ್ಣೋದೇವಿ, ಕುರುಕ್ಷೇತ್ರ, ಅಮೃತಸರ, ಜಮ್ಮು, ಧರ್ಮಶಾಲಾ, ಚಾಮುಂಡಾ ದೇವಿ, ದೇವಿನಾ ಕಂಗ್ರಾ, ದೇವಿ, ಜ್ವಾಲಾ ದೇವಿ. 3/10– ಶಿರಡಿ, ಎಲ್ಲೋರಾ, ಗೃಷ್ಣೇಶ್ವರ, ಪಂಡರಾಪುರ, ತ್ರಯಂಬಕೇಶ್ವರ, ಕೊಲ್ಲಾಪುರ ಮಹಾಲಕ್ಷ್ಮಿ.
9964527782 / 9591017782

ಕೃಷಿ ಜಮೀನು ಮಾರಾಟಕ್ಕಿದೆ
170 ತೆಂಗಿನ ಗಿಡ, 600 ಸಿಲ್ವರ್ ಮರ, ಸುಸಜ್ಜಿತವಾದ ಕೊಳವೆ ಬಾವಿ ಸೇರಿದಂತೆ ಸರ್ಕಾರಿ ರಸ್ತೆಗೆ ಹೊಂದಿಕೊಂಡಂತಿರುವ 5 ಎಕರೆ ವಿಸ್ತೀರ್ಣ ಕೃಷಿ ಜಮೀನು ಪಿರಿಯಾಪಟ್ಟಣ ತಾಲ್ಲೂಕಿನ 5 ಕಿ.ಮೀ ವ್ಯಾಪ್ತಿ ಒಳಗಡೆ. ಆಸಕ್ತರು ಸಂಪರ್ಕಿಸಿ:
9480477220 / 9449351727

ಬೇಕಾಗಿದ್ದಾರೆ
ಹತ್ತು ಜನಗಳ ಶ್ರೀ ಲೋಕಾಭಿ ರಾಮ ಸಮುದಾಯ ಭವನ (ಟ್ರಸ್ಟ್) ರಿ. ಮೈಸೂರು. ಭೀಮ ಬ್ರದರ್ಸ್ ಜ್ಯೂವೆಲ್ಸ್ ಹಿಂಭಾಗ,
ಗುಮಾಸ್ತರು
9483275575
9448101368

ಸೈಟುಗಳು ಮಾರಾಟಕ್ಕಿದೆ
ಕೆ.ಆರ್.ಪೇಟೆಯ, ಜಯನಗರದಲ್ಲಿ 2 ಸೈಟ್ ಮಾರಾಟಕ್ಕಿದೆ.
9731135888
9743464818

WANTED
Office Asst. Female with Computer Knowledge
Office Boy : Male
Office Location : Bhogadi, Mysore
9591823564

WANTED
Office Assistant cum Computer Operator
(Minimum 2 Years Experience)
(Attractive Salary, ESI and EPF)
Contact: SWISS PVT LTD, Saraswathipuram, Mysore
9164608888 / 9844299888
(Timing 10:00 am to 6:30pm)

ಶಿಕ್ಷಕಿಯರು ಬೇಕಾಗಿದ್ದಾರೆ
ಅನುಭವವುಳ್ಳ ನುರಿತ ಕಂಪ್ಯೂಟರ್ ಶಿಕ್ಷಕಿಯರು. ಏಕಲವ್ಯ ಎಜುಕೇಷನ್ ಫೌಂಡೇಷನ್ ಮೈಸೂರು
6364116745
0821-3553964

ಸೈಟುಗಳು ಬೇಕಾಗಿದೆ
ಮೈಸೂರು ನಗರದ ಸುತ್ತಮುತ್ತ ಇರುವ ಮುಡಾ ಬಡಾವಣೆಗಳಲ್ಲಿ, ಮುಡಾ ಅನುಮೋದಿತ ಬಡಾವಣೆಗಳಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಮಾನ್ಯತೆ ಪಡೆದಿರುವ ಬಡಾವಣೆಗಳಲ್ಲಿ ಮತ್ತು ಇಲವಾಲ ಗ್ರಾಮದ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಸೈಟುಗಳು ಮಾರಾಟಕ್ಕೆ ಬೇಕಾಗಿದೆ
8904010231

WANTED
Service Technician, ITI Holder / 2nd PUC for Home Appliances, Authorized Service Center & Kent RO Water Purifier Service Center. Contact:
9900237315
9845963421

KENT Mineral RO™ Water Purifiers
Authorised Distributors
Available at Whole Sale Prices
Exchange Offers Available
Authorised Service Center
9900237315
9845963421 / 0821-4266495

ಮೈಸೂರು ಮ್ಯಾರೇಜ್ ಲಿಂಕ್ಸ್
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಪ್ರತಿದಿನ ವಧು ವರರ ನೇರ ಸಂದರ್ಶನ ಇರುತ್ತದೆ. Photo & Bio data ವಾಟ್ಸ್‌ಪ್ ಮಾಡಿರಿ. ಡಾ. ಗುರೂಜಿ ಮೈಸೂರು
6361740552
Lady Receptionist ಬೇಕಾಗಿದ್ದಾರೆ

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ವೇತನ: 10,000 ದಿಂದ 11,500/–, ವಯೋಮಿತಿ 22 ರಿಂದ 60 ವರ್ಷದವರೆಗೆ, ವಿದ್ಯಾರ್ಹತೆ: ಕನಿಷ್ಠ SSLC, ಸ್ಥಳ: ಕೂರ್ಗಳ್ಳಿ, ಯಾದವಗಿರಿ, ಬನ್ನಿಮಂಟಪ, ಆಲನಹಳ್ಳಿ, ಸಂಪರ್ಕಿಸಿ:
6361740914
9741513227

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸಿನ ವಯೋಮಿತಿ: 18 ರಿಂದ 35 ರೊಳಗೆ, ಸಾಯಂಕಾಲ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುತ್ತೇವೆ. ಇವರಿಗೆ 8 ರಿಂದ 5 ರವರೆಗೆ
9663991888
9739742344

SALE & RENT
30x50 Site Sale at SBM Layout & R.K.Nagar.
30x40 & 40x60 House Rent at Kuvempunagar, R.K.Nagar & Dattagalli.
9663136318

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,500+W/o ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9880727819

ನಿವೃತ್ತ ನೌಕರರಿಗೆ ಉದ್ಯೋಗ
ನಿವೃತ್ತ ನೌಕರರಿಗೆ ಉದ್ಯೋಗ, ವಿದ್ಯಾರ್ಹತೆ: SSLC, PUC, Degree, ವೇತನ: 10,000/-, 20,000/-, 30,000/- ಹಾಜರು ಪಡಿಸಬೇಕಾದ ದಾಖಲಾತಿಗಳು.
1) ವಿದ್ಯಾರ್ಹತೆ ಅಂಕಪತ್ರ
2) ಆಧಾರ್ ಕಾರ್ಡ್
3) ಪಾನ್ ಕಾರ್ಡ್
4) ಬ್ಯಾಂಕ್ ಪಾಸ್ ಬುಕ್
5) ಪಾಸ್ ಪೋರ್ಟ್ ಅಳತೆ ಫೋಟೋ

9886647852

WANTED
Reputed Hotel in Coorg, looking for Front Office Staffs, Experienced Candidate
8105841401
8105491402

ವಧು-ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE / B.Tech / MBA / MS / MBBS / MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ಸ್ ಡಿಗ್ರಿ ದೇಶಿಯ / ವಿದೇಶಿಯ ವಧು–ವರರ ಮಾಹಿತಿಗೆ ಸಂಪರ್ಕಿಸಿ. ಅಂಚೆಪೇದೆ ಮ್ಯಾಟ್ರಿಮೋನಿ, ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು
7259395800 / 7349224222

FOR SALE
30x40 Duplex Vijayanagar 2nd Stage
9741628964

ನಾಟಿ ಔಷಧ
ಯಾವುದೇ ಆಪರೇಷನ್ ಇಲ್ಲದೇ ಪೈಲ್ಸ್ (ಮೂಲವ್ಯಾಧಿ) ಸಮಸ್ಯೆಗೆ ಮತ್ತು ಮಂಡಿನೋವು ಎಷ್ಟೇ ಹಳೆಯದಾದರೂ ಕೇವಲ 15 ದಿವಸಗಳಲ್ಲಿ ನಾವು ಕೊಡುವ ನಾಟಿ ಔಷಧದಿಂದ ಗುಣವಾಗುತ್ತದೆ.
8951351333

ಸೈಟು ಮಾರಾಟಕ್ಕಿದೆ
ವರುಣಾ ಗ್ರಾಮದ ಬಳಿ ತಿ.ನರಸೀಪುರ – ಮೈಸೂರು ಹೆದ್ದಾರಿಗೆ ಹೊಂದಿಕೊಂಡಿರುವ ಬಡಾವಣೆಯಲ್ಲಿ 30x50 ಅಡಿ ಅಳತೆಯ ನಿವೇಶನ ಮಾರಾಟಕ್ಕಿದೆ. (DTCP Approved) ಸಂಪರ್ಕಿಸಿ:
9448013930

5Kg ಗೋದಿಹಿಟ್ಟು ಉಚಿತ
25Kg BT ರೈಸನ್ನು ಖರೀದಿಸಿದರೆ 5Kg ಬ್ರಾಂಡ್ ಗೋದಿಹಿಟ್ಟು ಉಚಿತ ಗೋದಿಹಿಟ್ಟು ಬೇಡವಾದಲ್ಲ 2Kg ಸಕ್ಕರೆ 1Kg ಫೈನ್ ತೊಗರಿ ಬೇಳೆಯನ್ನು ಉಚಿತವಾಗಿ ಪಡೆಯಿರಿ
ಬೆಲೆ ರೂ 1200/- ಮಾತ್ರ
ಸನ್‌ಶೈನ್ ಟ್ರೇಡರ್ಸ್ ಶಿವರಾಂಪೇಟೆಯ ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ
9206470833 ಮೈಸೂರು

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು, ಬಂಡವಾಳ ನಮ್ಮದು ಬಂದ ಆದಾಯದಲ್ಲಿ 50–50 ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

HOUSE FOR RENT
KRS MAIN ROAD, GOKULAM, MYSURU
9900237315

ಕಳೆದಿದೆ
ನಂ.816, 12ನೇ ಮೇನ್, 13ನೇ ಕ್ರಾಸ್, ಟಿ.ಕೆ.ಲೇಔಟ್, ಮೈಸೂರು –23 ಈ ವಿಳಾಸಕ್ಕೆ ಸಂಬಂಧಪಟ್ಟ ಸ್ವಾಧೀನ ಪತ್ರ ಹಾಗೂ ಮಂಜೂರಾತಿ ಪತ್ರ ಕಳೆದಿದೆ. ಸಿಕ್ಕಿದಲ್ಲಿ ಸಂಪರ್ಕಿಸಿ. ಸಾಗರ್.ಬಿ.
9448048288

TATA ACE ಗೆ ಡ್ರೈವರ್ ಬೇಕಾಗಿದ್ದಾರೆ
ವೇತನ : 15,000/–
ಸ್ಥಳ: ಬನ್ನಿಮಂಟಪ
8884179981

ಕ್ರಿಮಿನಾಶಕ ಸಿಂಪಡನೆ ಮಾಡಲು ಬೇಕಾಗಿದ್ದಾರೆ
ಕನಿಷ್ಠ 10ನೇ ತರಗತಿ ಓದಿದ್ದು, ದ್ವಿಚಕ್ರ ವಾಹನವನ್ನು ಹೊಂದಿದ್ದು, 25 ರಿಂದ 30 ವರ್ಷ ವಯಸ್ಸಿನವರು ಕ್ರಿಮಿನಾಶಕ ಸಿಂಪಡನೆ (Pest Control Services) ಮಾಡಲು ಇಚ್ಛಿಸುವವರು
9844404232
ಗೆ ಕರೆ ಮಾಡುವುದು ತಿಂಗಳಿಗೆ ರೂ.12,000/– ಹಾಗೂ ಇತರ ಭತ್ಯೆಗಳನ್ನು ಹೊಂದಿರುತ್ತದೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕೆಆರ್‌ಎಸ್ ಹೊರಹರಿವು 70 ಸಾವಿರ ಕ್ಯೂಸೆಕ್‌ಗೆ ಹೆಚ್ಚಳ

ಶ್ರೀರಂಗಪಟ್ಟಣ, ಆ.3– ಕಾವೇರಿ ನದಿ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗುತ್ತಿರುವ ಪರಿಣಾಮ ಜಲಾಶಯಕ್ಕೆ ಒಳಹರಿವು ಹೆಚ್ಚಳವಾಗಿದ್ದು, ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಬುಧವಾರ ಸಂಜೆಯಿಂದ 70 ಸಾವಿರ ಕ್ಯೂಸೆಕ್‌ಗೂ ಹೆಚ್ಚಿನ ನೀರನ್ನು ಹೊರ ಬಿಡಲಾಗುತ್ತಿದೆ.

ಪ್ರಸ್ತುತ ಜಲಾಶಯದ ಗರಿಷ್ಠ 124.80 ಅಡಿಗಳಷ್ಟು ನೀರು ತುಂಬಿದ್ದು, 58,062 ಕ್ಯೂಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದ್ದು, ಜಲಾಶಯದಿಂದ ನದಿಗೆ 72,067 ಕ್ಯೂಸೆಕ್ ಹಾಗೂ ನಾಲೆಗೆ 50 ಕ್ಯೂಸೆಕ್ ಸೇರಿ ಒಟ್ಟು 72,117 ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ.

ನದಿ ತೀರದ ಪ್ರವಾಸಿ ತಾಣಗಳಿಗೆ ನಿಷೇಧ: ಕಾವೇರಿ ನದಿಯಲ್ಲಿ ನೀರಿನ ಹರಿವು ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲಾ ಕಾವೇರಿ ನದಿ ತೀರದ ಪ್ರವಾಸಿ ತಾಣದ ಪ್ರದೇಶಗಳ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಆ.3ರಿಂದ ಮುಂದಿನ ಆದೇಶದವರೆಗೆ ಸಾರ್ವಜನಿಕರು, ಪ್ರವಾಸಿಗರ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ತಹಸೀಲ್ದಾರ್ ಶ್ವೇತಾ ಅವರು ಆದೇಶಿಸಿದ್ದಾರೆ.



ಮಂಡ್ಯ ಜಿಲ್ಲೆ ಕೆಆರ್ ಪೇಟೆ ತಾಲೂಕು ಕೊಡಿ ಮಾರನಹಳ್ಳಿ ಗ್ರಾಮದಲ್ಲಿ ಕೆರೆಗಳು ಒಡೆದು ತಗ್ಗು ಪ್ರದೇಶದ ತೋಟದಲ್ಲಿರುವ ಎರಡು ಮನೆಗಳು ಮುಳುಗಿದ್ದು ಮನೆಯಲ್ಲಿ ಸಿಲುಕಿಕೊಂಡ 10 ಜನ, 06 ಜಾನುವಾರು ಒಂದು ನಾಯಿ ರಕ್ಷಣೆ ಮಾಡಲಾಗಿದೆ. ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ಮಂಡ್ಯ ಜಿಲ್ಲೆಯ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ತಿಳಿಸಿದ್ದಾರೆ.

ಮಂಡ್ಯದಲ್ಲಿ ಮುಂದುವರೆದ ಮಳೆ ಅಬ್ಬರ

- ಬೆಂಗಳೂರು ಮೈಸೂರು ಹೆದ್ದಾರಿ ಮತ್ತೆ ಬಂದ್; ಬದಲಿ ಮಾರ್ಗ
- ಹಲವೆಡೆ ಜಮೀನುಗಳು ಜಲಾವೃತ್ತ; ಲಕ್ಷಾಂತರ ರೂ. ನಷ್ಟ



ಮಂಡ್ಯ, ಆ.3– ಸಕ್ಕರೆ ನಾಡು ಮಂಡ್ಯದಲ್ಲಿ ಮಳೆ ಅಬ್ಬರ ಮುಂದುವರೆದಿದ್ದು, ಕಳೆದ ರಾತ್ರಿ ಹಾಗೂ ಬುಧವಾರ ಮಧ್ಯಾಹ್ನ ಸುರಿದ ಭಾರೀ ಮಳೆಗೆ ಮತ್ತೆ ಬೂದನೂರು ಬಳಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಜಲಾವೃತ್ತವಾಗಿದ್ದು, ರಸ್ತೆ ಸಂಚಾರ ಬಂದ್ ಆಗಿದೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಬಂದ್ ಆದ ಪರಿಣಾಮ ಮತ್ತೆ ಕೆ.ಎಂ.ದೊಡ್ಡಿ ಮಾರ್ಗದಲ್ಲಿ ವಾಹನಗಳು ಸಂಚರಿಸಿದವು. ಜೊತೆಗೆ ಮಂಡ್ಯದ ಬೀಡಿ ಕಾಲೋನಿ ಬುಧವಾರವೂ ಸಂಪೂರ್ಣ ಜಲಾವೃತ್ತವಾಗಿದ್ದು, ಇಡೀ ಕಾಲೋನಿ ಕೆರೆಯಂತಾಗಿದೆ.

ಬಡಾವಣೆಯ ನೂರಾರು ಮನೆಗಳಿಗೆ ನೀರು ತುಂಬಿಕೊಂಡಿದ್ದು, ಇದರಿಂದ ಮನೆಯೊಳಗಿದ್ದ ಗೃಹೋಪಯೋಗಿ ವಸ್ತುಗಳು ಹಾಗೂ ದಿನಬಳಕೆ ವಸ್ತುಗಳು ನೀರಿಗೆ ಆಹುತಿಯಾದರೆ, ಮನೆ ಮುಂದೆ ನಿಂತಿದ್ದ ವಾಹನಗಳು ಸಂಪೂರ್ಣ ಜಖಂ ಆಗಿವೆ. ಜೊತೆಗೆ ಇಡೀ ಬಡಾವಣೆಯ ಹಲವು ರಸ್ತೆಗಳು ನೀರಿನಲ್ಲಿ ಮುಳುಗಿದ ಪರಿಣಾಮ ಸಂಚರಿಸಲು ಬಹಳ ಸಮಸ್ಯೆಯಾಗಿವೆ.

ಇನ್ನೂ ಧಾರಾಕಾರ ಮಳೆಗೆ ಮಂಡ್ಯ ಸಮೀಪದ ಶಿವಳ್ಳಿ– ಕೆಬ್ಬಳ್ಳಿ ರಸ್ತೆ ಹೊಡೆದು ಹೋಗಿದ್ದು, ಮಳೆ ನೀರು ಜಮೀನುಗಳಿಗೆ ನುಗ್ಗಿದ ಪರಿಣಾಮ ನೂರಾರು ಎಕರೆ ಕೃಷಿ ಜಮೀನಿನಲ್ಲಿ ಬೆಳೆದಿದ್ದ ಫಸಲು ಹಾನಿಯಾಗಿದೆ. ಚಿಕ್ಕಮಂಡ್ಯ ಸಮೀಪದ ಮಂಡ್ಯ– ಎಡಿಯೂರು ರಸ್ತೆ ಜಲಾವೃತ್ತವಾಗಿದೆ. ಜೊತೆಗೆ ಸಾತನೂರು, ಚಿಕ್ಕಮಂಡ್ಯದ ಹಲವು ಮನೆಗಳಿಗೆ ನೀರು ತುಂಬಿದರೆ ಹಲವು ಕೃಷಿ ಜಮೀನುಗಳು ನಾಶವಾಗಿವೆ.ಶ್ರೀರಂಗಪಟ್ಟಣ ಲೋಕಪಾವನಿ ನದಿ ತುಂಬಿ ಹರಿಯುತ್ತಿದ್ದು, ತಾಲೂಕಿನ ಬಲ್ಲೇನಹಳ್ಳಿ, ಸಬ್ಬನಕುಪ್ಪೆ, ಹನುಮಂತನಗರದ ಹಲವು ಮನೆಗಳು ಜಲಾವೃತ್ತವಾಗಿ ಹಲವು ಕೃಷಿ ಭೂಮಿಗೆ ನೀರು ತುಂಬಿದೆ. ಜೊತೆಗೆ ನಾಗಮಂಗಲದ ಬಸ್ ನಿಲ್ದಾಣ ಜಲಾವೃತ್ತವಾದರೆ, ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಸಿತ ಖಂಡಿದೆ.



ಕಿಕ್ಕೇರಿ ಅಮಾನಿಕೆರೆ ಉಕ್ಕಿ ಹರಿಯುತ್ತಿರುವ ಪರಿಣಾಮ ಕೋಡಿ ಮಾರನಹಳ್ಳಿ ಬಳಿಯ ಮಂಡ್ಯ–ಶಿವಮೊಗ್ಗ ರಾಜ್ಯ ಹೆದ್ದಾರಿ ಜಲಾವೃತಗೊಂಡು ವಾಹನ ಸಂಚಾರ ಸಂಪೂರ್ಣ ಸ್ಥಗಿತ ವಾಗಿದ್ದು, ರಸ್ತೆಯ ಅಕ್ಕಪಕ್ಕದ ಜಮೀನುಗಳು ಜಲಾವೃತ್ತವಾಗಿದೆ.

ಮದ್ದೂರಮ್ಮನ ಕೆರೆ ತುಂಬಿ ರಸ್ತೆ ಜಲಾವೃತ್ತ



ಮದ್ದೂರಿನ ಶಿವಪುರ ಬಳಿ ಬೆಂಗಳೂರು–ಮೈಸೂರು ಹೆದ್ದಾರಿ ಜಲಾವೃತವಾಗಿರುವುದು.

ಮದ್ದೂರು, ಆ.3– ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆಯಲ್ಲಿ ಕಳೆದೆರಡು ದಿನಗಳಿಂದ ಭಾರೀ ಮಳೆಯಾಗುತ್ತಿರುವ ಪರಿಣಾಮ ಪಟ್ಟಣದ ಮೈಸೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿರುವ ಮದ್ದೂರಮ್ಮನ ಕೆರೆಯಲ್ಲಿ ಹೆಚ್ಚಿನ ಪ್ರಮಾಣದ ನೀರು ಹರಿಯುತ್ತಿದ್ದು, ಮೈಸೂರು–ಬೆಂಗಳೂರು ರಸ್ತೆ ಸಂಚಾರ ಬುಧವಾರ ಬೆಳಗ್ಗೆಯಿಂದ ಸಂಜೆವರೆಗೂ ತಾತ್ಕಾಲಿಕವಾಗಿ ಬಂದ್ ಆಗಿದೆ.

ಮದ್ದೂರಮ್ಮನ ಕೆರೆಯ ಸುರಕ್ಷತೆ ದೃಷ್ಟಿಯಿಂದ ತಾಲೂಕು ಆಡಳಿತ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಜೆಸಿಬಿ ಸಹಾಯದಿಂದ ಕೆರೆಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರ ಹರಿದುಹೋಗುವಂತೆ ಮಾಡಿದರು. ಪರಿಣಾಮ ಮೈಸೂರು–ಬೆಂಗಳೂರು ರಸ್ತೆಯಲ್ಲಿ ಸುಮಾರು 3ರಿಂದ 4 ಅಡಿಗಳಷ್ಟು ನೀರು ನಿಂತಿದ್ದು, ಸುಗಮ ವಾಹನ ಸಂಚಾರಕ್ಕೆ ಅಡಿಯಾಗಿದೆ. ಸಂಜೆ ನಂತರ ರಸ್ತೆ ಸಂಚಾರಕ್ಕೆ ಅನುವು ನೀಡಲಾಗಿದ್ದರೂ ಪಟ್ಟಣದಲ್ಲಿ ಮತ್ತೆ ಮಳೆಯಾರಂಭವಾಗಿರುವುದರಿಂದ ಮತ್ತೆ ರಸ್ತೆಯೂ ಜಲಾವೃತ್ತವಾಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ಸದ್ಯ ಬೆಂಗಳೂರಿನಿಂದ ಬರುವ ವಾಹನಗಳು ಮದ್ದೂರು ಪಟ್ಟಣದಿಂದ ಕೆ.ಎಂ.ದೊಡ್ಡಿ– ಮಳವಳ್ಳಿ– ಬನ್ನೂರು ಮಾರ್ಗವಾಗಿ ಮೈಸೂರು ತಲುಪುತ್ತಿದೆ.

ಕಲ್ಲು ಕುಟ್ಟುವವರಿಗೆ ಗಣಿಗಾರಿಕೆಗೆ ಅವಕಾಶ ನೀಡಲು ಆಗ್ರಹ



ಮಂಡ್ಯ, ಆ.3– ಕಲ್ಲು ಕುಟ್ಟುವವರಿಗೆ ಗಣಿಗಾರಿಕೆ ನಡೆಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಕಾವೇರಿಪುರ, ಶಿಂಡಬೋಗನಹಳ್ಳಿ, ಕಣಿವೆಕೊಪ್ಪಲು, ರಾಗಿಮುದ್ದನಹಳ್ಳಿ, ಬನ್ನಂಗಾಡಿ, ಹೊನಗಾನಹಳ್ಳಿ, ಚಿನಕುರುಳಿ ಗ್ರಾಮದ ಕೂಲಿ ಕಾರ್ಮಿಕರು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಮೆರವಣಿಗೆ ಮೂಲಕ ಎಸ್‌ಪಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿ ನಂತರ ಜಿಲ್ಲಾಧಿಕಾರಿ ಕಚೇರಿ ಬಳಿ ಬಂದು ಧರಣಿ ನಡೆಸಿದರು.

ಪಾಂಡವಪುರ ತಾಲೂಕಿನ ಚಿನಕುರಳಿ ಹೋಬಳಿಯ ಹೊನಗಾನಹಳ್ಳಿ, ಚಿನಕುರಳಿ, ಗುಮ್ಮನಹಳ್ಳಿ, ಬನ್ನಂಗಾಡಿ ಗ್ರಾಪಂಗಳ ವ್ಯಾಪ್ತಿಯ ಹಲವು ಗ್ರಾಮಗಳ ಜನರು ಹಲವು ದಶಕಗಳಿಂದಲೂ ಕಲ್ಲು ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೆ ಇತ್ತೀಚೆಗೆ ಸರ್ಕಾರ ಹಾಗೂ ಅಧಿಕಾರಿಗಳು ಕಲ್ಲು ಕುಟುವವರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಎಲ್ಲಾ ಗ್ರಾಮಗಳ ಜನರು ಕೈಯಿಂದ ಕಲ್ಲು ಬಂಡೆ ಹೊಡೆದು, ಸೈಜು, ಕಲ್ಲು, ಚಪ್ಪಡಿಗಳನ್ನು ಕೈಯಲ್ಲಿ ಹೊಡೆದು ಜೀವನ ಸಾಗಿಸುತ್ತಿದ್ದೇವೆ. ಪ್ರಸ್ತುತ ಏಕಾಏಕಿ ಗಣಿಗಾರಿಕೆ ಸ್ಥಗಿತದಿಂದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದು, ಕೂಡಲೇ ಸರ್ಕಾರವು ಪ್ರಾಂತ್ಯದ ಕೂಲಿ ಕಾರ್ಮಿಕರ ಅನುಕೂಲಕ್ಕಾಗಿ ಸ್ಥಳೀಯ ಕಲ್ಲು ಕ್ವಾರೆಗಳನ್ನು ಹಿಂದಿನ ಸರ್ಕಾರದ ಆದೇಶ ರೀತಿ ಪಂಚಾಯಿತಿ ವ್ಯಾಪ್ತಿಗೆ ವಹಿಸಿಕೊಟ್ಟು ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಸಚಿವರ ಭರವಸೆ: ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಚಿವ ಕೆ.ಗೋಪಾಲಯ್ಯ ಹಾಗೂ ಕೆ.ಸಿ.ನಾರಾಯಣಗೌಡ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು. ನಂತರ ಮಾತನಾಡಿದ ಸಚಿವ ಕೆ.ಗೋಪಾಲಯ್ಯ, ಆ. 4ರಂದು ಬೆಂಗಳೂರಿನಲ್ಲಿ ನಡೆಯುವ ಸಭೆಯಲ್ಲಿ ಯಾವುದೇ ಸ್ಫೋಟ ಬಳಸದೆ ಕೈಕುಳಿ ಕೆಲಸ ಮಾಡಲು ಅವಕಾಶ ನೀಡುವ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಬೋವಿ ಸಮಾಜದ ನಾಯಕರಾದ ಕಣಿವೆ ಯೋಗೇಶ್, ಶಂಕರ್, ಮುರುಗೇಶ್, ಪರಮೇಶ್, ಜಗನ್ನಾಥ್ ಸೇರಿದಂತೆ ಸಾವಿರಾರು ಕಾರ್ಮಿಕರು ಭಾಗವಹಿಸಿದ್ದರು.

ಮಳೆ ಹಾನಿ; ಸಂತ್ರಸ್ತರಿಗೆ ಶೀಘ್ರ ಪರಿಹಾರ ನೀಡಲು ಡಿಸಿ ಸೂಚನೆ

ಮಂಡ್ಯ, ಆ.3– ಮಳೆ ಹಾನಿಯುಂಟಾಗಿರುವ ಸ್ಥಳಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಖುದ್ದು ಭೇಟಿ ನೀಡಿ, ಬೆಳೆ ಹಾಗೂ ಮನೆ ಹಾನಿಯುಂಟಾಗಿವರು ಸಂತ್ರಸ್ತರಿಗೆ ಶೀಘ್ರವೇ ಪರಿಹಾರ ನೀಡಲು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವಥಿ ಸೂಚಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಒಟ್ಟಿಗೆ ಸೇರಿ ಜಿಲ್ಲೆಯಲ್ಲಿ ನಿರಂತರ ಮಳೆಯಿಂದ ಹಾನಿಯಾಗಿರುವ ಪ್ರದೇಶಗಳ ಕುರಿತು ಸಂಪೂರ್ಣ ಮಾಹಿತಿ ಪಡೆದು ವರದಿ ಸಲ್ಲಿಸಬೇಕು ಎಂದರು.

ಮಳೆ ಹಾನಿಯಾಗಿರುವ ಪ್ರದೇಶಗಳಿಗೆ ಅಧಿಕಾರಿಗಳೇ ಖುದ್ದಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು. ಮಳೆ ದಿನೇ ದಿನೇ ಹೆಚ್ಚಾಗುತ್ತಿದೆ. ಬಹಳ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಿ. ರಸ್ತೆ ಕುಸಿದಿರುವ ಸ್ಥಳದಲ್ಲಿ ತಾತ್ಕಾಲಿಕವಾಗಿ ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಪಂ ಸಿಇಓ ಶಾಂತ ಎಂ.ಹುಲ್ಮನಿ, ಎಡಿಸಿ ಡಾ.ಹೆಚ್.ಎಲ್.ನಾಗರಾಜು, ತಹಸೀಲ್ದಾರ್ ಕುಂಞ ಅಹಮದ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಆರ್.ಅಶೋಕ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜವರೇಗೌಡ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಸಂಜಯ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಕೋಳಿ, ಮೇಕೆ ಫಾರಂಗೆ ನುಗ್ಗಿದ ಮಳೆ ನೀರು



ಭಾರತೀನಗರ, ಆ.3–ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಸಮೀಪದ ಚಂದೂಪುರ ಗ್ರಾಮದ ಸಿದ್ದರಾಜು ಮತ್ತು ಸ್ವಾಮಿ ಎಂಬುವವರಿಗೆ ಕೋಳಿ ಮತ್ತು ಮೇಕೆ ಫಾರಂಗೆ ಮಳೆ ನೀರು ನುಗ್ಗಿ ಅಪಾರ ನಷ್ಟ ಉಂಟಾಗಿದೆ.

ಶಿಂಷಾನದಿಯಿಂದ ನೀರು ನುಗ್ಗಿರುವ ಪರಿಣಾಮ 500ಕ್ಕೂ ಹೆಚ್ಚು ಕೋಳಿ ಮತ್ತು 16 ಮೇಕೆ, 2 ಹಸುಗಳು ಸಾವನ್ನಪ್ಪಿವೆ. ಜೊತೆಗೆ ಫಾರಂನಲ್ಲಿ 2 ಸಾವಿರಕ್ಕೂ ಹೆಚ್ಚು ಕಾಯಿಗಳನ್ನು ಶೇಖರಣೆ ಮಾಡಲಾಗಿತ್ತು. ಅವು ಸಹ ನೀರಿನಲ್ಲಿ ಕೊಚ್ಚಿಹೋಗಿವೆ. ರೈತ ಕುಟುಂಬಕ್ಕೆ ಸರ್ಕಾರ ಕೂಡಲೇ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮನೆಯ ಗೋಡೆ ಕುಸಿತ: ಎತ್ತುಗಳಿಗೆ ಗಾಯ: ಗುರುದೇವರಹಳ್ಳಿ ಗ್ರಾಮದ ಶಿವಮಾದೇಗೌಡ ಎಂಬುವವರಿಗೆ ಸೇರಿದ ಮನೆಯ ಗೋಡೆ ಕುಸಿದಿದ್ದು, ಅದೃಷ್ಟವಶಾತ್ ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಂಗಳವಾರ ತಡರಾತ್ರಿ ಮನೆಯಲ್ಲಿ ಎಲ್ಲರು ಮಲಗಿದ್ದ ವೇಳ ಗೋಡೆ ಕುಸಿದು ಬಿದ್ದಿದೆ. ಮನೆಯಲ್ಲಿ ಎತ್ತುಗಳನ್ನು ಸಹ ಕಟ್ಟಿಹಾಕಲಾಗಿತ್ತು. ಗೋಡೆ ಕುಸಿದು ಬಿದ್ದಿದ್ದರಿಂದ ಎತ್ತುಗಳು ಗಾಯಗೊಂಡಿವೆ.

ಭಾರೀ ಮಳೆಯಿಂದ ಕೊಡಗು ತಲ್ಲಣ; ಜಲ ಸ್ಫೋಟ

ಕೆಲವೆಡೆ ಭೂ ಕುಸಿತ, ಮನೆ, ಬೆಳೆಗಳಿಗೆ ಭಾರೀ ಹಾನಿ





- ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ ಸಂಚಾರ ಬಂದ್
- ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ನೀರು
- ಜಿಲ್ಲೆಯಲ್ಲಿ ಬೆಳಗ್ಗೆವರೆಗೆ 'ರೆಡ್ ಅಲರ್ಟ್'



ಮಡಿಕೇರಿ,ಆ.3– ಕೊಡಗು–ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಂತಿರುವ ಗಡಿ ಭಾಗಗಳಲ್ಲಿ ಆಶ್ಲೇಷ ಮಳೆ ಆರ್ಭಟಿಸುತ್ತಿದ್ದು, ಇದರಿಂದ ಭಾರೀ ಜಲ ಸ್ಫೋಟ, ಭೂ ಕುಸಿತ, ಪ್ರವಾಹ ಉಂಟಾಗಿ ಜನ ಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದ್ದು, ಪರಿಸ್ಥಿತಿ ಕೈ ಮೀರುವ ಹಂತ ತಲುಪಿದೆ. ಈ ನಡುವೆ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಜಿಲ್ಲೆಯಾದ್ಯಂತ 'ಗುರುವಾರ ಬೆಳಗ್ಗೆ 8.30 ರವರೆಗೆ ರೆಡ್ ಅಲರ್ಟ್ ಘೋಷಣೆ' ಮಾಡಲಾಗಿದೆ. ಮಹಾ ಮಳೆಗೆ ಗ್ರಾಮೀಣ ಭಾಗಗಳ ಜನರ ಬದುಕು ಅತಂತ್ರವಾಗಿದ್ದು ಸಂಪರ್ಕ ರಸ್ತೆ, ಅಡಿಕೆ,

ರಬ್ಬರ್ ತೋಟಗಳು ಜಲಾಮಯವಾಗಿದ್ದರೆ, ಅಲ್ಲಲ್ಲಿ ಮನೆಗಳು ಕೊಚ್ಚಿ ಹೋಗಿವೆ. ಸ್ಥಳೀಯಾಡಳಿತ ನೆರವಿಗೆ ಧಾವಿಸಿದ್ದರೂ, ಜನರು ಮಳೆಯ ಆರ್ಭಟಕ್ಕೆ ಬೆಚ್ಚಿ ಬಿದ್ದಿದ್ದಾರೆ. ಸಂಪಾಜೆ ಸಮೀಪದ ಕತ್ರೋಜೆಯಲ್ಲಿ ಭಾರೀ ಭೂ ಕುಸಿತವಾಗಿ ನದಿ ತನ್ನ ಪಥವನ್ನೇ ಬದಲಿಸಿದೆ. ಪರಿಣಾಮ ಅಡಿಕೆ, ರಬ್ಬರ್, ಕೊಕೋ ತೋಟಗಳು ಕೊಚ್ಚಿ ಹೋಗಿ, ಲಕ್ಷಾಂತರ ರೂ.ನಷ್ಟ ಸಂಭವಿಸಿದೆ. ತಗ್ಗು ಪ್ರದೇಶಗಳಲ್ಲಿ ಪ್ರವಾಹದ ನೀರು ನಿಂತಿದ್ದು, ಅಡಿಕೆ ಗಿಡಗಳು ಕೊಳೆಯುವ ಆತಂಕ ಕಾಡುತ್ತಿದೆ.

ಭಾರೀ ಜಲ ಸ್ಫೋಟ: ಸಂಪಾಜೆ–ದಕ್ಷಿಣ ಕನ್ನಡದ ಗಡಿ ಪ್ರದೇಶ ಕಲ್ಮಕಾರು ಎಂಬ ಪ್ರದೇಶದಲ್ಲಿ ಭಾರೀ ಜಲಸ್ಫೋಟವಾಗಿದೆ. ಇದರಿಂದ ಕಡಮಕಲ್ಲು ಬೆಟ್ಟ ಸಾಲಿನ ಎಡಪಾರ್ಶ್ವದಲ್ಲಿ ಭಾರೀ ಬೆಟ್ಟ ಕುಸಿದು ಕಿ.ಮೀ.ವರೆಗೆ ಮರ, ಬಂಡೆಗಳ ಸಹಿತ ಮಣ್ಣು ಕೊಚ್ಚಿ ಹೋಗಿದೆ. ಭೂ ಕುಸಿತವಾದ ಸ್ಥಳದಲ್ಲಿ ಅಂತರ್ಜಲ ಉಕ್ಕಿ ಹರಿಯುತ್ತಿದ್ದು, ದೂರದಿಂದ ಜಲಪಾತದಂತೆ ಗೋಚರಿಸುತ್ತಿದೆ.

ಭೂ ಕುಸಿತ: ಮಂಗಳವಾರ ನಡುರಾತ್ರಿ ದಬ್ಬಡ್ಕ ಭಾಗದಲ್ಲಿ ಮಳೆ ಆರ್ಭಟಿಸಿದ್ದು, ರಬ್ಬರ್ ತೋಟ ಸಹಿತ ಭೂ ಕುಸಿತವಾಗಿದೆ. ಪರಿಣಾಮ ಬೆಟ್ಟದ ತಳಭಾಗದಲ್ಲಿದ್ದ ಕೊಪ್ಪದ ಬಾಲಕೃಷ್ಣ ಎಂಬುವರ ಮನೆ ಧ್ವಂಸವಾಗಿದೆ. ಭಾರಿ ಮಳೆಯಿಂದ ಅಪಾಯ ಎದುರಾಗುವ ಮುನ್ಸೂಚನೆ ಅರಿವಿದ್ದ ಹಿನ್ನೆಲೆಯಲ್ಲಿ ಭೂ ಕುಸಿತದ ಶಬ್ದ ಕೇಳಿ ಬಂದ ತಕ್ಷಣವೇ ಬಾಲಕೃಷ್ಣ ಮತ್ತವರ ಕುಟುಂಬ ಮನೆಯಿಂದ ಹೊರಗೆ ಓಡಿ ಪ್ರಾಣಾಪಾಯದಿಂದ ಪಾರಾಗಿದ್ದು, ಮನೆಯಲ್ಲಿದ್ದ ವಸ್ತುಗಳು ನಾಶವಾಗಿದೆ. ಚೆಟ್ಟಳ್ಳಿ ಪೊನ್ನತ್‌ಮೊಟ್ಟೆ ಎಂಬಲ್ಲಿ ಭಾರೀ ಮಳೆಗೆ ಅಝೀಜ್ ಫಾತಿಮ ಎಂಬುವರ ಮನೆಯ ಹಿಂಬದಿಯಲ್ಲಿ ಭೂ ಕುಸಿತವಾಗಿದೆ. ಮರ ಕೂಡ ಉರುಳಿ ಮನೆಯ ಮೇಲೆ ಬಿದ್ದಿದ್ದು, ಮನೆಗೆ ಭಾರೀ ಹಾನಿ ಸಂಭವಿಸಿದೆ. ಮನೆಯಲ್ಲಿ ಓರ್ವ ಬಾಣಂತಿ 2 ತಿಂಗಳ ಹಸುಗೂಸು ಸಹಿತ ಬಡ ಕುಟುಂಬ ಮಳೆಯ ಅವಾಂತರಕ್ಕೆ ಕಂಗಾಲಾಗಿದ್ದಾರೆ. ಘಟನಾ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು, ಗ್ರಾಪಂ ಪ್ರತಿನಿಧಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೊಚ್ಚಿ ಹೋದ ರಸ್ತೆ: ಕಳೆದ ಎರಡು ದಿನಗಳಿಂದ ಮಡಿಕೇರಿ ತಾಲೂಕಿನ ಗಡಿ ಗ್ರಾಮಗಳಲ್ಲಿ ಭಾರೀ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ನದಿ ತೊರೆಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಸರಣಿ ಭೂ ಕಂಪನಗಳಿಗೆ ಸಾಕ್ಷಿಯಾಗಿದ್ದ ಚೆಂಬು ಗ್ರಾಮದ ಮಾರ್ಪಡ್ಕ ಎಂಬಲ್ಲಿ ಭಾರೀ ಮಳೆ ನೀರಿಗೆ ಮೋರಿಯೇ ಕೊಚ್ಚಿ ಹೋಗಿದೆ. ಪರಿಣಾಮ ಊರುಬೈಲು–ಬಾಲೆಂಬಿ–ಸಂಪಾಜೆ ನಡುವೆ ರಸ್ತೆ ಸಂಪರ್ಕ ಕಡಿತವಾಗಿದ್ದು, ಗ್ರಾಮಸ್ಥರು ಪರದಾಡುವಂತಾಗಿದೆ.

ಕಲ್ಲುಗುಂಡಿ ಮಸಿ: ಮದೆನಾಡು, ಜೋಡುಪಾಲ, ಕತ್ರೋಜೆ ಕೊಯನಾಡು, ಸಂಪಾಜೆ, ಕಲ್ಲುಗುಂಡಿ, ಕಡಮಕಲ್ಲು ವ್ಯಾಪ್ತಿಯಲ್ಲಿ ಭಾರೀ ಮಳೆಯಾಗುತ್ತಿದ್ದು, ಪಯಸ್ವಿನಿ ನದಿ ಪ್ರವಾಹ ಮಟ್ಟ ಮೀರಿ ಹರಿಯುತ್ತಿದೆ. ಮಂಗಳವಾರ ನಡುರಾತ್ರಿ ಎಡೆಬಿಡದೆ ಸುರಿದ ಮಳೆಯಿಂದ ಕಲ್ಲುಗುಂಡಿಯ ಪೆಟ್ರೋಲ್ ಬಂಕ್ ಸಮೀಪದ ಸೇತುವೆಯಲ್ಲಿ ಪ್ರವಾಹ ನೀರು ಉಕ್ಕರಿದು 2ನೇ ಬಾರಿಗೆ ಕಲ್ಲುಗುಂಡಿಯಲ್ಲಿರುವ ಹತ್ತಾರು ಮನೆ ಮಳಿಗೆಗಳಿಗೆ ನೀರು ನುಗ್ಗಿ ಲಕ್ಷಾಂತರ ರೂ. ಹಾನಿ ಸಂಭವಿಸಿದೆ. ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕಲ್ಲುಗುಂಡಿ ಪ್ರದೇಶ ಪ್ರವಾಹಕ್ಕೆ ಸಿಲುಕಿದ್ದು, ಅಲ್ಲಿನ ನಿವಾಸಿಗಳು ಬೆಚ್ಚಿ ಬಿದ್ದಿದ್ದಾರೆ. ಎಲ್ಲಾ ಅಂಗಡಿ ಮಳಿಗೆಗಳಿಗೆ ಕೆಸರು ನೀರು ನುಗ್ಗಿದ್ದು, ಬುಧವಾರ ಕಲ್ಲುಗುಂಡಿಯಲ್ಲಿ ಯಾವುದೇ ಅಂಗಡಿಗಳು ಬಾಗಿಲು ತೆರೆಯದ ಹಿನ್ನೆಲೆಯಲ್ಲಿ ಅಘೋಷಿತ ಬಂದ್ ವಾತಾವರಣ ಮನೆ ಮಾಡಿತ್ತು.

ಹೆದ್ದಾರಿ ಸಂಚಾರ ಬಂದ್: ಪಯಸ್ವಿನಿ ನದಿಯಲ್ಲಿ ಏಕಾಏಕಿ ಪ್ರವಾಹ ಉಕ್ಕೇರಿದ ಕಾರಣ ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275 ಸಂಪೂರ್ಣ ಬಂದ್ ಆಗಿತ್ತು. ಮಂಗಳವಾರ ಮಧ್ಯರಾತ್ರಿ 12.30ರ ವೇಳೆಗೆ ನದಿ ಪ್ರವಾಹ ಉಕ್ಕೇರಿದ್ದು, ನೂರಾರು ವಾಹನಗಳು ಸಂಚರಿಸಲಾಗದೆ, ಹೆದ್ದಾರಿ ಉದ್ದಕ್ಕೂ ಸಾಲುಗಟ್ಟಿ ನಿಂತಿದ್ದವು. ಈ ಸೇತುವೆಯ ಮೇಲೆ 5 ಅಡಿಗೂ ಹೆಚ್ಚು ನೀರು ಹರಿದ ಪರಿಣಾಮ ಯಾವುದೇ ವಾಹನಗಳು ಬೆಳಗಿನ 6 ಗಂಟೆಯವರೆಗೆ ಸಂಚರಿಸಲು ಸಾಧ್ಯವಾಗಲಿಲ್ಲ. ತಕ್ಷಣವೇ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೋಟ್ ವ್ಯವಸ್ಥೆ ಮಾಡುವ ಮೂಲಕ ನದಿ ನೀರಿನಿಂದ ಮನೆಗಳಲ್ಲಿ ಸಿಲುಕಿಕೊಂಡ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಿದರು.

ನದಿ ನೀರಿನ ಪ್ರವಾಹದಲ್ಲಿ ಕೆಎಸ್‌ಆರ್‌ಟಿಸಿ ಸಂಸ್ಥೆಯ ಬಸ್ ಒಂದು ಸಿಲುಕಿಕೊಂಡು ಅದರಲ್ಲಿದ್ದ 9 ಮಂದಿ ಪ್ರಯಾಣಿಕರು ಪರದಾಡುವಂತಾಗಿತ್ತು. ಬೋಟ್‌ಗಳ ಸಹಾಯದಿಂದ ಪ್ರಯಾಣಿಕರನ್ನು ರಕ್ಷಿಸಲಾಗಿದೆ ಎಂದು ವರದಿಯಾಗಿದೆ. ಪಸ್ತುತ ನದಿ ನೀರಿನ ಪ್ರವಾಹದಲ್ಲಿ ಇಳಿಕೆಯಾಗಿದ್ದು, ವಾಹನ ಸಂಚಾರ ಮುಂದುವರೆದಿದೆ.

ರಾತ್ರಿ 'ರಣಮಳೆ': ಜಿಲ್ಲೆಯಲ್ಲಿ ರಾತ್ರಿ ವೇಳೆ ಆಶ್ಲೇಷ ಮಳೆ ಗುಡುಗು ಸಹಿತ ತನ್ನ ಆರ್ಭಟ ತೋರುತ್ತಿದೆ. ಹಗಲಿನ ವೇಳೆ ಬಿಡುವು ಕಂಡು ಬರುತ್ತಿದ್ದು, ನಡು ರಾತ್ರಿ ಗಾಳಿ ಸಹಿತ ರಣ ಮಳೆ ಸುರಿಯುತ್ತಿದೆ. ಈ ರಾತ್ರಿ ಮಳೆಯೇ ಇದೀಗ ಆತಂಕ ಮೂಡಿಸುತ್ತಿದ್ದು, ಸದ್ದಿಲ್ಲದೇ ಹಾನಿ ಮಾಡುತ್ತಿದೆ. ಅದರಲ್ಲೂ ಈ ಬಾರಿ ಸರಣಿ ಭೂ ಕಂಪನಗಳಿಗೆ ತುತ್ತಾಗಿದ್ದ ಮಡಿಕೇರಿ ತಾಲೂಕಿನ ಗಡಿ ಗ್ರಾಮಗಳಲ್ಲಿ ಮಳೆ ತನ್ನ ಪ್ರತಾಪ ತೋರುತ್ತಿದ್ದು, ಭೂ ಕುಸಿತ, ಜಲ ಸ್ಫೋಟದಂತಹ ಪ್ರಾಕೃತಿಕ ವಿಕೋಪಗಳನ್ನು ಸೃಷ್ಟಿಸುತ್ತಿದೆ.

ಕೊಡಗಲ್ಲಿ ಉಕ್ಕುತ್ತಿರುವ ಅಂತರ್ಜಲ

- ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಭಾರೀ ಬಿರುಕು
- ಮಳೆ ಮುಂದುವರೆದರೆ ಸಂಚಾರ ಬಂದ್ ಸಾಧ್ಯತೆ



ಮಡಿಕೇರಿ, ಆ.3– ಜಿಲ್ಲೆಯಲ್ಲಿ ಸುರಿಯುತ್ತಿರುವ ಆಶ್ಲೇಷ ಮಳೆಯಿಂದಾಗಿ ಅಂತರ್ಜಲ ಉಕ್ಕುತ್ತಿದ್ದು, ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಉಂಟಾಗಿ ಬಿರುಕುಗಳು ಮತ್ತಷ್ಟು ಹೆಚ್ಚಾಗಿದೆ. ದೇವರಕೊಲ್ಲಿ–ಕೊಯನಾಡು ಮಾರ್ಗದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂದಾಜು 30 ಮೀಟರ್ ಉದ್ದಕ್ಕೂ ಬಿರುಕುಗಳು ಬಾಯ್ತೆರೆದುಕೊಂಡಿದ್ದು, ರಸ್ತೆ ಅಲ್ಪ ಪ್ರಮಾಣದಲ್ಲಿ ತಗ್ಗಲ್ಪಟ್ಟಿದೆ. ಇದೇ ರೀತಿ ಮಳೆ ಮುಂದುವರೆದಲ್ಲಿ ರಾಷ್ಟ್ರೀಯ ಹೆದ್ದಾರಿ ಕುಸಿಯಲಿದ್ದು, ಸಂಚಾರ ಸಂಪೂರ್ಣ ಬಂದ್ ಆಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿದೆ. ಹೆದ್ದಾರಿಯ ಸುರಕ್ಷತಾ ದೃಷ್ಟಿಯಿಂದ ಸಾರಿಗೆ ವಾಹನಗಳು ಹಾಗೂ ಅಗತ್ಯ ವಸ್ತು ಸಾಗಾಟದ ವಾಹನಗಳನ್ನು ಹೊರತುಪಡಿಸಿ ಎಲ್ಲಾ ರೀತಿಯ ಭಾರೀ ವಾಹನಗಳ ಸಂಚಾರವನ್ನು ಬಂದ್ ಮಾಡಲಾಗಿದೆ

ಹೆದ್ದಾರಿ ಸೇತುವೆಗೆ ಹಾನಿ: ಕೊಯನಾಡು ಇತಿಹಾಸ ಪ್ರಸಿದ್ಧ ಗಣಪತಿ ದೇವಾಲಯದ ಮುಂಭಾಗ ಇರುವ ಹೆದ್ದಾರಿ ಸೇತುವೆಯ ಒಂದು ಭಾಗ ನದಿ ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ. ಸೇತುವೆಯ ತಡೆಗೋಡೆ ಪಕ್ಕದಲ್ಲೇ ಮಣ್ಣು ಕೊಚ್ಚಿ ಹೋದ ಭಾಗ ಸುರಂಗ ದಂತಾಗಿದೆ. ರಾಷ್ಟ್ರೀಯ ಹೆದ್ದಾರಿ ಸೇತುವೆಯ ಸುರಕ್ಷತೆಯ ದೃಷ್ಟಿಯಿಂದ ಮುಂಜಾಗೃತಾ ಕ್ರಮವಾಗಿ ಸ್ಥಳದಲ್ಲಿ ಎಂ.ಸ್ಯಾಂಡ್ ಮೂಟೆಗಳನ್ನು ಅಳವಡಿಸಲಾಗುತ್ತಿದೆ ನಿರಂತರ ಮಳೆ ಮತ್ತು ಪಯಸ್ವಿನಿ ನದಿಯಲ್ಲಿ ಭಾರೀ ಪ್ರಮಾಣದಲ್ಲಿ ನೀರು ಹರಿಯುತ್ತಿರುವ ಕಾರಣ ಸೇತುವೆ ದುರಸ್ತಿ ಕಾರ್ಯ ಅಸಾಧ್ಯವಾಗಿದ್ದು, ಮಳೆ ಬಿಡುವು ನೀಡಿದ ಬಳಿಕವೇ ಶಾಶ್ವತ ಪರಿಹಾರ ಕಾಮಗಾರಿ ನಡೆಸಲಾಗುತ್ತದೆ ಎಂದು ಹೇಳಲಾಗುತ್ತಿದೆ.

ಶ್ರೀರಂಗಪಟ್ಟಣ ವ್ಯಾಪ್ತಿ ನಾಲೆಯಲ್ಲಿ ದೊರೆತ ಮಹಿಳೆಯರ ಮುಂಡಗಳ ರಹಸ್ಯ ಬಯಲು

ಸೀರಿಯಲ್ ಕಿಲ್ಲರ್, ಆತನ ಪ್ರೇಯಸಿ ಬಂಧನ?

ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಆ.3–ಇಬ್ಬರು ಮಹಿಳೆಯರ ರುಂಡ–ಮುಂಡ ಬೇರ್ಪಡಿಸಿ ಬರ್ಬರವಾಗಿ ಹತ್ಯೆಗೈದು ನಾಲೆ ನೀರಿನಲ್ಲಿ ಬಿಸಾಕಿದ್ದ ಪ್ರಕರಣವನ್ನು ಭೇದಿಸುವಲ್ಲಿ ಶ್ರೀರಂಗಪಟ್ಟಣ ಉಪ ವಿಭಾಗದ ಪೊಲೀಸರು ಯಶಸ್ವಿಯಾಗಿದ್ದಾರೆ.

ಇಬ್ಬರೂ ಮಹಿಳೆಯರ ಮುಂಡಗಳು ಇತ್ತೀಚೆಗೆ ದೊರೆತಿದ್ದವು. ಹೀಗಾಗಿ ಹತ್ಯೆಗೀಡಾದ ಮಹಿಳೆಯರು ಯಾರು ಎಂಬುದೇ ಗೊತ್ತಾಗದಂತಹ ಈ ಪ್ರಕರಣ ಪೊಲೀಸರಿಗೆ ಸವಾಲಾಗಿ ಪರಿಣಮಿಸಿತ್ತು. ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಮತ್ತು ಮಂಡ್ಯ ಜಿಲ್ಲಾ ಎಸ್ಪಿ ಯತೀಶ್ ಅವರು, ತಮ್ಮ ಸೇವಾವಧಿಯಲ್ಲಿ ಹಲವಾರು ಕಠಿಣ ಪ್ರಕರಣಗಳನ್ನು ಭೇದಿಸಿರುವ ಶ್ರೀರಂಗಪಟ್ಟಣ ಉಪ ವಿಭಾಗದ ಡಿವೈಎಸ್‌ಪಿ ಸಂದೇಶ್‌ಕುಮಾರ್ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಿದ್ದರು.

ಈ ತಂಡವು ಕಳೆದ ಒಂದು ತಿಂಗಳಿಂದ ಹಲವಾರು ಕೋನಗಳಲ್ಲಿ ತನಿಖೆ ನಡೆಸಿ ಕೊನೆಗೂ ಓರ್ವ ವೇಶ್ಯೆ ಹಾಗೂ ಆಕೆಯ ಪ್ರಿಯಕರನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ ಈ ಪ್ರಕರಣ ಬಯಲಾಗಿದೆ. ಇವರಿಬ್ಬರೂ ರಾಜ್ಯದ ಹಲವೆಡೆ ಇದೇ ರೀತಿ ಮಹಿಳೆಯರನ್ನು ಕೊಂದು ಅವರ ಬಳಿ ಇದ್ದ ಚಿನ್ನಾಭರಣ ಹಾಗೂ ನಗದು ಕಸಿದುಕೊಂಡು ಗುರುತು ಸಿಕ್ಕಬಾರದು ಎಂದು ರುಂಡ–ಮುಂಡವನ್ನು ಬೇರ್ಪಡಿಸಿ, ಮುಂಡವನ್ನು ಮಾತ್ರ ಹರಿಯುವ ನೀರಲ್ಲಿ ಬಿಸಾಕುತ್ತಿದ್ದ ಬೆಚ್ಚಿ ಬೀಳುವಂತಹ ವಿಷಯಗಳು ಬೆಳಕಿಗೆ ಬಂದಿವೆ ಎಂದು ಹೇಳಲಾಗಿದೆ.

ಪಾಂಡವಪುರ ಹಾಗೂ ಅರಕೆರೆ ಪೊಲೀಸ್ ಠಾಣಾ ಸರಹದ್ದಿನ ನಾಲೆಗಳಲ್ಲಿ ಜೂ.7ರಂದು ಇಬ್ಬರು ಮಹಿಳೆಯರ ಮುಂಡಗಳು ದೊರೆತಿದ್ದು, ಇವು ಯಾರದು ಎಂಬುದು ಈಗ ಪತ್ತೆಯಾಗಿದೆ ಎನ್ನಲಾಗಿದ್ದು, ಇವರನ್ನು ಮೈಸೂರು ನಗರದ ಮೇಟಗಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಹತ್ಯೆಗೈದು ದೇಹಗಳನ್ನು ಮಂಡ್ಯ ಜಿಲ್ಲೆಯಲ್ಲಿ ಚಿಕ್ಕದೇವರಾಜ ನಾಲೆಗೆ ಬಿಸಾಕಿದ್ದರು ಎಂದು ಹೇಳಲಾಗುತ್ತಿದೆ. ಈ ಹಂತಕರು ಹತ್ಯೆಗೀಡಾದ ಮಹಿಳೆಯರ ರುಂಡಗಳನ್ನು ಎಲ್ಲಿ ವಿಲೇವಾರಿ ಮಾಡಿದ್ದರು ಎಂಬುದನ್ನೂ ಕೂಡ ವಿಶೇಷ ತಂಡ ಪತ್ತೆ ಹಚ್ಚಿದೆ ಎಂದು ಮೂಲಗಳು ತಿಳಿಸಿವೆ.

ಈ ಖತರ್ನಾಕ್ ಜೋಡಿ ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಮಹಿಳೆಯರನ್ನೇ ಗುರಿಯಾಗಿಟ್ಟುಕೊಂಡು ಈ ರೀತಿ ಹತ್ಯೆಗಳನ್ನು ಮಾಡಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕೂಡ ಇದೇ ರೀತಿ ಹತ್ಯೆ ಮಾಡಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆಯಂತೆ.

ಚಾಮರಾಜನಗರದವನು: ಈ ಪ್ರಕರಣದಲ್ಲಿ ಬಂಧಿಯಾಗಿರುವ ಸೀರಿಯಲ್ ಕಿಲ್ಲರ್ ಚಾಮರಾಜನಗರ ಜಿಲ್ಲೆಯವನಾಗಿದ್ದು, ಈ ಹಿಂದೆ ಹಲವಾರು ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂದು ಹೇಳಲಾಗಿದೆ. ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆ ಈತನ ಪ್ರೇಯಸಿಯಾಗಿದ್ದಳು. ಆಕೆ ವೇಶ್ಯಾವಾಟಿಕೆ ದಂಧೆ ಮೂಲಕ ಪರಿಚಯವಾಗಿದ್ದ ಮಹಿಳೆಯರನ್ನು ಮೊಬೈಲ್ ಮೂಲಕ ಸಂಪರ್ಕಿಸಿ, ಪ್ರಿಯಕರನೊಡಗೂಡಿ ಅವರೊಂದಿಗೆ ದಿನಪೂರ್ತಿ ಕಳೆದು ರಾತ್ರಿ ಮಲಗಿದ್ದ ವೇಳೆ ಅವರನ್ನು ಹತ್ಯೆ ಮಾಡಿ ಮೃತದೇಹವನ್ನು ತುಂಡರಿಸಿ, ಮುಂಡವನ್ನು ಮಾತ್ರ ಹರಿಯುವ ನೀರಿಗೆ ಎಸೆಯುತ್ತಿದ್ದರು ಎಂದು ವಿಚಾರಣೆ ವೇಳೆ ತಿಳಿದು ಬಂದಿದೆ ಎನ್ನಲಾಗಿದೆ.

ಈ ಖತರ್ನಾಕ್ ಜೋಡಿ ಮೂವರು ಮಹಿಳೆಯರನ್ನು ಹತ್ಯೆ ಮಾಡಿರುವ ಬಗ್ಗೆ ಪ್ರಾಥಮಿಕ ವಿಚಾರಣೆ ವೇಳೆ ಗೊತ್ತಾಗಿದೆ ಎನ್ನಲಾಗಿದ್ದು, ಇನ್ನೂ ಎಷ್ಟು ಮಹಿಳೆಯರನ್ನು ಇವರು ಹತ್ಯೆ ಮಾಡಿದ್ದಾರೆ ಎಂಬುದರ ಬಗ್ಗೆ ಮುಂದಿನ ತನಿಖೆಯಿಂದ ಗೊತ್ತಾಗಬೇಕಾಗಿದೆ. ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರನ್ನು ಕೊಲೆ ಮಾಡಿ ಮುಂಡವನ್ನು ಮಾತ್ರ ಹರಿಯುವ ನೀರಿನಲ್ಲಿ ಬಿಸಾಕುತ್ತಿದ್ದರೆಂಬುದು ತನಿಖೆಯಲ್ಲಿ ತಿಳಿದು ಬಂದಿರುವುದರಿಂದ ಇಂತಹ ಮೃತದೇಹಗಳು ರಾಜ್ಯದ ಎಲ್ಲೆಲ್ಲಿ ದೊರೆತಿವೆ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲು ಮಂಡ್ಯ ಜಿಲ್ಲಾ ಪೊಲೀಸರು ರಾಜ್ಯದ ಎಲ್ಲಾ ಠಾಣೆಗಳಿಗೂ ಸಂದೇಶ ರವಾನಿಸಿದ್ದಾರೆ ಎಂದು ಹೇಳಲಾಗಿದ್ದು, ವಿವರಗಳು ಬಂದ ನಂತರ ಈ ಜೋಡಿ ನಡೆಸಿರುವ ಸರಣಿ ಹತ್ಯೆಗಳು ಎಷ್ಟು ಎಂಬುದು ಬೆಳಕಿಗೆ ಬರಲಿದೆ ಎಂದು ಮೂಲಗಳು ಹೇಳಿವೆ.

ಕಾನೂನು ಪದವೀಧರರ ಶಿಷ್ಯವೇತನ ವಿಳಂಬ ಖಂಡಿಸಿ ಪ್ರತಿಭಟನೆ



ಮೈಸೂರು, ಆ.3(ಎಸ್‌ಪಿಎನ್)– ಕಾನೂನು ಪದವೀಧರರ ಶಿಷ್ಯವೇತನ ವಿಳಂಬ ಮತ್ತು ಎಸ್ಸಿ–ಎಸ್ಟಿ ವಿದ್ಯಾರ್ಥಿಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಯುವ ವೇದಿಕೆ, ಡಿಎಸ್‌ಎಸ್ ಮತ್ತು ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಪಡುವಾರಹಳ್ಳಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ವಕೀಲ ಎನ್.ಪುನೀತ್ ಹಾಗೂ ಕಲ್ಲಹಳ್ಳಿ ಕುಮಾರ್ ವಹಿಸಿ, ಸರ್ಕಾರ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿದರು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್ಸಿ–ಎಸ್ಟಿ ವಿದ್ಯಾರ್ಥಿಗಳ ಉಚಿತ ಪ್ರವೇಶಾತಿ ರದ್ದುಗೊಳಿಸಿರುವುದು ಹಾಗೂ ವಸತಿ ನಿಲಯಗಳಲ್ಲಿ ಮೂಲಸೌಕರ್ಯ ಒದಗಿಸುವಂತೆ ಒತ್ತಾಯಿಸಿದರಲ್ಲದೆ, ಸಮಾಜ ಕಲ್ಯಾಣ ಇಲಾಖೆಯಡಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ನಿಲಯಗಳಲ್ಲಿ ಮೂಲಸೌಕರ್ಯ ಕೊರತೆಯಿದ್ದು, ಈ ಸಮಸ್ಯೆಯನ್ನು ಸರಿಪಡಿಸುವಂತೆ ಒತ್ತಾಯಿಸಿದರು.

ಕಾನೂನು ಪದವೀಧರರಿಗೆ ಕಳೆದ 8 ತಿಂಗಳಿಂದ ಶಿಷ್ಯ ವೇತನ ಬಿಡುಗಡೆ ಮಾಡದೇ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ. ಅಲ್ಲದೆ, 2–3 ವರ್ಷಗಳಿಂದ ಪದವೀಧರರಿಗೆ ನೀಡುತ್ತಿದ್ದ ನಗದು ಬಹುಮಾನವನ್ನು ಬಾಕಿ ಅನುದಾನ ಬಿಡುಗಡೆ ಮಾಡಿಲ್ಲ. ಅಲ್ಲದೆ, ಎಸ್ಸಿ–ಎಸ್ಟಿ ವಿದ್ಯಾರ್ಥಿಗಳ ಗುಣಮಟ್ಟದ ವಿದ್ಯಾಭ್ಯಾಸಕ್ಕಾಗಿ ದಿನನಿತ್ಯ ಜಾಹಿರಾತುಗಳಲ್ಲಿ ತೋರಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲ. ಕೇವಲ ತೋರಿಕೆಗಾಗಿ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಿ, ವಿದ್ಯಾರ್ಥಿಗಳನ್ನು ಸರ್ಕಾರ ವಂಚಿಸುತ್ತಿದೆ ಎಂದು ಆರೋಪಿಸಿದರು. ವಿಷಯ ತಿಳಿಸಿದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವಿಕುಮಾರ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಪ್ರತಿಭಟನಾಕಾರರು 8 ಬೇಡಿಕೆಗಳ ಮನವಿ ಪತ್ರವನ್ನು ಸ್ವೀಕರಿಸಿದರು. ಈ ವೇಳೆ ಪದವೀಧರರಾದ ಪರಂಜ್ಯೋತಿ, ಪ್ರದೀಪ್, ನಂದೀಶ್ ಇತರರಿದ್ದರು.

ಸಿದ್ದರಾಮೋತ್ಸವದ ಆಕರ್ಷಕ ಚಿತ್ರಾವಳಿಗಳು...


ದಾವಣಗೆರೆಯ ನಗರ ದೇವತೆ ದುರ್ಗಾಂಬಿಕಾ ದೇವಿ ದರ್ಶನ ಪಡೆದ ಸಿದ್ದರಾಮಯ್ಯ.


ದಾವಣಗೆರೆಯ ಹಜರತ್ ಷಾ ವಲಿ ದರ್ಗಾಗೆ ಸಿದ್ದರಾಮಯ್ಯ ಭೇಟಿ ನೀಡಿ, ಭಕ್ತಿ ಸಮರ್ಪಿಸಿದರು.


ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠಕ್ಕೆ ಸಿದ್ದರಾಮಯ್ಯ ಭೇಟಿ ನೀಡಿ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳ ಆಶೀರ್ವಾದ ಪಡೆದರು.


ಸಿದ್ದರಾಮಯ್ಯ ಅವರನ್ನು ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್ ಅಭಿನಂದಿಸಿದರು.



ಸಿದ್ದರಾಮೋತ್ಸವದಲ್ಲಿ ಪಾಲ್ಗೊಂಡಿದ್ದ ಆಕರ್ಷಿತ ಹುಲಿ ವೇಷಧಾರಿಗಳು.


ಜೋಡೆತ್ತಿನ ಬಂಡಿಯಲ್ಲಿ ಸಿದ್ದರಾಮಯ್ಯನವರ ಭಾವಚಿತ್ರದ ಜಂಬೂ ಸವಾರಿ.


ಬುಧವಾರ ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನವರ ಸರ್ಕಾರದ ಅವಧಿಯ ಸಾಧನೆ ಪುಸ್ತಿಕೆಯನ್ನು ರಾಹುಲ್ ಗಾಂಧಿ ಬಿಡುಗಡೆ ಮಾಡಿದರು.

ಸಾಮೂಹಿಕವಾಗಿ ಚುನಾವಣೆ ಎದುರಿಸುತ್ತೇವೆ; ನಾಯಕತ್ವವನ್ನು ಹೈಕಮಾಂಡ್ ನಿರ್ಧರಿಸುತ್ತದೆ

ಹುಬ್ಬಳ್ಳಿ, ಆ.3– ಕಾಂಗ್ರೆಸ್‌ನಲ್ಲಿ ಸಿಎಂ ಖುರ್ಚಿಗಾಗಿ ಬಣ ಬಡಿದಾಟವಾಗುತ್ತಿರುವ ಮಧ್ಯೆ ಸಿದ್ದರಾಮೋತ್ಸವಕ್ಕೆ ಬಂದಿದ್ದ ಎಐಸಿಸಿ ನಾಯಕರು ಅಧಿಕಾರಕ್ಕಾಗಿ ಬಡಿದಾಡುತ್ತಿರುವ ನಾಯಕರಿಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.



ಮಂಗಳವಾರ ರಾತ್ರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ರಾಜಕೀಯ ವ್ಯವಹಾರಗಳ ಸಮಿತಿಯ ಪ್ರಥಮ ಸಭೆ ನಡೆದಿದ್ದು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮುಂಬರುವ ವಿಧಾನಸಭೆ ಚುನಾವಣೆಯನ್ನು ಸಮರ್ಥವಾಗಿ ಎದುರಿಸುವುದು ರಾಜ್ಯ ಕಾಂಗ್ರೆಸ್‌ನ ಮುಂದಿರುವ ಸದ್ಯದ ಗುರಿ. ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ನಂತರ ಯಾರು ಮುಖ್ಯಮಂತ್ರಿಯಾಗುತ್ತಾರೆ ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ. ನಮ್ಮಲ್ಲಿ ನಾಯಕತ್ವದ ಕುರಿತು ಗೊಂದಲವಿಲ್ಲ. ವೈಯಕ್ತಿಕ ಹೇಳಿಕೆಗಳನ್ನು ಪಕ್ಷ ಸಹಿಸಿಕೊಳ್ಳುವುದಿಲ್ಲ. ಚುನಾವಣೆ ನಂತರವೇ ಹೈಕಮಾಂಡ್ ನಾಯಕತ್ವವನ್ನು ನಿರ್ಧಾರ ಮಾಡಲಿದೆ ಎಂದು ಸ್ಪಷ್ಟ ಸಂದೇಶ ನೀಡಿದರು.

ಮುಂದಿನ ಚುನಾವಣೆಗೆ ಪಕ್ಷದಿಂದ ಅಭ್ಯರ್ಥಿಗಳನ್ನು ಘೋಷಿಸುವ ವಿಚಾರದಲ್ಲಿ, ಅಭ್ಯರ್ಥಿಗಳನ್ನು ಘೋಷಿಸುವಲ್ಲಿ, ಚುನಾವಣೆಯನ್ನು ಗೆಲ್ಲುವಲ್ಲಿ ಸಂಪೂರ್ಣವಾಗಿ ಸಜ್ಜಾಗಿದ್ದೇವೆ. ಕಾಂಗ್ರೆಸ್ ನಾಯಕರು ಆಂತರಿಕವಾಗಿ ಹಾಗೂ ಬಹಿರಂಗವಾಗಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವಂತಿಲ್ಲ. ದೇಶದಲ್ಲಿ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಒಂದಾಗಿ ಹೋರಾಟ ಮಾಡಿ ಶಕ್ತಿ ಪ್ರದರ್ಶನ ಮಾಡುವ ಮೂಲಕ ಕರ್ನಾಟಕದಲ್ಲಿ ಅಧಿಕಾರವನ್ನು ಮತ್ತೆ ತೆಕ್ಕೆಗೆ ಹಿಡಿಯುವ ಪ್ರಯತ್ನ ಮಾಡಲಾಗುವುದು ಎಂದು ಕೆ.ಸಿ. ವೇಣುಗೋಪಾಲ ಖಡಕ್ ಆಗಿಯೇ ರಾಜ್ಯ ನಾಯಕರಿಗೆ ಸಂದೇಶ ನೀಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ಕುರಿತಂತೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಲು ಈಗಾಗಲೇ ರಾಜ್ಯದ ನಾಯಕರುಗಳಿಗೆ ಕರೆಕೊಟ್ಟಿದ್ದು, ಶೇ.40ರಷ್ಟು ಭ್ರಷ್ಟಾಚಾರ, ವ್ಯಾಪಕವಾಗಿರುವ ನಿರುದ್ಯೋಗ, ಬೆಲೆ ಏರಿಕೆ ಸೇರಿ ಇನ್ನಿತರ ವಿಷಯ ಕುರಿತು ಬಿಜೆಪಿ ವಿರುದ್ಧ ಜನತೆಗೆ ಮನಮುಟ್ಟುವಂತೆ ತಿಳಿಸಲು ಸೂಚನೆ ನೀಡಲಾಗಿದೆ ಎಂದರು.

ರಾಜ್ಯವನ್ನು ಲೂಟಿ ಮಾಡುವುದರಲ್ಲಿ ಬಿಜೆಪಿ ಸರ್ಕಾರ ನಿರತವಾಗಿದ್ದು, ಇದನ್ನು ಸ್ವತಃ ಬಿಜೆಪಿಯೇ ಸಾಬೀತು ಪಡಿಸಿದೆ. ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದ ಸಾಮಾನ್ಯ ಜನರ ಬೆಂಬಲವಿದ್ದು ಅವರ ಬೆಂಬಲದಿಂದಲೇ ನಾವು ಮುಂದಿನ ಚುನಾವಣೆಯಲ್ಲಿ ಅಧಿಕಾರದ ಗದ್ದುಗೆ ಏರಲಿದ್ದೇವೆ ಎಂದರು.

ಸಿದ್ದರಾಮಯ್ಯ ಜನ್ಮದಿನ: ಕಾಂಗ್ರೆಸ್ ಬೈಕ್ ರ‍್ಯಾಲಿ



ದಾವಣಗೆರೆ, ಆ.3– 'ಸಿದ್ದರಾಮಯ್ಯ–75' ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಬೃಹತ್ ಬೈಕ್ ರ‍್ಯಾಲಿ ನಡೆಯಿತು.

ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅನೆಕೊಂಡದ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಬೈಕ್ ರ‍್ಯಾಲಿಗೆ ಚಾಲನೆ ನೀಡಿದರು. ಸಾವಿರಾರು ಕಾರ್ಯಕರ್ತರು ರ‍್ಯಾಲಿಯಲ್ಲಿ ಪಾಲ್ಗೊಂಡು ಶಕ್ತಿ ಪ್ರದರ್ಶಿಸಿದರು.

ಅನೆಕೊಂಡದ ಬಸವೇಶ್ವರ ದೇವಸ್ಥಾನದಿಂದ ಆರಂಭವಾದ ಬೈಕ್ ರ‍್ಯಾಲಿ, ಕೊರಚರಹಟ್ಟಿ, ಅರಳೀ ಮರದ ಸರ್ಕಲ್, ಹಳೆ ಬೇತೂರು ರಸ್ತೆ, ಬಾಷಾನಗರ ಮುಖ್ಯ ರಸ್ತೆ ಮೂಲಕ ಅಖ್ತರ್ ರಜಾ ಸರ್ಕಲ್, ಎಸ್.ಪಿ.ಎಸ್. ನಗರ, ಹೊಂಡದ ಸರ್ಕಲ್ ಮಾರ್ಗವಾಗಿ ಹೊರಟು ಚೌಕಿಪೇಟೆ ತಲುಪಿತು.

ಬಳಿಕ ಬಂಬೂ ಬಜಾರ್, ಶೇಖರಪ್ಪನಗರ, ಭಾರತ್ ಕಾಲೊನಿ, ಗಣೇಶ್ ಹೋಟೆಲ್, ಅಂಡರ್ ಬ್ರಿಡ್ಜ್ (ಈರುಳ್ಳಿ ಮಾರ್ಕೆಟ್) ಮುಖಾಂತರ ಪಿ.ಬಿ. ರಸ್ತೆಗೆ ತಲುಪಿ ತ್ರಿಶೂಲ್ ರಸ್ತೆ ಮಾರ್ಗವಾಗಿ ಶಿವಪ್ಪಯ್ಯ ಸರ್ಕಲ್‌ನಿಂದ ಡಾಂಗೆ ಪಾರ್ಕ್ ಮುಖಾಂತರ ಎಚ್‌ಕೆಆರ್ ಸರ್ಕಲ್, ಆರ್.ಎಸ್. ಶೇಖರಪ್ಪ ನಿವಾಸದ ಮುಖಾಂತರ ನಿಟುವಳ್ಳಿ 60 ಅಡಿ ರಸ್ತೆ ಮಾರ್ಗವಾಗಿ ವಿದ್ಯಾ ನಗರ, ನೂತನ ಕಾಲೇಜು ರಸ್ತೆ, ಬಿಐಇಟಿ ರಸ್ತೆ, ಬಾಪೂಜಿ ಹೈಸ್ಕೂಲ್, ಲಕ್ಷ್ಮಿ ಫ್ಲೋರ್ ಮಿಲ್ ಪಕ್ಕದಿಂದ ರಿಂಗ್ ರಸ್ತೆ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಕೊನೆಗೊಂಡಿತು.

ಸ್ಥಳೀಯ ಕಾರ್ಯಕರ್ತರು ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಶಾಲು, ಹಾರ, ಪೇಟ ತೊಡಿಸಿ ಸ್ವಾಗತಿಸಿದರು. ಅಂಗವಿಕಲ ಮಹಿಳೆ, 60 ವರ್ಷದ ಬೆಳವನೂರು ಗ್ರಾಮದ ಸಿದ್ದಪ್ಪ ಅವರು ಭಾಗವಹಿಸಿದ್ದು, ಯುವಕರನ್ನು ನಾಚಿಸುವಂತಿತ್ತು. ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಮುಖಂಡರಾದ ಕೆ.ಎಸ್. ಬಸವಂತಪ್ಪ, ಎ. ನಾಗರಾಜ್, ಬ್ಲಾಕ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಕೆ.ಜಿ.ಶಿವಕುಮಾರ್, ಸಾಗರ್ ಇದ್ದರು

ಶುಚಿ–ರುಚಿಯಾದ ಊಟ ಸವಿದ ಲಕ್ಷಾಂತರ ಮಂದಿ



ದಾವಣಗೆರೆ, ಆ.3– 'ಸಿದ್ದರಾಮಯ್ಯ–75' ಅಮೃತ ಮಹೋತ್ಸವಕ್ಕೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ರುಚಿಕಟ್ಟಾದ ಊಟ ಸವಿದರು. ಬುಧವಾರ ಬೆಳಗ್ಗೆಯಿಂದಲೇ ಜನರಿಗೆ ಇಲ್ಲಿನ ಶಾಮನೂರು ಪ್ಯಾಲೇಸ್ ಮೈದಾನದಲ್ಲಿ ಶುಚಿ–ರುಚಿಯಾದ ಭೋಜನ ತಯಾರಿಸಿದ್ದು, ಲಕ್ಷಾಂತರ ಮಂದಿ ಊಟ ಮಾಡಿದರು.

ಪಲಾವ್, ಮೊಸರನ್ನ, ಬಿಸಿಬೇಳೆ ಬಾತ್ ಹಾಗೂ ಮೈಸೂರು ಪಾಕ್ ಅನ್ನು ಸವಿದು ಖುಷಿಪಟ್ಟರು. ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಲಾಗಿತ್ತು. 6 ಲಕ್ಷಕ್ಕೂ ಹೆಚ್ಚು ಮೈಸೂರು ಪಾಕ್ ಸಿದ್ಧಪಡಿಸಿದ್ದು ವಿಶೇಷ. ವೇದಿಕೆಯ ಎಡಭಾಗದಲ್ಲೇ 200ಕ್ಕೂ ಕೌಂಟರ್‌ಗಳಲ್ಲಿ ಊಟ ಬಡಿಸಿದರು. ಅಡಿಕೆ ಎಲೆಯಲ್ಲಿ ಊಟದ ವ್ಯವಸ್ಥೆ ಮಾಡಿದ್ದು, ಜನರು ಸರತಿ ಸಾಲಿನಲ್ಲಿ ನಿಂತು ಊಟ ಸವಿದರು. ರಾಜ್ಯವಲ್ಲದೇ ತಮಿಳುನಾಡು ಹಾಗೂ ಕೇರಳದಿಂದಲೂ ಬಾಣಸಿಗರನ್ನು ಕರೆತರಲಾಗಿತ್ತು. 'ಸಿದ್ದರಾಮಯ್ಯ ಅನ್ನ ಭಾಗ್ಯದ ಸರದಾರ. ಕಾರ್ಯಕ್ರಮದಲ್ಲೂ ಊಟ ಚೆನ್ನಾಗಿದೆ. ಇಷ್ಟೊಂದು ಜನಕ್ಕೆ ಊಟ ಕೊಟ್ಟಿರುವುದು ಸುಲಭದ ಮಾತಲ್ಲ. ಮೈಸೂರು ಪಾಕ್ ಚೆನ್ನಾಗಿದೆ' ಎಂದು ಹಾವೇರಿಯ ರೈತ ಕುಮಾರ್ ಹರ್ಷಚಿತ್ತರಾಗಿ ನುಡಿದರು.


ಕಾರ್ಯಕ್ರಮಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಲಕ್ಷಾಂತರ ಮಂದಿ ಸಿದ್ದರಾಮಯ್ಯ ಅಭಿಮಾನಿಗಳು.

ಬಗ್ಗಿ ಬಗ್ಗಿ ನಮಸ್ಕಾರ ಮಾಡೋರನ್ನು ದೂರ ಇಡಿ

ದಾವಣಗೆರೆ, ಆ.3– 'ಬಗ್ಗಿ ಬಗ್ಗಿ ನಮಸ್ಕಾರ ಮಾಡೋರನ್ನು ದೂರ ಇಡಿ. ನಿಮ್ಮ ಸುತ್ತಮುತ್ತ ಗಮನ ಇರಲಿ, ಹುಷಾರಾಗಿರಿ' ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಕಿವಿಮಾತು ಹೇಳಿದ್ದಾರೆ.



ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಎಂದಿನಂತೆ ಹಾಸ್ಯ ಚಟಾಕಿ ಹಾರಿಸಿದರು. ಐದು ಲಕ್ಷ ಮೈಸೂರು ಪಾಕ್ ಮಾಡಿಸಿದ್ದಾರೆ. ನನಗೆ ಒಂದೂ ಸಿಗಲಿಲ್ಲ ಎಂದರು. ಅಲ್ಲದೆ ನಿಮ್ಮ ಮುಂದೆ ಬಗ್ಗಿ ಬಗ್ಗಿ ನಮಸ್ಕಾರ ಮಾಡೋರನ್ನು ದೂರ ಇಡಿ. ನಿಮ್ಮ ಸುತ್ತಮುತ್ತ ಗಮನ ಇರಲಿ, ಹುಷಾರಾಗಿರಿ. ನೀವು ನಮಗೆಲ್ಲರಿಗೂ ಸೇರಿದವರು. ನಿಮ್ಮ ಕುಟುಂಬಕ್ಕೆ ಮಾತ್ರ ನೀವು ಸೇರಿದವರಲ್ಲ ಎಂದು ಹೇಳಿದರು.

ಒಂದು ವೇಳೆ ಸಿದ್ದರಾಮಯ್ಯ ಅಧಿಕಾರದಲ್ಲಿ ಇರುತ್ತಿದ್ದರೆ ಹುಟ್ಟುಹಬ್ಬವನ್ನು ಬೇರೆ ಥರ ಮಾಡಿಕೊಳ್ಳುತ್ತಿದ್ದರು. ಅಧಿಕಾರದಲ್ಲಿ ಇಲ್ಲದಿದ್ದರೂ ಜನ ಇಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ಬಂದಿದ್ದಾರೆ. ಈ ಕಾರ್ಯಕ್ರಮದ ಮೂಲಕ ನಮ್ಮ ಮೂಲ ಉದ್ದೇಶ ಈಡೇರಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮ ಯಾರನ್ನೂ ವೈಭವೀಕರಿಸಲು ಮಾಡಿಲ್ಲ. ಹೆಪ್ಪುಗಟ್ಟಿದ ನೋವಲ್ಲಿ ಜನರ ನೆಪದಲ್ಲಿ ಈ ಕಾರ್ಯಕ್ರಮ ಮಾಡಿದ್ದೀವಿ ಎಂದು ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಹೇಳಿದರು.

ಒಂದನೇ ಪುಟದಿಂದ

ಒಟ್ಟಾಗಿ ಹೋರಾಡ್ತೇವೆ...

ಅವರು, ಪಕ್ಷದ ಅಧಿನಾಯಕರಾದ ಸೋನಿಯಾಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಭಾಷಣದುದ್ದಕ್ಕೂ ಹಾಡಿ ಹೊಗಳಿದ್ದಲ್ಲದೆ, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಶೇ.40ರಷ್ಟು ಕಮಿಷನ್ ಸರ್ಕಾರ ತೊಲಗಬೇಕು. ಕೋಮುವಾದಿ ಪಕ್ಷದ ಆಡಳಿತ ಕೊನೆಗೊಂಡು ಜನರ ಆಡಳಿತ ಬರಬೇಕು. ನಾವು ಅಧಿಕಾರದಲ್ಲಿದ್ದಾಗ ಸರ್ಕಾರದ ಆದಾಯವನ್ನು ಜನರಿಗೆ ಹಂಚಿದ್ದೆವು. ಆದರೆ, ಇವರು, ಆಡಳಿತ ನಡೆಸುವವರೇ ಹಂಚಿಕೊಳ್ಳುತ್ತಿದ್ದಾರೆ. ಇವರಿಂದ ರಾಜ್ಯದ ಜನತೆಗೆ ನೆಮ್ಮದಿ ಇಲ್ಲ. ಈಗ ನಮ್ಮ ಮುಂದಿರುವ ಏಕೈಕ ಸವಾಲು ರಾಜ್ಯದಲ್ಲಿ ಅಧಿಕಾರದಲ್ಲಿರುವ ಭ್ರಷ್ಟ ಹಾಗೂ ಕೋಮುವಾದಿ ಸರ್ಕಾರವನ್ನು ತೊಲಗಿಸಿ, ರಾಹುಲ್ ಗಾಂಧಿ ನಾಯಕತ್ವದಲ್ಲಿ ಮತ್ತೆ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವುದು ಎಂದರು. ಈ ನಮ್ಮ ಆಶಯಕ್ಕೆ ಜನರ ಆಶೀರ್ವಾದ ಬೇಕು. ನಾನು 44 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದೇನೆ. ಈಗಿರುವ ಬಿಜೆಪಿ ಸರ್ಕಾರದಂತಹ ಭ್ರಷ್ಟ, ಕೋಮುವಾದಿ ಸರ್ಕಾರವನ್ನು ಇಡೀ ನನ್ನ ರಾಜಕೀಯ ಜೀವನದಲ್ಲೇ ಕಂಡಿರಲಿಲ್ಲ ಎಂದು ಟೀಕಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಶಕ್ತಿ ಬಹಳ ದೊಡ್ಡದು. ಜನರ ಆಶೀರ್ವಾದವಿಲ್ಲದೆ ಯಾರೂ ಸಹ ದೀರ್ಘಕಾಲ ರಾಜಕೀಯ ಮಾಡಲು ಸಾಧ್ಯವಿಲ್ಲ. ಜನರ ನಿರಂತರ ಪ್ರೀತಿ ವಿಶ್ವಾಸದಿಂದಲೇ ನಾನು ಜನಪ್ರತಿನಿಧಿಯಾಗಿ, ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿ ಆಗಿ ನಾಡಿನ ಜನರ ಸೇವೆಯನ್ನು ಮಾಡುವ ಅವಕಾಶವನ್ನು ಪಡೆದುಕೊಂಡಿದ್ದೇನೆ.

ರಾಜ್ಯದ ಸಮಸ್ತ ಜನತೆಗೆ ಇದಕ್ಕಾಗಿ ನಾನು ಧನ್ಯವಾದ ಸಲ್ಲಿಸುತ್ತೇನೆ. ನಾನು ದೈಹಿಕವಾಗಿ ಎಲ್ಲಿಯವರೆಗೂ ಸಕ್ರಿಯನಾಗಿರುತ್ತೇನೆಯೋ ಅಲ್ಲಿಯವರೆಗೂ ರಾಜಕೀಯದಲ್ಲಿದ್ದು, ನಾಡಿನ ಜನರ ಸೇವೆ ಮಾಡುವುದಾಗಿ ಹೇಳಿದರು. ಬೇರೆ ಪಕ್ಷದಿಂದ ಬಂದರೂ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ನನ್ನ ಮುಖ್ಯಮಂತ್ರಿ ಮಾಡಿ ಆಡಳಿತ ನಡೆಸಲು ಬಂಡೆಯಂತೆ ನಿಂತು ಬೆಂಬಲ ನೀಡಿದ್ದಾರೆ. 75 ವರ್ಷಗಳಲ್ಲಿ ಸಕ್ರಿಯ ರಾಜಕಾರಣದಲ್ಲಿ 50 ವರ್ಷಗಳಿಂದ ಜನರೊಂದಿಗೆ ಇದ್ದೇನೆ.

ನಾನು ಇಷ್ಟು ವರ್ಷ ಹುಟ್ಟುಹಬ್ಬವನ್ನು ಆಚರಿಸಿಕೊಂಡಿರಲಿಲ್ಲ. ಆದರೆ ಅಭಿಮಾನಿಗಳು ಹಾಗೂ ಹಿತೈಷಿಗಳ ಒತ್ತಡಕ್ಕೆ ಮಣಿದು 75ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದೇನೆ. ನಿಮ್ಮೆಲ್ಲರ ಆಶೀರ್ವಾದ ಹಾಗೂ ಹಾರೈಕೆಯನ್ನು ಬಯಸಲು ಇಚ್ಛಿಸುತ್ತೇನೆ. ಅಭಿಮಾನದಿಂದ ಸಾಕಷ್ಟು ಮಂದಿ ಕಾರ್ಯಕ್ರಮಕ್ಕೆ ಆಗಮಿಸಿದ್ದಾರೆ. ಕಾರ್ಯಕ್ರಮಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅವರಿಗೆ ಕೋಟಿ ಕೋಟಿ ಅಭಿನಂದನೆ ಸಲ್ಲಿಸಲು ಬಯಸುತ್ತೇನೆ. ಬೇರೆ ಪಕ್ಷದಿಂದ ಬಂದಿದ್ದರೂ ಕಾಂಗ್ರೆಸ್ ಸೇರಿದಾಗಿನಿಂದಲೂ ನನ್ನ ಮೇಲೆ ಅವರು ಅಪಾರವಾದ ವಿಶ್ವಾಸವಿಟ್ಟಿದ್ದಾರೆ ಎಂದರು.

ರಾಹುಲ್ ಪ್ರಧಾನಿ ಮಾಡೋಣ...

ಕೂರಿಸಬೇಕು. ಆ ನಿಟ್ಟಿನಲ್ಲಿ ಕೆಲಸ ಮಾಡಲು ನಾವೆಲ್ಲರೂ ಇಂದು ಸಂಕಲ್ಪ ಮಾಡೋಣ ಎಂದು ದಾವಣಗೆರೆಯಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಿದ್ದರಾಮಯ್ಯ ಅವರು ಕೇವಲ ಹಿಂದುಳಿದ ವರ್ಗಗಳ ನಾಯಕ ಎಂದು ಪರಿಗಣಿಸಬೇಡಿ. ಅವರು ಎಲ್ಲಾ ಧರ್ಮ ಹಾಗೂ ವರ್ಗಗಳ ನಾಯಕ. ರಾಜ್ಯದ ಜನರಿಗೆ ಇನ್ನಷ್ಟು ಸೇವೆ ಮಾಡುವ ಶಕ್ತಿ ಸಿದ್ದರಾಮಯ್ಯ ಅವರಿಗೆ ಸಿಗಲಿ ಎಂದು ಶುಭ ಹಾರೈಸುತ್ತೇನೆ.

ರಾಜ್ಯದಲ್ಲಿ ಯುವಕರು, ರೈತರು, ಬಡವರಿಗೆ ನಿರಂತರವಾಗಿ ಅನ್ಯಾಯವಾಗುತ್ತಿದ್ದು, ಇದಕ್ಕೆ ಅಂತ್ಯವಾಡಿ ಅವರಿಗೆ ನ್ಯಾಯ ಒದಗಿಸಬೇಕು ಎಂದರೆ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯೋಣ. ಇಂದು ನಾವೆಲ್ಲರೂ ಆ ಪ್ರತಿಜ್ಞೆ ಮಾಡೋಣ.

ಇಂದು ನಾವು ನೀವೆಲ್ಲರೂ ಪುಣ್ಯವಂತರು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಆಗಿದೆ. ಅದೇ ಕಾಲದಲ್ಲಿ ನಮ್ಮ, ನಿಮ್ಮೆಲ್ಲರ ನಾಯಕ ಸಿದ್ದರಾಮಯ್ಯ ಅವರ ಹುಟ್ಟುಹಬ್ಬ ಆಚರಿಸುತ್ತಿದ್ದೇವೆ. ದೇಶಕ್ಕೂ ಸಂಭ್ರಮ, ಕಾಂಗ್ರೆಸಿಗರಿಗೂ ಸಂಭ್ರಮ, ಸಿದ್ದರಾಮಯ್ಯ ಅವರಿಗೂ ಸಂಭ್ರಮ, ನಿಮಗೆ ಹಾಗೂ ನಮಗೂ ಸಂಭ್ರಮ.

ನಮ್ಮ ಉದ್ದೇಶ ರಾಜ್ಯಕ್ಕೆ ನ್ಯಾಯ ಒದಗಿಸುವುದು. ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ಈ ದೇಶದ ಇತಿಹಾಸ. ಸಿದ್ದರಾಮಯ್ಯ ಅವರ ಅಧಿಕಾರ ನಾವೆಲ್ಲ ನೋಡಿದ್ದೇವೆ. 2013ರಲ್ಲಿ ಪಕ್ಷ ಅಧಿಕಾರಕ್ಕೆ ಬಂದಾಗ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸಿದರು. ಬಸವ ಜಯಂತಿ ದಿನ ಅವರು ಅಧಿಕಾರ ಸ್ವೀಕರಿಸಿದರು. ಬಸವಣ್ಣನವರ ತತ್ವವೇ ಕಾಂಗ್ರೆಸ್ ಪಕ್ಷದ ತತ್ವ. ಅವರು ಅಧಿಕಾರ ಸ್ವೀಕರಿಸಿದ ನಂತರ ಈ ರಾಜ್ಯಕ್ಕೆ ಕೊಟ್ಟಿರುವ ಕಾರ್ಯಕ್ರಮ ಮೆಲುಕು ಹಾಕಲು ಇಲ್ಲಿದ್ದೇವೆ. ಈ ಕಾರ್ಯಕ್ರಮದ ಬಗ್ಗೆ ಸಿದ್ದರಾಮಯ್ಯ ಅವರು ಹೇಳಿದಾಗ ನಾನೂ ಅಲ್ಲಿದ್ದೆ. ರಾಹುಲ್ ಗಾಂಧಿ ಅವರು ಒಪ್ಪಿ ಇಲ್ಲಿಗೆ ಬಂದಿದ್ದಾರೆ. ರಾಜ್ಯದ ಜನರು ಹಾಗೂ ಕಾಂಗ್ರೆಸ್ ನಾಯಕರ ಪರವಾಗಿ ರಾಹುಲ್ ಗಾಂಧಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಕಾಂಗ್ರೆಸ್ ಪಕ್ಷವನ್ನು ವಿಧಾನಸೌಧದ ಮೂರನೇ ಮಹಡಿಗೆ ತಲುಪಿಸಬೇಕು. ಅದಕ್ಕೆ ನಾವು ನೀವೆಲ್ಲರೂ ಸೇರಿ ಭ್ರಷ್ಟ ಸರ್ಕಾರ ತೆಗೆದು ಹಾಕುವ ಸಂಕಲ್ಪ ಮಾಡಬೇಕು. ನೀವೆಲ್ಲರೂ ಈ ಸರ್ಕಾರ ತೆಗೆಯುವ ಪ್ರತಿಜ್ಞೆ ಮಾಡುತ್ತೀರ ಅಲ್ಲವೇ? ಇಂದಿನಿಂದ ಇದೇ ನಮ್ಮ ಉದ್ದೇಶ ಆಗಬೇಕು. ಸಿದ್ದರಾಮಯ್ಯ ಅವರ ಕಾಲದಲ್ಲಿ ನಾವು ಮಂತ್ರಿಗಳಾಗಿ ಕೆಲಸ ಮಾಡಿದ್ದೇವೆ. ಅವರ ಕಾರ್ಯಕ್ರಮ ಈ ದೇಶದ ಬಡವರಿಗಾಗಿ ಕೊಟ್ಟ ಕಾರ್ಯಕ್ರಮಗಳಾಗಿದ್ದವು. ಅಧಿಕಾರಕ್ಕೆ ಬಂದ ಕೆಲವೇ ಗಂಟೆಗಳಲ್ಲಿ ಯಾವುದೇ ಬಡವ ಹಸಿವಿನಿಂದ ಇರಬಾರದು ಎಂದು ಎಲ್ಲ ವರ್ಗಕ್ಕೆ ಅನ್ನ ಭಾಗ್ಯ ಯೋಜನೆ ಕೊಟ್ಟ ನಾಯಕ ಎಂದರೆ ಕಾಂಗ್ರೆಸ್ ಸರ್ಕಾರದ ನೇತೃತ್ವ ವಹಿಸಿದ್ದ ಸಿದ್ದರಾಮಯ್ಯ.

ರೈತರಿಗೆ ಕೊಟ್ಟ ಕೃಷಿ ಭಾಗ್ಯ, ರಸ್ತೆ, ಕೈಗಾರಿಕೆ, ನೀರಾವರಿ ಯೋಜನೆ, ವಿಶ್ವದಲ್ಲೇ ಅತೀ ದೊಡ್ಡ ಸೋಲಾರ್ ಪಾರ್ಕ್, ರೈತರಿಗೆ 7 ತಾಸು ವಿದ್ಯುತ್ ಸರಬರಾಜು ಸೇರಿದಂತೆ ಹಲವು ಜನಪರ ಯೋಜನೆ ನೀಡಿದ್ದೆವು. ಇದೆಲ್ಲದಕ್ಕೂ ಕಾರಣ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ. ನಾನು, ಸಿದ್ದರಾಮಯ್ಯ ಹಾಗೂ ವೇದಿಕೆ ಮೇಲಿರುವ ನಾಯಕರು ಮಾತ್ರ ಸರ್ಕಾರ ತರಲು ಸಾಧ್ಯವಿಲ್ಲ. ನೀವೆಲ್ಲರೂ ಈ ಭ್ರಷ್ಟ ಸರ್ಕಾರ ಕಿತ್ತು ಕಾಂಗ್ರೆಸ್ ಅಧಿಕಾರಕ್ಕೆ ತರಲು ಜನರಿಗೆ ತಿಳಿಸಬೇಕು.

ಇದುವರೆಗೂ ಆಗಿರುವುದು ಇತಿಹಾಸ, ಮುಂದೆ ಬರುವುದು ಭವಿಷ್ಯ. ಮುಂದಿನ ವರ್ಷ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರುವ ಸಂಕಲ್ಪ ಮಾಡಬೇಕು. ಆ.15ರಂದು ದೇಶದ ಸ್ವಾತಂತ್ರ್ಯ ಅಮೃತಮಹೋತ್ಸವ ಆಚರಣೆಗೆ ಸೂಚನೆ ನೀಡಿದ್ದು, ಇಲ್ಲಿಗೆ ಬಂದಿರುವಂತೆ ಬೆಂಗಳೂರಿಗೂ ಲಕ್ಷಾಂತರ ಜನರು ಆಗಮಿಸಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯಿಂದ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದವರೆಗೆ ಹೆಜ್ಜೆ ಹಾಕಬೇಕು ಎಂದು ಮನವಿ ಮಾಡುತ್ತೇನೆ. ಬೆಳಕು, ಅಧಿಕಾರದ ಲಕ್ಷ್ಮಿ ನಿಮ್ಮ ಮನೆ ಬಾಗಿಲಿಗೆ ಬರುತ್ತಿದೆ. ಸಿದ್ದರಾಮಯ್ಯ ಅವರಿಗೆ ಉತ್ತಮ ಆರೋಗ್ಯ, ಈ ರಾಜ್ಯಕ್ಕೆ ಇನ್ನಷ್ಟು ಹೆಚ್ಚಿನ ಸೇವೆ ಮಾಡುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಸಿದ್ದಾಪುರಲ್ಲಿ ಸಿಐಟಿಯು ಪ್ರತಿಭಟನೆ



ಸಿದ್ದಾಪುರ,ಆ.3– ನಿರಂತರ ಬೆಲೆ ಏರಿಕೆಯಿಂದ ಸಾಮಾನ್ಯ ಜನರು ಅತ್ಯಂತ ಸಂಕಷ್ಟಕ್ಕೊಳಗಾಗಿದ್ದು, ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿ ಸಿಐಟಿಯು ಕಾರ್ಯಕರ್ತರು ಸಿದ್ದಾಪುರ ಬಸ್ ನಿಲ್ದಾಣದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುವ ಮೂಲಕ ಪ್ರತಿಭಟಿಸಿದರು.

ಸಿಐಟಿಯುನ ಜಿಲ್ಲಾ ಮುಖಂಡ ಪಿ.ಆರ್.ಭರತ್ ಮಾತನಾಡಿ, ಬಿಜೆಪಿ ಆಡಳಿತದ ಕೇಂದ್ರ ಹಾಗೂ ರಾಜ್ಯ ಸರ್ಕಾರ ಜನ ವಿರೋಧಿ ನೀತಿ ಅನುಸರಿಸುವ ಮೂಲಕ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಏರಿ ಮತ್ತಷ್ಟು ಸಂಕಷ್ಟಕ್ಕೀಡು ಮಾಡಿದ್ದು, ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಇಂಧನ, ಅನಿಲ, ಅಗತ್ಯ ವಸ್ತುಗಳ ಬೆಲೆ ಏರಿಕೆ ಸೇರಿದಂತೆ ಇದೀಗ ಜಿಎಸ್‌ಟಿ ಹೊರೆಯನ್ನು ಸಾಮಾನ್ಯ ಜನರ ಬಳಸುವ ಅಗತ್ಯ ವಸ್ತುಗಳ ಮೇಲೆ ಏರಿ ಕಾರ್ಪೊರೇಟ್ ಕಂಪೆನಿಗಳ ಪರ ಕೈಜೋಡಿಸುತ್ತಿದ್ದಾರೆ ಎಂದರು.

ಕೊರೊನ ಸಂಕಷ್ಟದ ಬದುಕಿನ ನಡುವೆ ಅದೆಷ್ಟೋ ಮಂದಿ ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ ಎಂದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಸಾಬು ಮಾತನಾಡಿ, ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿರುವ ಬೆಳೆಗಾರರು. ಕೂಲಿಯನ್ನೇ ನಂಬಿ ಜೀವನ ನಡೆಸುತ್ತಿರುವ ಕಾರ್ಮಿಕರು. ಅತ್ಯಂತ ಸಂಕಷ್ಟದಲ್ಲಿದ್ದು, ಪ್ರಕೃತಿ ವಿಕೋಪ, ಪ್ರವಾಹ, ಕಾಡುಪ್ರಾಣಿಗಳ ಹಾವಳಿಯಿಂದ ಅಪಾರ ಪ್ರಮಾಣದ ಕೃಷಿ ಫಸಲು ನಾಶದೊಂದಿಗೆ ಆತಂಕದ ಜೀವನ ನಡೆಸುವಂತಾಗಿದೆ.

ನಿರಂತರ ಕಾಡು ಪ್ರಾಣಿಗಳ ಹಾವಳಿಯಿಂದ ಕಾರ್ಮಿಕರು ಕೆಲಸ ನಿರ್ವಹಿಸಲು ಸಾಧ್ಯವಾಗದೆ ಸಂಕಷ್ಟದಲ್ಲಿದ್ದಾರೆ. ಕೇಂದ್ರ ಹಾಗೂ ರಾಜ್ಯದ ಜನ ಪ್ರತಿನಿಧಿಗಳು ಯಾವುದೇ ಶಾಶ್ವತ ಯೋಜನೆಗಳನ್ನು ರೂಪಿಸದೆ ವಿಶೇಷ ಪರಿಹಾರ ನೀಡದೆ ಕಡೆಗಣಿಸಿದ್ದಾರೆ ಎಂದು ಆರೋಪಿಸಿದ ಅವರು ಕೂಡಲೇ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದ್ದಾರೆ

ಈ ಸಂದರ್ಭ ಸಿಐಟಿಯು ಪ್ರಮುಖರಾದ ಕುಟ್ಟಪ್ಪ, ಸಾಜಿ, ರಮೇಶ್, ರಾಚಪ್ಪಾಜಿ, ಪ್ರಮೀಳಾ, ಪುಷ್ಪ, ಕುಸುಮ, ಹರೀಶ ಸೇರಿದಂತೆ ಮತ್ತಿತರರು ಹಾಜರಿದ್ದರು.

ದೇವರಕೊಲ್ಲಿಯಲ್ಲಿ ರಸ್ತೆ ಬಿರುಕು

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಸ್ಥಳ ಪರಿಶೀಲನೆ

ಮಡಿಕೇರಿ,ಆ.3– ಮಡಿಕೇರಿ–ಸಂಪಾಜೆ ಹೆದ್ದಾರಿ ಮಾರ್ಗದ ದೇವರಕೊಲ್ಲಿ ಬಳಿ ರಸ್ತೆ ಬಿರುಕು ಬಿಟ್ಟಿರುವ ಪ್ರದೇಶವನ್ನು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಬುಧವಾರ ವೀಕ್ಷಿಸಿದರು.

ಬಳಿಕ ಕೊಯನಾಡು ಸೇತುವೆಯ ಹಿಂಭಾಗದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹಾನಿಯಾಗಿರುವುದನ್ನು ಜಿಲ್ಲಾಧಿಕಾರಿ ಪರಿಶೀಲಿಸಿದರು. ರಸ್ತೆ ಬಿರುಕು ಸಂಬಂಧಿಸಿದಂತೆ ಕೂಡಲೇ ವರದಿ ನೀಡುವಂತೆ ರಾಷ್ಟ್ರೀಯ ಹೆದ್ದಾರಿ ವಿಭಾಗದ ಇಇ ಜಿ.ಎನ್.ಹೆಗಡೆಗೆ ಜಿಲ್ಲಾಧಿಕಾರಿ ಸೂಚಿಸಿದರು. ಈ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ತಹಶೀಲ್ದಾರ್ ಪಿ.ಎಸ್.ಮಹೇಶ್ ಇತರರು ಇದ್ದರು.

ಬುಧವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಚೆಂಬು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 128 ಮಿ.ಮೀ. ಮಳೆಯಾಗಿದ್ದು, ಚೆಂಬು ಗ್ರಾಪಂ ವ್ಯಾಪ್ತಿಯಲ್ಲಿ ಕೆಲವು ಕಡೆ ಬರೆ ಕುಸಿದಿದೆ. ಹಾಗೆಯೇ ಮದೆ ಗ್ರಾಪಂ ವ್ಯಾಪ್ತಿಯ ಬೆಟ್ಟತ್ತೂರು ಗ್ರಾಮದ ಬಲೆಕಂಡಿಯಲ್ಲಿ ರಸ್ತೆಗೆ ಮಣ್ಣು ಕುಸಿದಿದ್ದು, ಜೆಸಿಬಿ ಮೂಲಕ ಮಣ್ಣು ಸರಿಪಡಿಸುವ ಕಾರ್ಯ ನಡೆದಿದೆ ಎಂದು ಗ್ರಾಪಂ ಪಿಡಿಓ ಅವರು ಮಾಹಿತಿ ನೀಡಿದ್ದಾರೆ. ಚೆಂಬು, ಪೆರಾಜೆ ಮತ್ತು ಸಂಪಾಜೆ ಗ್ರಾಪಂ ವ್ಯಾಪ್ತಿಯಲ್ಲಿ ಹೆಚ್ಚಿನ ಮಳೆಯಾಗಿದ್ದು, ಅಲ್ಲಲ್ಲಿ ಮನೆ ಮತ್ತು ಬೆಳೆಗೆ ಹಾನಿ ಆಗಿದೆ.

ಮರಿ ಆನೆ ಸೇರಿ ಎರಡು ಕಾಡಾನೆ ಸಾವು





ಸಿದ್ದಾಪುರ/ಗೋಣಿಕೊಪ್ಪ, ಆ.3– ಜಿಲ್ಲೆಯಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಮರಿ ಆನೆ ಸೇರಿದಂತೆ ಎರಡು ಕಾಡಾನೆಗಳು ಸಾವನ್ನಪ್ಪಿರುವ ಪ್ರಕರಣಗಳು ವರದಿಯಾಗಿದೆ.

ಕಾಡಾನೆಯೊಂದು ತೋಡಿಗೆ ಬಿದ್ದು ಮೃತಪಟ್ಟಿರುವ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಬಾಡಗ ಬಾಣಂಗಾಲ ಕಾಫಿ ತೋಟದಲ್ಲಿ ನಡೆದಿದೆ.

ಕಳೆದ ಕೆಲ ದಿನಗಳ ಹಿಂದೆ ಆನೆಗಳೊಂದಿಗೆ ಇದ್ದ 62 ವರ್ಷದ ಹೆಣ್ಣಾನೆ ಅನಾರೋಗ್ಯಕ್ಕೆ ಒಳಗಾಗಿತ್ತು ಎನ್ನಲಾಗಿದ್ದು, ಬಾಡಗ ಬಾಣಂಗಾಲ ಕಾಫಿ ತೋಟದ ಮಾರ್ಗದಲ್ಲಿ ಹರಿಯುವ ತೋಡು ನೀರಿಗೆ ಬಿದ್ದು ಮೃತಪಟ್ಟಿದೆ.

ಸ್ಥಳಕ್ಕೆ ತಿತಿಮತಿ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೆಹರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿ, ತಿತಿಮತಿ ವಲಯ ವ್ಯಾಪ್ತಿಯ ಬಾಡಗ ಬಾಣಂಗಾಲದಲ್ಲಿ 62 ವರ್ಷದ ಹೆಣ್ಣಾನೆ ವಯಸ್ಸಿನ ಮಿತಿಯಿಂದ ನಿಯಂತ್ರಣ ಕಳೆದುಕೊಂಡು ಕೆಲ ದಿನಗಳಿಂದ ಕಾಫಿ ತೋಟದಲ್ಲಿ ಕಾಣಿಸಿಕೊಳ್ಳುತ್ತಿತ್ತು ಸಂಪೂರ್ಣ ನಿಯಂತ್ರಣ ಕಳೆದುಕೊಂಡ ಆನೆ ತೋಡಿನ ನೀರಿನಲ್ಲಿ ಬಿದ್ದು ಮೃತಪಟ್ಟಿದೆ ಎಂದರು. ಈ ಆನೆಗೆ ರೇಡಿಯೋಕಾಲರ್ ಅಳವಡಿಸಲಾಗಿತ್ತು. ಇದರ ಚಲನವಲನ ಗಮನಿಸುತ್ತಿದ್ದ ಸಿಬ್ಬಂದಿಗಳು ಸಂಪರ್ಕ ಸಾಧ್ಯವಾಗದೆ ಹುಡುಕಾಟ ಸಂದರ್ಭ ತೋಡಿನಲ್ಲಿ ಮೃತಪಟ್ಟಿರುವುದು ಕಂಡು ಬಂದಿದೆ. ಮರಣೋತ್ತರ ವರದಿ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಡಾ.ಚೆಟ್ಟಿಯಪ್ಪ ಆನೆ ಮೃತದೇಹವನ್ನ ಮರಣೋತ್ತರ ಪರೀಕ್ಷೆಗೊಳಪಡಿಸಿದ ನಂತರ ಜೆಸಿಬಿ ಮೂಲಕ ಗುಂಡಿತೋಡಿ ಶವ ಸಂಸ್ಕಾರ ಮಾಡಲಾಗಿದೆ. ಸ್ಥಳಕ್ಕೆ ವಲಯ ಅರಣ್ಯ ಅಧಿಕಾರಿ ಅಶೋಕ್ ಹುನಗುಂದ್, ವನ್ಯಪ್ರಾಣಿ ಸಂಶೋಧಕ ಡಾ. ತಮ್ಮಯ್ಯ, ಉಪವಲಯಾರಣ್ಯಾಧಿಕಾರಿಗಳಾದ ಶ್ರೀನಿವಾಸ್, ಆಲೇಶ್, ಉಮಾಶಂಕರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮರಿ ಆನೆ ಸಾವು: ಆನೆಗಳ ಹಿಂಡಿನ ಜೊತೆಯಲ್ಲಿ ಕೆರೆಯಲ್ಲಿ ನೀರು ಕುಡಿಯಲು ಬಂದ ಕಾಡಾನೆ ಮರಿಯೊಂದು ಸಾವನ್ನಪ್ಪಿದ ಘಟನೆ ಮಾಲ್ದಾರೆಯಲ್ಲಿ ನಡೆದಿದೆ.

ಮಾಲ್ದಾರೆ ಅರಣ್ಯಕ್ಕೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿ ಕೆರೆಯಿದ್ದ ಮಂಗಳವಾರ ರಾತ್ರಿ 6 ತಿಂಗಳ ಕಾಡಾನೆ ಮರಿ ತನ್ನ ಹಿಂಡಿನ ಸಹಿತ ನೀರು ಕುಡಿಯಲು ಆಗಮಿಸಿದೆ. ಈ ವೇಳೆ ಇತರ ಕಾಡಾನೆಗಳ ನಡುವೆ ಸಿಲುಕಿ ಆನೆ ಮರಿ ಸಾವನ್ನಪ್ಪಿದೆ ಸ್ಥಳಕ್ಕೆ ದುಬಾರೆ ಅರಣ್ಯ ಇಲಾಖೆ ಅಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಡಮಕಲ್ಲು ಮಳೆ ಹಾನಿ ಪ್ರದೇಶಗಳಿಗೆ ಅಪ್ಪಚ್ಚು ರಂಜನ್ ಭೇಟಿ



ಮಡಿಕೇರಿ, ಆ.3– ಗಾಳಿಬೀಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಸುಬ್ರಹ್ಮಣ್ಯ ಸಮೀಪದ ಕಡಮಕಲ್ಲು ಗ್ರಾಮ ವ್ಯಾಪ್ತಿಯಲ್ಲಿ ಉಂಟಾಗಿರುವ ಮಳೆಹಾನಿ ಪ್ರದೇಶಗಳಿಗೆ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮತ್ತು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಭೇಟಿ ನೀಡಿ ಪರಿಶೀಲಿಸಿದರು.

ಕಡಮಕಲ್ಲು ಗ್ರಾಮ ವ್ಯಾಪ್ತಿಯಲ್ಲಿ ಸತತ ಸುರಿಯುತ್ತಿರುವ ಮಳೆಯಿಂದಾಗಿ 5 ಮನೆಗಳಿಗೆ ಹಾನಿಯಾಗಿದ್ದು, ಕೂಡಲೇ ಪರಿಹಾರ ವಿತರಿಸುವಂತೆ ಶಾಸಕರು ತಿಳಿಸಿದರು. ವ್ಯಾಪಕ ಮಳೆಯಿಂದಾಗಿ ಕೃಷಿ ಬೆಳೆಗೆ ಹಾನಿಯಾಗಿದ್ದು, ಕೃಷಿ ಬೆಳೆ ಹಾನಿಗೆ ಪರಿಹಾರ ವಿತರಿಸಬೇಕು. ಸುಬ್ರಹ್ಮಣ್ಯ ಕಡಮಕಲ್ಲು ಮಾರ್ಗ ರಸ್ತೆ ಮತ್ತು ಸೇತುವೆ ಹಾನಿಯಾಗಿದ್ದು, ಇದನ್ನು ತಕ್ಷಣವೇ ಸಂಬಂಧಪಟ್ಟ ಇಲಾಖೆ ಇಂಜಿನಿಯರ್‌ಗಳು ಸರಿಪಡಿಸಿವಂತೆ ಅವರು ಸೂಚಿಸಿದರು. ಕಡಮಕಲ್ಲು ಗ್ರಾಮ ವ್ಯಾಪ್ತಿಯಲ್ಲಿ ಆಗಬೇಕಿರುವ ಮೂಲ ಸೌಲಭ್ಯ ಸಂಬಂಧ ಗ್ರಾಮಸ್ಥರಿಂದ ಇದೇ ಸಂದರ್ಭದಲ್ಲಿ ಮಾಹಿತಿ ಪಡೆದರು. ಜಿಲ್ಲಾಧಿಕಾರಿ ಮಾತನಾಡಿ, ಇನ್ನೂ ಒಂದು ವಾರಗಳ ಕಾಲ ಹೆಚ್ಚಿನ ಮಳೆ ಆಗುವ ಸಾಧ್ಯತೆ ಇದ್ದು, ಅಗತ್ಯ ಮುನ್ನೆಚ್ಚರ ವಹಿಸಬೇಕು. ಮನೆ ಹಾಗೂ ಬೆಳೆ ಹಾನಿ ಸಂಬಂಧ ಪರಿಹಾರ ವಿತರಿಸಲಾಗುವುದು ಎಂದರು. ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ತಹಸೀಲ್ದಾರ್ ಪಿ.ಎಸ್. ಮಹೇಶ್, ಗ್ರಾಪಂ ಸದಸ್ಯರಾದ ಸುಭಾಷ್, ಪಿಡಿಓ ಶಶಿಕಿರಣ ಇತರರು ಇದ್ದರು.

ಮದನ್ ನಿಧನ



ಸೋಮವಾರಪೇಟೆ, ಆ.3– ಚೌಡ್ಲು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ, ಕಿಬ್ಬೆಟ್ಟ ಗ್ರಾಮ ನಿವಾಸಿ ಎಲ್.ಜಿ. ಮದನ್ (48) ಅನಾರೋಗ್ಯದಿಂದ ಮಂಗಳವಾರ ರಾತ್ರಿ ನಿಧನರಾದರು.ಮೃತರು ತಾಯಿ, ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಪೋಕ್ಲು–ಮಡಿಕೇರಿ ಮುಖ್ಯರಸ್ತೆಯಲ್ಲಿ ಗುಂಡಿ



ಬಾಳೆಗಿಡ ನೆಟ್ಟು ಸ್ಥಳೀಯರ ಆಕ್ರೋಶ

ಮಡಿಕೇರಿ,ಆ.3– ನಾಪೋಕ್ಲು–ಮಡಿಕೇರಿ ಮುಖ್ಯರಸ್ತೆಯ ಕೊಟ್ಟಮುಡಿ ಸರ್ಕಾರಿ ಪ್ರಾಥಮಿಕ ಶಾಲೆಯ ಮುಂಭಾಗಕ್ಕಾಗಿ ಸಾಗುವ ಮುಖ್ಯರಸ್ತೆ ಹೊಂಡವಾಗಿದ್ದು, ಸ್ಥಳೀಯರು ಬಾಳೆಗಿಡ ನೆಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಕೆಲವು ದಿನಗಳ ಹಿಂದೆ ಮಡಿಕೇರಿ–ಮಂಗಳೂರು ರಸ್ತೆಯ ಜಿಲ್ಲಾಡಳಿತದ ಭವನದ ಬಳಿ ತಡೆಗೋಡೆಯ ಸ್ಲ್ಯಾಬ್‌ಗಳು ಹೊರಚಾಚಿದ್ದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಾರಿಗೆ ಸಂಚಾರ ಬಂದ್ ಮಾಡಲಾಗಿತ್ತು. ಇದರಿಂದ ಮಂಗಳೂರು ಕಡೆಗೆ ತೆರಳುವ ಭಾರೀ ವಾಹನಗಳು ಮೂರ್ನಾಡು, ಹೊದ್ದೂರು, ಕೊಟ್ಟಮುಡಿ, ಬೆಟ್ಟಗೇರಿ ಮಾರ್ಗವಾಗಿ ಸಂಚರಿಸುತ್ತಿತ್ತು. ಇದರಿಂದ ಕೊಟ್ಟಮುಡಿ ಬಳಿಯ ಸರ್ಕಾರಿ ಶಾಲೆಯ ಮುಂಭಾಗದಲ್ಲಿ ಭಾರೀ ಗಾತ್ರದ ಗುಂಡಿ ಗೋಚರಿಸಿದೆ. ರಸ್ತೆಯನ್ನು ಶೀಘ್ರ ದುರಸ್ತಿಪಡಿಸುವಂತೆ ಅಧಿಕಾರಿಗಳ ಗಮನ ಸೆಳೆದಿದ್ದರು, ಅಧಿಕಾರಿಗಳು ಇದುವರೆಗೂ ಯಾವುದೇ ಸ್ಪಂದನೆ ತೋರಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಗ್ರಾಮಸ್ಥರು ಇದೀಗ ಮತ್ತೆ ಭಾರೀ ವಾಹನಗಳ ಸಂಚಾರದಿಂದ ರಸ್ತೆಗಳು ದೊಡ್ಡ ದೊಡ್ಡ ಹೊಂಡಗಳಿಂದ ಕೆರೆಯಂತಾಗಿದೆ ಎಂದು ಆರೋಪಿಸಿದರು.

ಸಂಬಂಧಪಟ್ಟ ಇಲಾಖೆಯವರು ತಕ್ಷಣವೇ ಗುಂಡಿಬಿದ್ದ ರಸ್ತೆಯನ್ನು ದುರಸ್ತಿಪಡಿಸಬೇಕು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ರಸ್ತೆ ತಡೆ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಜಿಎಸ್‌ಟಿ ವಿರೋಧಿಸಿ ಸಿಪಿಐಎಂ ಪ್ರತಿಭಟನೆ



ವಿರಾಜಪೇಟೆ, ಆ.3– ಕೇಂದ್ರ ಸರಕಾರ ಜನರು ಉಪಯೋಗಿಸುವ ಬೇಳೆ ಕಾಳು ಸೇರಿದಂತೆ ದಿನ ನಿತ್ಯದ ಬಳಕೆಯ ಎಲ್ಲಾ ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸಿ ಸಿಪಿಐಎಂ ವಿರಾಜಪೇಟೆ ನಗರ ಸಮಿತಿಯ ಕಾರ್ಯಕರ್ತರು ಪಟ್ಟಣದ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿ ಘೋಷಣೆ ಕೂಗಿದರು.

ಪ್ರತಿಭಟನೆ ವೇಳೆ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಮೇಶ್ ಮಾತನಾಡಿ, ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ಪೆಟ್ರೋಲ್, ಡೀಸಲ್ ಹಾಗೂ ಅಡಿಗೆ ಅನಿಲಗಳ ಬೆಲೆಯನ್ನು ನಿರಂತರ ಏರಿಕೆ ಮಾಡುತ್ತಿರುವುದರಿಂದ ಬಡ ಜನರು ಕಷ್ಟ ಅನುಭವಿಸುವಂತಾಗಿದ್ದು, ಕಾರ್ಮಿಕರು ಜೀವನ ನಡೆಸುವುದೇ ಸಮಸ್ಯೆಯಾಗಿದೆ. ಬಿಜೆಪಿ ಸರ್ಕಾರಕ್ಕೆ ಬಡ ಜನರ ಬಗ್ಗೆ ಕರುಣೆಯೇ ಇಲ್ಲದಂತಾಗಿದೆ. ಅದರಿಂದ ಸಂಘಟನೆ ವತಿಯಿಂದ ಬೆಲೆ ಏರಿಕೆ ವಿರುದ್ಧ ಹೋರಾಟ ನಡೆಸಬೇಕಾಗಿದೆ ಎಂದರು. ಸಿಪಿಐಎಂ ಪಕ್ಷದ ವಿರಾಜಪೇಟೆ ಘಟಕದ ಕಾರ್ಯದರ್ಶಿ ಶಾಜಿ ರಮೇಶ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರ ತಿನ್ನುವ ಅಹಾರ ಸೇರಿದಂತೆ ಎಲ್ಲಾ ವಸ್ತುಗಳ ಬೆಲೆ ಏರಿಕೆ ಹಾಗೂ ಜಿಎಸ್‌ಟಿ ಎಂಬ ಜನವಿರೋಧಿ ನೀತಿಯನ್ನು ಸಿಪಿಐಎಂ ಪಕ್ಷ ಖಂಡಿಸುತ್ತದೆ ಎಂದರು. ಪ್ರತಿಭಟನೆ ಸಂದರ್ಭ ಪಕ್ಷದ ಹಮೀದ್, ರತೀಶ್, ಪದ್ಮಿನಿ, ಹರಿದಾಸ್, ಖಾಸಿಂ, ರಜೀಸ್, ಖಾಲೀದ್, ಗಣೇಶ್ ಇತರರು ಹಾಜರಿದ್ದರು.

ಕಾರ್ಮಿಕರಿಗೆ ಇ–ಶ್ರಮ ಕಾರ್ಡ್ ವಿತರಣೆ

ಮಡಿಕೇರಿ, ಆ.3– ನಗರದ ಕಾರ್ಮಿಕ ಅಧಿಕಾರಿ ಅವರ ಕಚೇರಿ ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಕಾರ್ಮಿಕ ಅದಾಲತ್–2.0 ಹಿನ್ನೆಲೆಯಲ್ಲಿ ಇ–ಶ್ರಮ ನೋಂದಣಿ ಆಂದೋಲನವನ್ನು ಮಾಡಿ, ಕಾರ್ಮಿಕರಿಗೆ ಇ–ಶ್ರಮ ಕಾರ್ಡುಗಳನ್ನು ಕಾರ್ಮಿಕ ಅಧಿಕಾರಿಗಳಿಂದ ವಿತರಿಸಲಾಯಿತು ಹಾಗೂ ವಿವಿಧ ಕಾರ್ಮಿಕರ ಬಾಕಿ ಅರ್ಜಿಗಳ ಕುರಿತು ಚರ್ಚಿಸಲಾಯಿತು.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪೂರ್ವ ಸಿದ್ಧತಾ ಪರಿಶೀಲನಾ ಸಭೆ

ಸ್ವಾತಂತ್ರ್ಯ ಅಮೃತ ಮಹೋತ್ಸವ, ಜಿಲ್ಲಾ ರಜತ ಮಹೋತ್ಸವ ಸಿದ್ಧತೆಗೆ ಸೂಚನೆ



ಚಾಮರಾಜನಗರ, ಆ.3–ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಹಾಗೂ ಜಿಲ್ಲೆಯ ರಜತ ಮಹೋತ್ಸವ ಕಾರ್ಯಕ್ರಮಗಳಿಗೆ ಅವಶ್ಯ ಸಿದ್ಧತೆಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿಂದು ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಹಾಗೂ ಜಿಲ್ಲೆಯ ರಜತ ಮಹೋತ್ಸವ ಕಾರ್ಯಕ್ರಮಗಳ ಆಯೋಜನೆ ಸಂಬಂಧ ನಡೆದ ಪೂರ್ವ ಸಿದ್ಧತಾ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಗಾಗಲೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಬಂಧ ಈ ಹಿಂದೆಯೇ ಸಭೆ ನಡೆಸಿ ನೀಡಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪಥ ಸಂಚಲನ, ಮಕ್ಕಳ ದೇಶಭಕ್ತಿ, ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಶಿಷ್ಟವಾಗಿ ಮೂಡಿಬರಲು ತಾಲೀಮು ನಡೆಸಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಹರ್ ಘರ್ ತಿರಂಗಾ ಅಭಿಯಾನದಡಿ ಮನೆ–ಮನೆಗಳು, ಸಂಘ–ಸಂಸ್ಥೆಗಳು, ಸರ್ಕಾರಿ ಕಚೇರಿ ಕಟ್ಟಡಗಳು, ವಾಣಿಜ್ಯ, ವಿದ್ಯಾ ಸಂಸ್ಥೆಗಳು ಸೇರಿದಂತೆ ವಿವಿಧೆಡೆ ಆ.13 ರಿಂದ 15ರ ವರೆಗೆ ಧ್ವಜ ಹಾರಿಸುವ ಕಾರ್ಯಕ್ರಮ ಅಚ್ಚುಕಟ್ಟಾಗಿ ನಿರ್ವಹಿಸಲು ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲೆಗೆ 25 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ರಜತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದು, ಶೀಘ್ರವೇ ದಿನಾಂಕ ನಿಗದಿಯಾಗಲಿದೆ. ಇದಕ್ಕಾಗಿ ವೈವಿಧ್ಯಮಯ ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕೂಡಲೇ ಕಾರ್ಯ ಪ್ರವೃತ್ತರಾಗಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಜಿಪಂ ಸಿಇಓ ಕೆ.ಎಂ. ಗಾಯತ್ರಿ ಮಾತನಾಡಿದರು.

ಎಎಸ್ಪಿ ಕೆಎಸ್.ಸುಂದರ್‌ರಾಜ್, ಎಸಿ ಗೀತಾ ಹುಡೇದ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೆ.ಸುರೇಶ್, ತಹಸೀಲ್ದಾರ್ ಬಸವರಾಜು, ಮಂಜುಳಾ, ರವಿಶಂಕರ್, ಆನಂದಯ್ಯ, ಆನಂದಪ್ಪನಾಯಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಗೀತಾಲಕ್ಷ್ಮಿ, ಕೃಷಿ ಇಲಾಖೆ ಉಪನಿರ್ದೇಶಕ ಮಧುಸೂದನ್, ಇತರೆ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

ಮೆದುಳು ನಿಷ್ಕ್ರಿಯ: ಪುತ್ರನ ಅಂಗಾಂಗ ದಾನ ಮಾಡಿ ಸಾರ್ಥಕತೆ ಮೆರೆದ ಕುಟುಂಬ



ಎನ್.ರಾಘವ

ಕೊಳ್ಳೇಗಾಲ, ಆ.3–ಪುತ್ರನ ಸಾವಿನ ನಡುವೆಯೂ ಆತನ ಅಂಗಾಂಗ ದಾನ ಮಾಡುವ ಮೂಲಕ ತಾಲೂಕಿನ ಚಿಲಕವಾಡಿ ಗ್ರಾಮದ ಕುಟುಂಬವೊಂದು ಸಾರ್ಥಕತೆ ಮೆರೆದಿದೆ.

ಗ್ರಾಮದ ಯಶೋದಮ್ಮ, ನೀಲಪ್ಪಸ್ವಾಮಿ ದಂಪತಿ ತಮ್ಮ ಪುತ್ರನ ಸಾವಿನ ನೋವಲ್ಲೂ ಅಂಗಾಂಗ ದಾನ ಮಾಡಿದೆ.

ನೀಲಪ್ಪಸ್ವಾಮಿ ಪುತ್ರ ಎನ್.ರಾಘವ(29) ಜು.29ರಂದು ರಾತ್ರಿ ಯಳಂದೂರು ಮಾರ್ಗ ಬೈಕ್‌ನಲ್ಲಿ ಊರಿಗೆ ತೆರಳುತ್ತಿದ್ದ ವೇಳೆ ಎದುರಿನಿಂದ ಬಂದ ಮತ್ತೊಂದು ಬೈಕ್‌ಗೆ ಡಿಕ್ಕಿ ಹೊಡೆದು ತೀವ್ರ ಗಾಯಗೊಂಡಿದ್ದರು. ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಅಲ್ಲಿನ ವೈದ್ಯರ ಶಿಫಾರಸಿನ ಮೇರೆಗೆ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿತ್ತು. ಆಸ್ಪತ್ರೆಯ ವೈದ್ಯರು ರಾಘವ ಅವರ ಮೆದುಳು ನಿಷ್ಕ್ರಿಯವಾಗಿರುವುದಾಗಿ ದೃಢಪಡಿಸಿದರು. ಈ ಹಿನ್ನೆಲೆ ರಾಘವ ಪತ್ನಿ ಭಾವಹಂಸ ಅವರು ತಮ್ಮ ಕುಟುಂಬ ಸದಸ್ಯರಾದ ಗಾಯತ್ರಿ, ಶುಚಿತ್ರ, ನಾಗೇಂದ್ರ ಹಾಗೂ ಅತ್ತೆ, ಮಾವನ ಜೊತೆ ಚರ್ಚಿಸಿ ಅಂಗಾಂಗ ದಾನಕ್ಕೆ ಒಪ್ಪಿಸಿದ್ದಾರೆ. ಸಿದ್ದಪ್ಪಸ್ವಾಮಿ, ಯಶೋದಮ್ಮ ದಂಪತಿ ದುಃಖದ ನಡುವೆಯೂ ತನ್ನ ಮಗನ ಅಂಗಾಂಗ ದಾನದಿಂದ ಇನ್ನಿತರರ ಉಳಿಯಲಿ ಎಂದು ಸಮ್ಮತಿಸಿದರು. ಮೈಸೂರಿನ ಅಪೊಲೋ ಆಸ್ಪತ್ರೆ ವೈದ್ಯರು ಜೀವ ಸಾರ್ಥಕತೆ ಎನ್‌ಜಿಓ ತಂಡದ ಸಹಯೋಗದೊಂದಿಗೆ ಮಂಗಳವಾರ ಸಂಜೆ ಅಂಗಾಂಗ ದಾನದ ಎಲ್ಲಾ ಪ್ರಕ್ರಿಯೆ ಪೂರ್ಣಗೊಳಿಸಲಾಯಿತು. ಆ ಮೂಲಕ ಚಿಕವಾಡಿ ಗ್ರಾಮದ ಕುಟುಂಬವೊಂದು ಮಗನ ಸಾವಿನ ನೋವಿನಲ್ಲೂ ಸಾರ್ಥಕತೆ ಮೆರೆದು ಇತರರಿಗೆ ಮಾದರಿಯಾಗಿದೆ.

ಜು.29ರಂದು ಅಪಘಾತದಲ್ಲಿ ಗಾಯಗೊಂಡಿದ್ದ ರಾಘವ ಅವರ ಮಿದುಳು ಸಮರ್ಪಕ ರೀತಿ ಕೆಲಸ ಮಾಡುತ್ತಿಲ್ಲ, ನಿಷ್ಕ್ರಿಯವಾಗಿದೆ ಎಂದು ಜು.30ರಂದು ವೈದ್ಯರು ಮೈಸೂರಿನ ಖಾಸಗಿ ಆಸ್ಪತ್ರೆ(ಡಿಆರ್‌ಎಂ ಆಸ್ಪತ್ರೆ)ಯ ವೈದ್ಯರು ದೃಢಪಡಿಸಿದರು. ತಕ್ಷಣ ಅವರ ತಂದೆ–ತಾಯಿ ಹಾಗೂ ಪತ್ನಿಯೊಂದಿಗೆ ಚರ್ಚಿಸಿ ಅಂಗಾಂಗ ದಾನಕ್ಕೆ ಒಪ್ಪಿಗೆ ಪಡೆಯಲಾಯಿತು. ಈ ವೇಳೆ ಕುಟುಂಬ ಸದಸ್ಯರೆಲ್ಲರೂ ಅಂಗಾಂಗ ದಾನದಿಂದ ಇನ್ನಿತರಿಗೆ ಉಪಯೋಗವಾಗಲಿ ಎಂದು ವೈದ್ಯರ ಸಮ್ಮುಖದಲ್ಲಿ ಒಪ್ಪಿಕೊಂಡರು. ರಾಘವ ನನ್ನ ಗೆಳೆಯನಂತಿದ್ದ. ಆತ ಸಾವಿಗೀಡಾಗಿರುವುದನ್ನ ಇನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ಆತ ಸಾವಿನಲ್ಲೂ ಅಂಗಾಂಗ ದಾನದಿಂದ ನೆನಪುಳಿಯುವ ಸಾರ್ಥಕ ಕೆಲಸವಾಗಿದೆ.

– ಕಣ್ಣೂರು ನಾಗೇಂದ್ರ, ರಾಘವ ಅವರ ಭಾವ.

ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜುಗೆ ಸನ್ಮಾನ



ಚಾಮರಾಜನಗರ, ಆ.3– ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಹೆಚ್.ಎಸ್.ಬಸವರಾಜು ಅವರನ್ನು ನಾಗವಳ್ಳಿ ಬಿಜೆಪಿ ಮಹಾಶಕ್ತಿ ಕೇಂದ್ರ ವತಿಯಿಂದ ನಗರದ ಪ್ರವಾಸಿ ಮಂದಿರದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಾಗವಳ್ಳಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ವಿಜಯೇಂದ್ರ, ಗ್ರಾಪಂ ಸದಸ್ಯರಾದ ಗೋವಿಂದರಾಜ್, ಮೂರ್ತಿ, ಮುಖಂಡ ಬಸವನಪುರ ರಾಜಶೇಖರ್, ದಡದಹಳ್ಳಿ ಶಂಕರ್, ಹೆಬ್ಬಸೂರು ಶಕ್ತಿ ಕೇಂದ್ರದ ನಾಗಸುಂದ್ರ, ನಂಜುಂಡಸ್ವಾಮಿ, ಮಹದೇವಪ್ರಸಾದ್, ನಾಗೇಶ್, ನಾಗಯ್ಯ, ಚಂದಕವಾಡಿ ರವಿ, ಕೋಡಿಮೋಳೆ ಮಹೇಶ್, ಬಂಗಾರು, ಅರಳೀಪುರ ಮಹದೇವಸ್ವಾಮಿ, ಶಿವಕುಮಾರ್, ನಾಗವಳ್ಳಿ ಶಕ್ತಿ ಕೇಂದ್ರದ ನಾಗಮಲ್ಲೇಶ್, ಪುಟ್ಟಸ್ವಾಮಿ, ಪುಟ್ಟಣ್ಣ, ಮಹೇಶ್, ಅಯ್ಯನಪುರ ಶ್ರೀಕಾಂತ್, ದೊಡ್ಡಮೋಳೆ ಮಂಜ ಇತರರಿದ್ದರು.

ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಸರ್ಕಾರದಿಂದ ಪೌಷ್ಟಿಕ ಆಹಾರ



ಗುಂಡ್ಲುಪೇಟೆ, ಆ.3–ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಅಪೌಷ್ಟಿಕತೆ ನಿವಾರಣೆ ಮಾಡಲು ಸರ್ಕಾರ ಪೌಷ್ಟಿಕ ಆಹಾರ ನೀಡಲು ಮುಂದಾಗಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯು ಪಟ್ಟಣದ ಪೇಟೆ ಪ್ರೈಮರಿ ಶಾಲಾವರಣದಲ್ಲಿ ಆಯೋಜಿಸಿದ್ದ ಶಾಲಾ ಮಕ್ಕಳಿಗೆ ಮೊಟ್ಟೆ ಹಾಗೂ ಬಾಳೆಹಣ್ಣು ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಾಲಾ ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಧ್ಯಾಹ್ನ ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ, ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ಇಲ್ಲವೇ ಶೇಂಗಾ ಚಿಕ್ಕಿ ವಿತರಿಸಲಾಗುವುದು.

ತಾಲೂಕಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 1ರಿಂದ 8ನೇ ತರಗತಿವರೆಗೆ 13,564 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇದರ ಉಪಯೋಗ ಪಡೆದುಕೊಳ್ಳಲಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಜುಲೈ ಅಂತ್ಯದಿಂದ ಫೆಬ್ರವರಿ ವರೆಗೆ ವಾರಕ್ಕೆ 2ರಂತೆ 46 ದಿನ ಕಾರ್ಯಕ್ರಮ ಜಾರಿಯಲ್ಲಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಬಿಇಒ ಎಸ್.ಸಿ.ಶಿವಮೂರ್ತಿ, ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಎಂ.ಪಿ.ಮಂಜಣ್ಣ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಿವಪ್ರಸಾದ್, ಮುಖ್ಯಶಿಕ್ಷಕ ಶಿವಕುಮಾರ್, ಸಹಶಿಕ್ಷಕಿ ರೇಖಾ, ಬಗರ್ ಹುಕುಂ ಸಮಿತಿ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಬಿಜೆಪಿ ಮಂಡಲಾಧ್ಯಕ್ಷ ಜಗದೀಶ್ ಸೇರಿದಂತೆ ಹಲವರು ಇದ್ದರು.

ಮಹದೇಶ್ವರಬೆಟ್ಟ ವ್ಯಾಪ್ತಿ ಗ್ರಾಮಗಳಿಗೆ ಜಿಪಂ ಸಿಇಓ ಭೇಟಿ



ಚಾಮರಾಜನಗರ, ಆ.3–ಹನೂರು ತಾಲೂಕಿನ ಮಲೆಮಹದೇಶ್ವರಬೆಟ್ಟ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಮಂಗಳವಾರ ಭೇಟಿ ನೀಡಿ, ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದರು.

ವಡಕೆಹಳ್ಳ ಗ್ರಾಮದಲ್ಲಿ ನರೇಗಾ ಯೋಜನೆಯಡಿ ನಾಲಾ ರಿವಿಟ್‌ಮೆಂಟ್, ಹಳೆಯೂರು ಗ್ರಾಮದಲ್ಲಿ ರಸ್ತೆ ಕಲ್ಲು ಪಿಚ್ಚಿಂಗ್ ಕಾಮಗಾರಿ ಹಾಗೂ ಕಿರಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 15ನೇ ಹಣಕಾಸು ಯೋಜನೆಯಡಿ ನಿರ್ವಹಿಸುತ್ತಿರುವ ದುರಸ್ತಿ ಕಾರ್ಯ ಪರಿಶೀಲಿಸಿದರು. ಬಳಿಕ ಮಲೆಮಹದೇಶ್ವರಬೆಟ್ಟ ಗ್ರಾಮದಲ್ಲಿ ಪಾಲಾರ್ ಮುಖ್ಯರಸ್ತೆಯ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರುವ ಗರಿಕೆಕಡ್ಡಿ ಕೆರೆ ಅಭಿವೃದ್ಧಿ ಕಾಮಗಾರಿ ವೀಕ್ಷಿಸಿದರು.

ಜಲಶಕ್ತಿ ಅಭಿಯಾನದಡಿ ಅಂತರ್ಜಲ ಅಭಿವೃದ್ಧಿ ಆಧಾರಿತ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸುವಂತೆ ಹಾಗೂ ಕಾಡಂಚಿನ ಗ್ರಾಮಗಳಲ್ಲಿ ಜನರಿಗೆ ಉದ್ಯೋಗ ಒದಗಿಸುವಂತೆ ಸಿಇಓ ಸೂಚಿಸಿದರು. ಶಾಲಾ ಅಭಿವೃದ್ಧಿಗೆ ಪೂರಕವಾಗಿರುವ ಕಾಂಪೌಂಡ್, ಶೌಚಾಲಯ, ಆಟದ ಮೈದಾನ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಪ್ರಗತಿ ಸಾಧಿಸಬೇಕು. ಅಮೃತ ಸರೋವರ ಯೋಜನೆಯಡಿ ಆಯ್ಕೆಯಾದ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವಂತೆ ಕೆ.ಎಂ.ಗಾಯತ್ರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಹನೂರು ತಾಪಂ ಇಓ ಪಿ.ಶ್ರೀನಿವಾಸ್, ಮಲೆಮಹದೇಶ್ವರ ಬೆಟ್ಟ ಗ್ರಾಪಂ ಪಿಡಿಓ ಕಿರಣ್‌ಕುಮಾರ್ ಇತರರಿದ್ದರು.

ಪಿಹೆಚ್.ಡಿ



ಕೊಳ್ಳೇಗಾಲ, ಆ.3–ಕೊಳ್ಳೇಗಾಲದ ಭೀಮನಗರ ನಿವಾಸಿ ಗುರುಮೂರ್ತಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಸಹಪ್ರಾಧ್ಯಾಪಕಿ ಡಾ.ಎನ್.ಮಮತಾ ಮಾರ್ಗದರ್ಶನದಲ್ಲಿ ಮಂಡಿಸಿದ ಕರ್ನಾಟಕ ರಾಜ್ಯದ ದಲಿತರ ಸಾಮಾಜಿಕ ಬದಲಾವಣೆ ಮತ್ತು ಸಬಲೀಕರಣದಲ್ಲಿ ಸಾಮಾಜಿಕ ಮಾಧ್ಯಮಗಳ ಪಾತ್ರ ಅಧ್ಯಯನ ಕುರಿತ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಅಂಗೀಕರಿಸಿದೆ.

ಮಣಗಳ್ಳಿ ಗ್ರಾಪಂನಲ್ಲಿ ಗ್ರಾಮ ಸಭೆ



ಹನೂರು, ಆ.3–ತಾಲೂಕಿನ ಮಣಗಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಂಜೆಒಡೆಯರದೊಡ್ಡಿ ಗ್ರಾಮದಲ್ಲಿ 2022–23ನೇ ಸಾಲಿನ ಮೊದಲ ಹಂತದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹಾಗೂ 14, 15ನೇ ಹಣಕಾಸು ಯೋಜನೆಯ ಸಾಮಾಜಿಕ ಪರಿಶೋಧನಾ ಗ್ರಾಮ ಸಭೆ ಜರುಗಿತು.

ನರೇಗಾ ಸಂಯೋಜನಾ ಅಧಿಕಾರಿ ನಾರಾಯಣ್ ಮಾತನಾಡಿ, 2022–23ನೇ ಸಾಲಿನ ಅವಧಿಯಲ್ಲಿ ಮಣಗಳ್ಳಿ ಗ್ರಾಪಂನಲ್ಲಿ ರೇಷ್ಮೆ ಇಲಾಖೆ 3, ತೋಟಗಾರಿಕೆ ಇಲಾಖೆ 5, ಅರಣ್ಯ ಇಲಾಖೆ 1, ಕೃಷಿ ಇಲಾಖೆ 4 ಕಾಮಗಾರಿಗಳು ಸೇರಿದಂತೆ ಒಟ್ಟು 109 ಕಾಮಗಾರಿಗಳು ಜರುಗಿದ್ದು, 41,11,603 ರೂ. ಕೂಲಿ ಹಣ, 6,40,320 ರೂ. ಸಾಮಗ್ರಿ ವೆಚ್ಚದ ಅನುದಾನ ಮಂಜೂರಾಗಿದೆ ಎಂದು ಸಭೆಗೆ ತಿಳಿಸಿದರು.

ಈ ಯೋಜನೆಯಲ್ಲಿ ಸಾರ್ವಜನಿಕ ಮತ್ತು ವೈಯಕ್ತಿಕ ಕಾಮಗಾರಿಗಳನ್ನು ಮಾಡಿಕೊಳ್ಳಲು ಅವಕಾಶವಿದ್ದು, ಹಿರಿಯ ನಾಗರಿಕರು ಕೂಡ ಈ ಯೋಜನೆಯಲ್ಲಿ ಕೆಲಸ ಮಾಡಲು ಅವಕಾಶ ಇದೆ. ಇದನ್ನು ಬಳಸಿಕೊಳ್ಳಬೇಕು ಎಂದು ತಿಳಿಸಿದರು. ಜಮೀನು ಬದು ನಿರ್ಮಾಣ, ತೆಂಗಿನ ಸಸಿ ನೆಡುವುದು, ಕೊಟ್ಟಿಗೆ ನಿರ್ಮಾಣ ಕಾಮಗಾರಿಗಳ ಜೊತೆಗೆ ಸಿಸಿ ರಸ್ತೆ, ಚೆಕ್ ಡ್ಯಾಮ್ ನಿರ್ಮಾಣ, ಚರಂಡಿ,ಸಾರ್ವಜನಿಕ ಶೌಚಾಲಯ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಬಹುದು ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ನೋಡಲ್ ಅಧಿಕಾರಿಯಾದ ಶಿಕ್ಷಣ ಇಲಾಖೆ ದೇವರಾಜು, ಗ್ರಾಪಂ ಅಧ್ಯಕ್ಷೆ ಮಂಜುಳಾ ಪ್ರಭುಸ್ವಾಮಿ, ಉಪಾಧ್ಯಕ್ಷ ರಾಜಪ್ಪ, ಕಾರ್ಯದರ್ಶಿ ಅಶ್ವಿನಿ, ಪಿಡಿಓ ನಾಗರಾಜ್‌ಮೂರ್ತಿ, ಗ್ರಾಪಂ ಸದಸ್ಯರಾದ ಲತಾ ಸಿದ್ದರಾಜು, ಮಾದೇವ ಹಾಗೂ ಗ್ರಾಮಸ್ಥರಿದ್ದರು.

ನಕಲಿ ಲೀಸ್ ಅಗ್ರಿಮೆಂಟ್ ಸೃಷ್ಟಿಸಿ ಮನೆ ಮಾಲೀಕರಿಗೆ ಅಧಿಕ ಹಣಕ್ಕೆ ಬೇಡಿಕೆ; ಬೆದರಿಕೆ

ವಕೀಲರ ವಿರುದ್ಧ ಪ್ರಕರಣ ದಾಖಲು

ಮೈಸೂರು,ಆ.3–ನಕಲಿ ಲೀಸ್ ಅಗ್ರಿಮೆಂಟ್ ಸೃಷ್ಟಿಸಿ ಹೆಚ್ಚಿನ ಹಣ ನೀಡಬೇಕೆಂದು ಮನೆ ಮಾಲೀಕರಿಗೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ಮೈಸೂರಿನ ವಕೀಲರೊಬ್ಬರ ವಿರುದ್ಧ ಅಶೋಕಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಕೀಲ ಗುರುರಾಜ್ ಕೆ.ಜೋಷಿ(44) ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಿರುದ್ಧ ಮನೆ ಮಾಲೀಕರಾದ ಸರಸ್ವತಮ್ಮ(67) ಅವರು ಮೈಸೂರಿನ 5ನೇ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾಖಲಿಸಿದ್ದ ಖಾಸಗಿ ದೂರಿನ ಮೇರೆಗೆ ನ್ಯಾಯಾಲಯ ನೀಡಿದ ಆದೇಶದಂತೆ ಪ್ರಕರಣ ದಾಖಲಾಗಿದೆ.

ವಿವರ: ದೂರುದಾರರ ಮನೆಯನ್ನು ಭೋಗ್ಯಕ್ಕೆ ಪಡೆದು ವಕೀಲ ಗುರುರಾಜ್ ಕೆ.ಜೋಷಿ 12 ವರ್ಷದಿಂದ ವಾಸವಿದ್ದು, ಇದೀಗ ಮನೆ ಖಾಲಿ ಮಾಡಿದ್ದಾರೆ. ಸರಸ್ವತಮ್ಮ ಅವರ ಪತಿ ವರದರಾಜನ್ ನಿಧನರಾಗಿದ್ದು, ಅವರ ಸಹಿಯನ್ನು ನಕಲು ಮಾಡಿ ನಕಲಿ ಲೀಸ್ ಅಗ್ರಿಮೆಂಟ್ ಸೃಷ್ಟಿಸಿ ಹೆಚ್ಚಿನ ಹಣ ನೀಡಬೇಕೆಂದು ನಾಲ್ಕೈದು ಹುಡುಗರನ್ನು ಕರೆತಂದು ಬೆದರಿಸುತ್ತಿದ್ದಾರೆ ಎಂದು ನೀಡಿದ್ದ ದೂರಿನ ಮೇರೆಗೆ ಪೊಲೀಸರು, ವಕೀಲ ಜೋಷಿ ವಿರುದ್ಧ ಭಾರತೀಯ ದಂಡ ಸಂಹಿತೆ 506, 420, 465, 468, 471ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮುಂದುವರೆದ ಆನ್‌ಲೈನ್ ದೋಖಾ

ವೈದ್ಯರು, ಮನೆ ಮಾಲೀಕ, ವೃದ್ಧೆಗೆ ಲಕ್ಷ ಲಕ್ಷ ವಂಚನೆ

ಕ್ರೈಂ ಬಾಕ್ಸ್

ಮೈಸೂರು,ಆ.3–ಕಡಿಮೆ ದರದಲ್ಲಿ ವೈದ್ಯಕೀಯ ಸಾಮಗ್ರಿಗಳನ್ನು ಕೊಡುವುದಾಗಿ ನಂಬಿಸಿ ವೈದ್ಯರೊಬ್ಬರಿಗೆ ಆನ್‌ಲೈನ್ ಮೂಲಕ 2.98 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಡಿಆರ್‌ಎಂ ಆಸ್ಪತ್ರೆಯ ವೈದ್ಯ ಡಾ.ಎನ್.ಎಸ್.ರವಿಚಂದ್ರ ಅವರಿಗೆ ಕರೆ ಮಾಡಿದ ವ್ಯಕ್ತಿ ತನ್ನನ್ನು ವೆಂಕಟೇಶ ಭಗವಾನ್ ಎಂದು ಪರಿಚಯಿಸಿಕೊಂಡು, ಕಡಿಮೆ ದರದಲ್ಲಿ ವೈದ್ಯಕೀಯ ಸಾಮಗ್ರಿ ನೀಡುವುದಾಗಿ ನಂಬಿಸಿದ್ದಾನೆ. ಮುಂಗಡ ಹಣ ಎಂದು ಗೂಗಲ್ ಪೇ ಮೂಲಕ 2,98,979 ರೂಪಾಯಿ ಪಡೆದು ವೈದ್ಯಕೀಯ ಸಾಮಗ್ರಿಗಳನ್ನೂ ಕೊಡದೆ, ಹಣವನ್ನೂ ಹಿಂತಿರುಗಿಸದೆ ವಂಚಿಸಿದ್ದಾನೆ ಎಂದು ದೂರು ನೀಡಲಾಗಿದೆ.

ಮತ್ತೊಂದು ವಂಚನೆ: ಮನೆಗೆ ಬಾಡಿಗೆಗೆ ಬರುವುದಾಗಿ ತಿಳಿಸಿ ಮನೆ ಮಾಲೀಕರಿಂದ ಆನ್‌ಲೈನ್ ಮೂಲಕ 99,995 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ರೂಪಾನಗರದಲ್ಲಿ ವಾಸವಿರುವ ಇಂಜಿನಿಯರ್ ಎಂ.ಚಂದ್ರಶೇಖರ್ ಮನೆ ಬಾಡಿಗೆಗೆ ನೀಡುವುದಾಗಿ ಜಾಹೀರಾತು ಪ್ರಕಟಿಸಿದ್ದರು. ಅದನ್ನು ನೋಡಿದ ವ್ಯಕ್ತಿ, ತಾನು ಮಿಲಿಟರಿಯಲ್ಲಿ ಕೆಲಸದಲ್ಲಿ ಇರುವುದಾಗಿ ಪರಿಚಯಿಸಿಕೊಂಡು ಮನೆಗೆ ಬಾಡಿಗೆಗೆ ಬರುವುದಾಗಿ ನಂಬಿಸಿ 99,995 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

ವೃದ್ಧೆಗೆ ಮೋಸ: ವಿದ್ಯುತ್ ಬಿಲ್ ಅಪ್‌ಡೇಟ್ ಆಗಿಲ್ಲ ಎಂದು ಮೆಸೇಜ್ ಕಳುಹಿಸಿ ವೃದ್ಧೆಯೋರ್ವರಿಗೆ 1.80 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಲಾಗಿದೆ. ವಿದ್ಯಾರಣ್ಯಪುರಂ ನಿವಾಸಿ ವೀರಶೈಲಜಾ ರಾಣಿ(67) ಅವರ ಮೊಬೈಲ್‌ಗೆ ಕಳೆದ ತಿಂಗಳ ವಿದ್ಯುತ್ ಬಿಲ್ ಅಪ್‌ಡೇಟ್ ಆಗಿಲ್ಲ ಎಂದು ಮೆಸೇಜ್ ಬಂದಿದೆ. ಮೆಸೇಜ್ ಬಂದ ನಂಬರ್ ಅನ್ನು ಅವರು ಸಂಪರ್ಕಿಸಿದಾಗ ಎಸ್‌ಬಿಐ ಕ್ವಿಕ್ ಆ್ಯಪ್ ಇನ್‌ಸ್ಟಾಲ್ ಮಾಡಿ 10 ರೂ. ವರ್ಗಾವಣೆ ಮಾಡುವಂತೆ ಆತ ತಿಳಿಸಿದ್ದು, ಮಹಿಳೆಯು ಅದೇ ರೀತಿ ಮಾಡಿದಾಗ ಅವರ ಖಾತೆಯಿಂದ 1.80 ಲಕ್ಷ ರೂ. ಅಕ್ರಮವಾಗಿ ವರ್ಗವಾಗಿದೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಮಂಡ್ಯ, ಆ. 3– ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ. ಮಂಡ್ಯ ನಗರದ ಬೀಡಿ ಕ್ವಾಟ್ರರ್ಸ್ ನಿವಾಸಿ ಅನ್ವರ್ ಖಾನ್(40) ಅವರು ತನ್ನ ಸ್ನೇಹಿತನ ಜೊತೆ ಆಗಸ್ಟ್ 1ರಂದು ರಾತ್ರಿ ಬೀಡಿ ಕಾಲೋನಿ ರಸ್ತೆಯಲ್ಲಿರುವ ಕೊಬ್ಬರಿ ಮಂಡಿ ಬಳಿ ನಡೆದುಕೊಂಡು ಹೋಗುತ್ತಿದ್ದಾಗ, ಹಿಂಬದಿಯಿಂದ ಬಂದ ಮಾರುತಿ ಓಮ್ನಿ ಕಾರು (ಕೆಎ 09–ಎಂ 9081) ಅವರಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಕಾರು ಚಾಲಕ ಮತ್ತು ಸ್ನೇಹಿತ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದೊಯ್ಯುವ ಮಾರ್ಗಮಧ್ಯೆ ಅವರು ಆಗಸ್ಟ್ 2ರಂದು ಮುಂಜಾನೆ 2.25ರ ಸುಮಾರಿನಲ್ಲಿ ಮೃತಪಟ್ಟಿದ್ದಾರೆ. ಈ ಸಂಬಂಧ ಮಂಡ್ಯ ಸೆಂಟ್ರಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿ ಹೊಡೆದು ಪಾದಚಾರಿ ಮೃತಪಟ್ಟ ಘಟನೆ ಮೈಸೂರು–ಬೆಂಗಳೂರು ಹೆದ್ದಾರಿಯ ಶ್ರೀನಿವಾಸಪುರದಲ್ಲಿ ಸಂಭವಿಸಿದೆ.

ಮಂಡ್ಯದ ಹೊಸಹಳ್ಳಿ ನಿವಾಸಿ ಬಾಲಕೃಷ್ಣ ಅಲಿಯಾಸ್ ಕೃಷ್ಣ(51) ಆಗಸ್ಟ್ 2ರಂದು ಬೆಳಗಿನ ಜಾವ 3.45ರ ಸುಮಾರಿನಲ್ಲಿ ಶ್ರೀನಿವಾಸಪುರದ ಕಿಯಾ ಕಾರ್ ಶೋರೂಂ ಮುಂದೆ ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಕಾರು (ಕೆಎ 01–ಎಂಪಿ 4291) ಅವರಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಕಾರು ಚಾಲಕ ಶಫೀರ್, ಪೊಲೀಸರ ಸಹಕಾರದೊಂದಿಗೆ ಮಂಡ್ಯ ಜಿಲ್ಲಾಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಬಾಲಕೃಷ್ಣ ಮೃತಪಟ್ಟಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಲ್ಲೇ ಕೂತು ಹಣ ಗಳಿಸುವ ಆಸೆ ತೋರಿಸಿ ಗೃಹಿಣಿಗೆ 75 ಸಾವಿರ ವಂಚನೆ

ಹಾಸನ, ಆ. 3– ಮನೆಯಿಂದಲೇ ಕೆಲಸ ಮಾಡಿ ಕಮಿಷನ್ ಪಡೆಯಬಹುದು ಎಂದು ನಂಬಿಸಿ ಗೃಹಿಣಿಗೆ 75,781 ರೂ. ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ವರದಿಯಾಗಿದೆ. ಅರಕಲಗೂಡು ತಾಲೂಕು ರಾಮನಾಥಪುರ ಗ್ರಾಮದ ಗೃಹಿಣಿ ಗಾಯತ್ರಿ(20) ಗೂಗಲ್‌ನಲ್ಲಿ ನ್ಯೂಸ್ ಹುಡುಕುತ್ತಿದ್ದಾಗ banjiji.com link ಅನ್ನು ಕ್ಲಿಕ್ ಮಾಡಿದ್ದಾರೆ. ಆಗ ಇಂಟರ್‌ನ್ಯಾಷನಲ್ ಆನ್‌ಲೈನ್ ಶಾಪಿಂಗ್ ಪ್ಲಾಟ್‌ಫಾರಂನಲ್ಲಿ ನೀವು ಮನೆಯಲ್ಲೇ ಜಾಬ್ ಮಾಡಿ, ನಾವು ಕಳುಹಿಸುವ ಟಾಸ್ಕ್‌ಗಳನ್ನು ಪೂರ್ಣಗೊಳಿಸಿದರೆ ಕಮಿಷನ್ ರೂಪದಲ್ಲಿ ಹಣ ನೀಡುತ್ತೇವೆ ಎಂಬ ಸಂದೇಶ ಇತ್ತು. ಟಾಸ್ಕ್‌ಗಳಿಗಾಗಿ ಹಣ ಪಾವತಿಸಬೇಕೆಂದು ತಿಳಿಸಿದ್ದು, ಅದನ್ನು ನಂಬಿದ ಗೃಹಿಣಿ 75,781 ರೂ. ಆನ್‌ಲೈನ್ ಮೂಲಕ ಪಾವತಿಸಿದ್ದು, ಆಕೆಗೆ ಕಮೀಷನ್ ಆಗಲೀ, ಹೂಡಿದ ಹಣವಾಗಲೀ ಬಾರದೇ ಮೋಸ ಹೋಗಿದ್ದಾರೆ. ಈ ಸಂಬಂಧ ಹಾಸನ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

ಮಂಡ್ಯ,ಆ.3–ಮನೆ ಬಾಗಿಲು ಮುರಿದು 4.7 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮಂಡ್ಯದ ಶಂಕರನಗರದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಟಿ.ರಘು(35) ಎಂಬುವರ ಪತ್ನಿ ಹೆರಿಗೆಗಾಗಿ ತವರು ಮನೆಗೆ ಹೋಗಿರುವ ಕಾರಣ ಅವರು, ತಮ್ಮ ಅಕ್ಕನ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ಆಗಸ್ಟ್ 2ರಂದು ತಮ್ಮ ಮನೆಗೆ ಅವರು ಬಂದಾಗ ಬಾಗಿಲು ಮುರಿದಿರುವುದು ಕಂಡುಬಂದಿದೆ. ಖದೀಮರು ಮನೆಯಲ್ಲಿದ್ದ 3,37,500 ರೂ. ಮೌಲ್ಯದ ಚಿನ್ನಾಭರಣ ಹಾಗೂ 15 ಸಾವಿರ ರೂ. ಮೌಲ್ಯದ ಬೆಳ್ಳಿ ಪದಾರ್ಥ ಮತ್ತು 55 ಸಾವಿರ ನಗದು ಸೇರಿದಂತೆ ಒಟ್ಟು 4,07,500 ರೂ. ಮೌಲ್ಯದ ಪದಾರ್ಥಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತ ಮಹಿಳೆಯನ್ನು ಬಿಡದ ಸರಗಳ್ಳರು

1.40 ಲಕ್ಷ ಮೌಲ್ಯದ ಸರ ಕಳವು

ಮೈಸೂರು, ಆ. 3– ಸರಗಳ್ಳರು ರೈತ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರು ತಾಲೂಕು ಡಿ. ಸಾಲುಂಡಿ ಗ್ರಾಮದಿಂದ ವರದಿಯಾಗಿದೆ. ಈ ಗ್ರಾಮದ ರೈತ ಮಹಿಳೆ ಕಾಳಮ್ಮ(30) ಅವರು ಆಗಸ್ಟ್ 1ರಂದು ಸಂಜೆ ಹಸು–ಕರು ಮೇಯಿಸಿದ ನಂತರ ಮನೆಗೆ ವಾಪಸಾಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು, ಅವರ ಕತ್ತಿನಲ್ಲಿದ್ದ 1.40 ಲಕ್ಷ ರೂ. ಮೌಲ್ಯದ 35 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿವಿಸಿ ಮುಖ್ಯಸ್ಥರಾಗಿ ಸುರೇಶ್ ಪಟೇಲ್ ನೇಮಕ



ನವದೆಹಲಿ: ಕೇಂದ್ರ ಜಾಗೃತ ಆಯೋಗದ (ಸಿವಿಸಿ) ಮುಖ್ಯಸ್ಥರಾಗಿ ಸುರೇಶ್ ಎನ್.ಪಟೇಲ್ ಅವರನ್ನು ಕೇಂದ್ರ ಸರ್ಕಾರ ಬುಧವಾರ ನೇಮಕ ಮಾಡಿದೆ. ರಾಷ್ಟ್ರಪತಿ ಭವನದಲ್ಲಿ ಅಧಿಕಾರ ಸ್ವೀಕರಿಸಿದ ಪಟೇಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಬೋಧಿಸಿದರು. ಖಾಲಿ ಇದ್ದ ಸಿವಿಸಿ ಮುಖ್ಯಸ್ಥರ ಹುದ್ದೆಯಲ್ಲಿ ಕಳೆದ ಜೂನ್‌ನಿಂದ ಪಟೇಲ್ ಅವರು ಪ್ರಭಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇದೇ ವೇಳೆ ಸಿವಿಸಿ ಇನ್ನಿಬ್ಬರು ಆಯುಕ್ತರಾಗಿ ಅಸ್ಸಾಂ–ಮೇಘಾಲಯ ಕೇಡರ್‌ನ ನಿವೃತ್ತ ಐಪಿಎಸ್ ಅಧಿಕಾರಿ ಅರವಿಂದ್ ಕುಮಾರ್ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಪ್ರವೀಣ್‌ಕುಮಾರ್ ಶ್ರೀವಾಸ್ತವ ಅಧಿಕಾರ ವಹಿಸಿಕೊಂಡರು.

ಸಿದ್ದರಾಮಯ್ಯ ಜನ್ಮದಿನ: ವಿಶೇಷ ಪೂಜೆ, ವಿವಿಧ ಸೇವಾ ಕಾರ್ಯ









ಮೈಸೂರು,ಆ.3(ಆರ್‌ಕೆ)–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ದಾವಣಗೆರೆಯಲ್ಲಿ ಅಮೃತೋತ್ಸವ ಅದ್ಧೂರಿಯಾಗಿ ನೆರವೇರಿದರೆ, ಮೈಸೂರಲ್ಲೂ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸಿದರು.

ಮಲೆ ಮಹದೇಶ್ವರ ಬೆಟ್ಟದ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಗರಡಿಕೇರಿಯ ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ಸಿದ್ದರಾಮಯ್ಯ ಹೆಸರಲ್ಲಿ ವಿಶೇಷ ಪೂಜೆ ಮಾಡಿಸಿ ಪ್ರಾರ್ಥನೆ ಸಲ್ಲಿಸಲಾಯಿತು. ನಂತರ ಮಧ್ಯಾಹ್ನ ತಿಲಕ್‌ನಗರದ ಅಂಧ ಮತ್ತು ಕಿವುಡರ ಶಾಲಾ ಮಕ್ಕಳಿಗೆ ಭೋಜನದ ವ್ಯವಸ್ಥೆ ಕೂಡ ಮಾಡಲಾಗಿತ್ತು.

ನಗರಪಾಲಿಕೆ ಮಾಜಿ ಸದಸ್ಯರಾದ ರಾಜಲಕ್ಷ್ಮಿ, ಎಂ.ಶಿವಣ್ಣ, ಗರಡಿಕೇರಿಯ ಗೆಳೆಯರ ಬಳಗ, ಸಿದ್ಧಿ ವಿನಾಯಕ ಯುವಕರ ಸೇವಾ ಸಂಘ, ಪಂಚಮುಖಿ ಗಣಪತಿ ಯುವಕರ ಸಂಘ ಹಾಗೂ ಸಿಂಹಾದ್ರಿ ಗ್ರೂಪ್ಸ್ ಸೇರಿದಂತೆ ಹಲವು ಸಂಘಟನೆಗಳ ಪದಾಧಿಕಾರಿಗಳು ಸಿದ್ದರಾಮಯ್ಯ ಹೆಸರಿನಲ್ಲಿ ಸೇವಾ ಕಾರ್ಯಕ್ರಮ ನೆರವೇರಿಸಿದರು. ಎನ್‌ಎಸ್‌ಯುಐ ಮೈಸೂರು ನಗರಾಧ್ಯಕ್ಷ ಮನೋಜ್ ನೇತೃತ್ವದಲ್ಲಿ ಅಗ್ರಹಾರದ ಶ್ರೀ 101 ಗಣಪತಿ ದೇವಾಲಯದಲ್ಲಿ 75 ಈಡುಗಾಯಿ ಒಡೆದು, ಸಿಹಿ ವಿತರಿಸಲಾಯಿತು. ಆಕಾಶ್, ನಿತಿನ್, ಮಧು, ರವಿ, ಮಂಜುನಾಥ್, ಆಕಾಶ್ ಚೌಹಾಣ್, ವಿನಯ್, ಕಿರಣ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮಾನವ ಬಂಧುತ್ವ ವೇದಿಕೆ ವತಿಯಿಂದ ಕೆ.ಆರ್. ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಸಿದ್ದರಾಮಯ್ಯರ ಜನ್ಮದಿನ ಆಚರಿಸಲಾಯಿತು. ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ರಾತ್ರಿಯೇ ವಾಹನಗಳಲ್ಲಿ ಸಿದ್ದರಾಮಯ್ಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದಾವಣಗೆರೆಗೆ ಸಾವಿರಾರು ಸಂಖ್ಯೆಯಲ್ಲಿ ತೆರಳಿದ್ದರು.

ಹೆಬ್ಬಾಳಲ್ಲಿ ಚರಂಡಿ, ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಮೈಸೂರು, ಆ. 3(ಆರ್‌ಕೆ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಬ್ಬಾಳಿನಲ್ಲಿ ಕೈಗೊಂಡಿರುವ 3.5 ಕೋಟಿ ರೂ.ಗಳ ಮಳೆ ನೀರು ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಬುಧವಾರ ಗುದ್ದಲಿ ಪೂಜೆ ನೆರವೇರಿಸಿದರು.



ಶಾಸಕರ ವಿವೇಚನಾ ಅನುದಾನ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 8ನೇ ಪ್ಯಾಕೇಜಿನ ಅನುದಾನದಡಿ ಹೆಬ್ಬಾಳಿನ 1ನೇ ವಾರ್ಡಿನ ಸಿಐಟಿಬಿ ಕಲ್ಯಾಣ ಮಂಟಪದ ಬಳಿಯ ಮೈದಾನಕ್ಕೆ ಫೆನ್ಸಿಂಗ್ ಹಾಕುವುದು, ವಾರ್ಡಿನ ರಸ್ತೆಗಳ ಅಭಿವೃದ್ಧಿ ಹಾಗೂ 3ನೇ ವಾರ್ಡಿನ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡಿದರು.

ಮಹದೇಶ್ವರ ಬಡಾವಣೆ ಮಧ್ಯ ಭಾಗದಲ್ಲಿರುವ ಮಳೆ ನೀರು ಚರಂಡಿ ಹಾಗೂ ರಸ್ತೆ ಅಭಿವೃದ್ಧಿಗೆ 3.5 ಕೋಟಿ ರೂ. ಅನುದಾನ ಖರ್ಚು ಮಾಡುತ್ತಿದ್ದು, ನಿಗದಿತ ಅವಧಿಯೊಳಗೆ ಗುಣಮಟ್ಟದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ ಸೂಚಿಸಿದ್ದೇನೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು. ಪಾಲಿಕೆ ಸದಸ್ಯರಾದ ಕೆ.ವಿ. ಶ್ರೀಧರ್, ಚಿಕ್ಕವೆಂಕಟು, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪುನೀತ್, ಮುಖಂಡರಾದ ಕುಮಾರ್‌ಗೌಡ, ತನುಜಾ ಮಹೇಶ್, ಪದ್ಮಶ್ರೀ, ಶ್ರೀನಾಥ್, ಜಯಣ್ಣ, ನಾಗರಾಜು, ಶಿವಸ್ವಾಮಿ, ಮಲ್ಲಿಕಾರ್ಜುನ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ನಾಳೆ ವರ ಮಹಾಲಕ್ಷ್ಮಿ ವಿಶೇಷ ಪೂಜೆ

ಮೈಸೂರು, ಆ.3– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ವರ ಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಆ.5 ರಂದು ಶುಕ್ರವಾರ ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮಿಗೆ ವಿಶೇಷ ಪೂಜೆ ಅಭಿಷೇಕ, ಅಲಂಕಾರ ಏರ್ಪಡಿಸಲಾಗಿದೆ. ಸಂಕಲ್ಪ ಬೆಳಗ್ಗೆ 8.30ರಿಂದ, ಪೂಜೆ ಬೆಳಗ್ಗೆ 10ಕ್ಕೆ ಪ್ರಾರಂಭ. ಶ್ರೀಚಕ್ರ ನವಾವರಣ ಪೂಜೆಯೂ ಇರುತ್ತದೆ. ಹೆಚ್ಚಿನ ವಿವರಗಳಿಗೆ ಮೈಕುಮಾರ್ ಜಾತಕ ವಿಮರ್ಶಕರನ್ನು ಮೊ.9845183392, 9980833903 ಮೂಲಕ ಸಂಪರ್ಕಿಸಿ.

ಮಂಡ್ಯದಲ್ಲಿ ಇನ್‌ಲ್ಯಾಂಡ್ ಕಂಟೇನರ್ ಡಿಪೋ ಸ್ಥಾಪನೆಗೆ ಪ್ರತಾಪ್ ಸಿಂಹ ಮನವಿ



ಮೈಸೂರು,ಆ.3(ಆರ್‌ಕೆ)–ಮಂಡ್ಯ ನಗರದಲ್ಲಿ ಹಾದು ಹೋಗಿರುವ ಎಕ್ಸ್‌ಪ್ರೆಸ್ ಹೆದ್ದಾರಿ ಬಳಿ ಇನ್‌ಲ್ಯಾಂಡ್ ಕಂಟೇನರ್ ಡಿಪೋ (ICD) ಸ್ಥಾಪಿಸಬೇಕೆಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ನವದೆಹಲಿಯಲ್ಲಿ ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ (CCI) ಅಧ್ಯಕ್ಷ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ವಿ.ಕಲ್ಯಾಣ ರಾಮ ಅವರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು–ಬೆಂಗಳೂರು ನಡುವೆ 10 ಪಥದ ಎಕ್ಸ್‌ಪ್ರೆಸ್ ಕಾರಿಡಾರ್ ನಿರ್ಮಾಣವಾಗುತ್ತಿದ್ದು, ಹಾಗೆಯೇ ವಾಹನ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆಯಲ್ಲದೆ, ಈ ಎರಡೂ ನಗರಗಳ ನಡುವೆ ರೈಲ್ವೇ ಮಾರ್ಗದಲ್ಲಿ ಹೆಚ್ಚು ರೈಲುಗಳು, ಸರಕು ಸಾಗಣೆ ಗೂಡ್ಸ್ ರೈಲುಗಳೂ ಸಂಚರಿಸುತ್ತಿರುವುದರಿಂದ ಮಂಡ್ಯ ಬಳಿ ಇನ್‌ಲ್ಯಾಂಡ್ ಕಂಟೇನರ್ ಡಿಪೋ ಸ್ಥಾಪಿಸಿದ್ದಲ್ಲಿ ಲಾಜಿಸ್ಟಿಕ್ ಸೌಲಭ್ಯವನ್ನು ಸದೃಢಪಡಿಸಬಹುದಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಮನವಿಯಲ್ಲಿ ತಿಳಿಸಿದ್ದಾರೆ. ಮೈಸೂರು ಮಾಹಿತಿ ತಂತ್ರಜ್ಞಾನದ ಹಬ್ ಆಗಿದ್ದು, ಮೆಗಾ ಟೆಕ್ಸ್‌ಟೈಲ್ ಪಾರ್ಕ್, ಸಿಲ್ಕ್ ಕ್ಲಸ್ಟರ್, ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಯಾಗುತ್ತಿರುವುದರಿಂದ ಭವಿಷ್ಯದಲ್ಲಿ ಮೈಸೂರು ಸಮಗ್ರವಾಗಿ ಅಭಿವೃದ್ಧಿಯಾಗಲಿದೆ. ಆದ್ದರಿಂದ ಮಂಡ್ಯದಲ್ಲಿ ಇನ್‌ಲ್ಯಾಂಡ್ ಡಿಪೋ ಸ್ಥಾಪಿಸಿದ್ದಲ್ಲಿ ಎಮ್ಟಿ ಕಂಟೇನರ್ ಸಮಸ್ಯೆ ಪರಿಹರಿಸಬಹುದಾಗಿದೆ ಎಂದು ಪ್ರತಾಪ್ ಸಿಂಹ ವಿವರಿಸಿದ ಹಿನ್ನೆಲೆಯಲ್ಲಿ ಇದರ ಬಗ್ಗೆ ಕಲ್ಯಾಣ ರಾಮ ಸಕಾರಾತ್ಮಕವಾಗಿ ಸ್ಪಂದಿಸಿದರು ಎನ್ನಲಾಗಿದೆ.

ಸಹಾಯಕ ಕುಲಸಚಿವರ ಮೇಲಿನ ಹಲ್ಲೆ ಖಂಡಿಸಿ ಮುಕ್ತ ವಿವಿ ಸಿಬ್ಬಂದಿ ಪ್ರತಿಭಟನೆ



ಮೈಸೂರು,ಆ.3(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಕುಲಸಚಿವ ಪ್ರದೀಪ್ ಗಿರಿ ಅವರ ಮೇಲಿನ ಹಲ್ಲೆ ಖಂಡಿಸಿ ಬುಧವಾರ ಮುಕ್ತ ವಿವಿ ಸಿಬ್ಬಂದಿ ಪ್ರತಿಭಟನೆ ನಡೆಸಿದರು. 'ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯವನ್ನು ಉಳಿಸಿ' ಘೋಷಣೆಯೊಂದಿಗೆ ಮುಕ್ತ ವಿವಿ ಕಚೇರಿ ಮುಂದೆ ದಿಢೀರ್ ಪ್ರತಿಭಟನೆ ನಡೆಸಿದ ಸಿಬ್ಬಂದಿಗಳು, ಸಹಾಯಕ ಕುಲಸಚಿವರ ಮೇಲಿನ ಹಲ್ಲೆಯನ್ನು ಖಂಡಿಸಿದರು. ಹಲ್ಲೆ ಆರೋಪ ಎದುರಿಸುತ್ತಿರುವ ಮುಕ್ತ ವಿವಿ ಕುಲಪತಿ ಪ್ರೊ.ವಿದ್ಯಾಶಂಕರ್ ಹಾಗೂ ಇನ್ನಿತರರ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ತಡವಾಗಿ ಬಂದ ಕಾರಣ ಮುಂದಿಟ್ಟುಕೊಂಡು ಸಹಾಯಕ ಕುಲಸಚಿವ ಪ್ರದೀಪ್ ಗಿರಿ ಅವರನ್ನು ಪರೀಕ್ಷಾ ವಿಭಾಗದ ಕಾನ್ಫರೆನ್ಸ್ ರೂಂಗೆ ಕರೆದು, ಬಾಗಿಲು ಹಾಕಿ ಹಲ್ಲೆ ನಡೆಸಿರುವುದು ಖಂಡನೀಯ. ಅನ್ಯಾಯ ಹಾಗೂ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ್ದಕ್ಕೆ ಈ ರೀತಿ ಹಲ್ಲೆ ನಡೆಸಲಾಗಿದೆ. ಇಂತಹ ಘಟನೆಗಳಿಂದ ವಿವಿಯ ಶೈಕ್ಷಣಿಕ ವಾತಾವರಣ ಹಾಳಾಗುತ್ತಿದ್ದು, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಿಬ್ಬಂದಿ ಒತ್ತಾಯಿಸಿದರು.

ಬಾಕಿ ಗೌರವಧನ ಬಿಡುಗಡೆಗೆ ಆಗ್ರಹಿಸಿ ಬಿಸಿಯೂಟ ತಯಾರಕರ ಪ್ರತಿಭಟನೆ



ಮೈಸೂರು, ಆ.3(ಎಂಟಿವೈ)– ಬಾಕಿಯಿರುವ ಗೌರವ ಧನ ಬಿಡುಗಡೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಿಸಿಯೂಟ ತಯಾರಕರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಬುಧವಾರ ಪ್ರತಿಭಟನೆ ನಡೆಸಿ, ಸರ್ಕಾರ ಬಿಸಿಯೂಟ ತಯಾರಕರ ನಿರ್ಲಕ್ಷಿಸುತ್ತಿದೆ. ಇದರಿಂದ ಬಿಸಿಯೂಟ ನೌಕರರು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಕೂಡಲೇ ಸರ್ಕಾರ ತಮ್ಮ ಬೇಡಿಕೆ ಈಡೇರಿಸಿ ನೌಕರರ ಹಿತ ಕಾಯಬೇಕೆಂದು ಮನವಿ ಮಾಡಿದರು.

ಅಕ್ಷರ ದಾಸೋಹ ನೌಕರರಿಗೆ ಅತೀ ಕಡಿಮೆ ಗೌರವ ಧನ ನೀಡಲಾಗುತ್ತಿದೆ. ಅದೂ ಸರಿಯಾದ ಸಮಯಕ್ಕೆ ಪಾವತಿಯಾಗುತ್ತಿಲ್ಲ. ಏಪ್ರಿಲ್ ತಿಂಗಳಲ್ಲಿ 10 ದಿನ, ಮೇ ತಿಂಗಳಲ್ಲಿ 15 ದಿನಗಳು ಹಾಗೂ ಜೂನ್ ಮತ್ತು ಜುಲೈ ತಿಂಗಳ ಗೌರವಧನ ಇನ್ನೂ ಬಿಡುಗಡೆಯಾಗಿಲ್ಲ. ಮೂರ್‍ನಾಲ್ಕು ತಿಂಗಳಿಂದ ಸರಿಯಾಗಿ ಗೌರವಧನ ದೊರೆಯದೆ ಅಕ್ಷರ ದಾಸೋಹ ನೌಕರರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಪ್ರತಿ ತಿಂಗಳು ನಿಗದಿತ ಸಮಯಕ್ಕೆ ಗೌರವ ಧನ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಅಕ್ಷರ ದಾಸೋಹ ನೌಕರರು ಒತ್ತಾಯಿಸಿದರು.

ಸರ್ಕಾರದಿಂದ ಅನುದಾನ ಬಿಡುಗಡೆಯಾಗಿಲ್ಲ ಎಂದು ಅಧಿಕಾರಿಗಳು ಸಬೂಬು ಹೇಳುತ್ತಾರೆ. ತಾಂತ್ರಿಕ ದೋಷದ ನೆಪ ಹೇಳುತ್ತಾರೆ. ಕಳೆದ ಬಜೆಟ್‌ನಲ್ಲಿ ಒಂದು ಸಾವಿರ ಗೌರವಧನ ಹೆಚ್ಚಳ ಮಾಡಿರುವುದಾಗಿ ಘೋಷಿಸಲಾಗಿದೆ. ಆದರೆ ಇನ್ನು ಅನುಷ್ಠಾನಗೊಂಡಿಲ್ಲ. ಕೂಡಲೇ ಸರ್ಕಾರ ಬಿಸಿಯೂಟ ನೌಕರರ ಹಿತ ಕಾಯಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳಾದ ಎಸ್.ಹೆಚ್. ಹರೀಶ್, ಎಂ. ಉಮಾದೇವಿ, ಗೀತಾ, ಸೌಮ್ಯ, ಮಂಜುಳಾ, ಮಹದೇವಮ್ಮ, ಸುಂದರಮ್ಮ ಹಾಗೂ ಇತರರು ಪಾಲ್ಗೊಂಡಿದ್ದರು.

ಪರಿಶಿಷ್ಟ ಪಂಗಡದ ಆಶ್ರಮ ಶಾಲೆಗಳಿಗೆ

'ಬಿರ್ಸಾ ಮುಂಡಾ ಆಶ್ರಮ ಶಾಲೆ' ಎಂದು ಮರುನಾಮಕರಣಕ್ಕೆ ಆಗ್ರಹ

ಮೈಸೂರು,ಆ.3(ಪಿಎಂ)– ಪರಿಶಿಷ್ಟ ಪಂಗಡದ ಆಶ್ರಮ ಶಾಲೆಗಳಿಗೆ ಸರ್ಕಾರ 'ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆ' ಎಂದು ನಾಮಕರಣ ಮಾಡಿದ್ದು, ಇದಕ್ಕೆ ಬದಲು ಬುಡಕಟ್ಟು ಸಮುದಾಯದ ನಾಯಕ ಬಿರ್ಸಾ ಮುಂಡಾ ಅವರ ಹೆಸರು ನಾಮಕರಣ ಮಾಡುವಂತೆ ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಗಿರಿಜನ ಸುರಕ್ಷಾ ವೇದಿಕೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಕಾರ್ಯದರ್ಶಿ ವಿಠ್ಠಲ್, ಮಹರ್ಷಿ ವಾಲ್ಮೀಕಿಯವರ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಆದರೆ ಆಶ್ರಮ ಶಾಲೆಗಳಿಗೆ ವಾಲ್ಮೀಕಿಯವರ ಹೆಸರಿಗಿಂತ ಬಿರ್ಸಾ ಮುಂಡಾ ಅವರ ಹೆಸರು ನಾಮಕರಣ ಮಾಡುವುದು ಸೂಕ್ತ ಎಂದರು.

ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ 53 ಜಾತಿಗಳಿದ್ದು, ಈ ಪೈಕಿ ಗಿರಿಜನ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ದೊರೆಯುತ್ತಿಲ್ಲ. ಸರ್ಕಾರದ ಸೌಲಭ್ಯಗಳು ಪರಿಶಿಷ್ಟ ಪಂಗಡದ ಪ್ರಬಲ ಸಮುದಾಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ದಕ್ಕುತ್ತಿವೆ. ಗಿರಿಜನ ಸಮುದಾಯಕ್ಕೆ ಯಾವುದೇ ಸೌಲಭ್ಯಗಳು ಸಮರ್ಪಕವಾಗಿ ದೊರೆಯದಾಗಿವೆ ಎಂದು ಹೇಳಿದರು.

ಗಿರಿಜನ ಸಮುದಾಯದ ಮುಖಂಡ ಕಾಳಪ್ಪ ಮಾತನಾಡಿ, 1972ರಲ್ಲಿ ನಮ್ಮ ಬುಡಕಟ್ಟು ಸಮುದಾಯವನ್ನು ಅರಣ್ಯದಿಂದ ಹೊರ ಹಾಕಲಾಯಿತು. ಆದರೆ ಈವರೆಗೂ ಅರಣ್ಯವಾಸಿಗಳಿಗೆ ಸಮರ್ಪಕವಾಗಿ ಪುನರ್‌ವಸತಿ ಕಲ್ಪಿಸಿಲ್ಲ. ಹೆಚ್‌ಡಿ ಕೋಟೆ ತಾಲೂಕಿನ ಮೂರ್ಕಲ್ ಮತ್ತು ಮೇಟಿಕುಪ್ಪೆ ಹಾಡಿಯ ರಸ್ತೆ ಬಹುತೇಕ ಹಾಳಾಗಿದ್ದು, ಶೀಘ್ರವೇ ಇದನ್ನು ದುರಸ್ತಿಪಡಿಸಲು ಸಂಬಂಧಿಸಿದವರು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಗ್ರಾಪಂ ಸದಸ್ಯೆ ರತ್ನಮ್ಮ, ಬುಡಕಟ್ಟು ಸಮುದಾಯದ ಮುಖಂಡರಾದ ಮಾರ, ಲಕ್ಷ್ಮೀ ಗೋಷ್ಠಿಯಲ್ಲಿದ್ದರು.

ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಮದ್ದೂರಮ್ಮನ ಕೆರೆ



ಮದ್ದೂರು–ಹನಕೆರೆ ರೈಲ್ವೆ ಸೇತುವೆ ಬಂದ್

ಮೈಸೂರು-ಬೆಂಗಳೂರು ನಡುವಿನ ರೈಲು ಸಂಚಾರದಲ್ಲಿ ವ್ಯತ್ಯಯ; ವಿಳಂಬ

ಮೈಸೂರು, ಆ.3(ಆರ್‌ಕೆ)– ಕಳೆದೆರಡು ದಿನಗಳಿಂದ ಮಂಡ್ಯ ಜಿಲ್ಲೆಯಾದ್ಯಂತ ಭಾರೀ ಮಳೆಯಾಗುತ್ತಿರುವ ಪರಿಣಾಮ ಜಿಲ್ಲೆಯ ಮದ್ದೂರು ತಾಲೂಕಿನ ಮದ್ದೂರು ಮತ್ತು ಹನಕೆರೆ ನಡುವಿನ 627ನೇ ಸಂಖ್ಯೆಯ ಸೇತುವೆ ಬಳಿ ಮದ್ದೂರಮ್ಮನ ಕೆರೆ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಮೈಸೂರು–ಬೆಂಗಳೂರು ನಡುವಿನ ರೈಲು ಸಂಚಾರದಲ್ಲಿ ವ್ಯತ್ಯಯವಾಗಿದೆ.

ರೈಲು ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಜೋಡಿ ಹಳಿ ಪೈಕಿ ಮದ್ದೂರು ಮತ್ತು ಹನಕೆರೆ ನಡುವೆ ಮಾತ್ರ ಒಂದೇ ಹಳಿಯಲ್ಲಿ ರೈಲುಗಳನ್ನು ಸಂಚರಿಸಬೇಕಾಗಿದ್ದರಿಂದಾಗಿ ಬುಧವಾರ ಮಧ್ಯಾಹ್ನದ ನಂತರ ಬೆಂಗಳೂರು–ಮೈಸೂರು ನಡುವೆ ರೈಲುಗಳು ತಡವಾಗಿ ನಿಲ್ದಾಣ ತಲುಪಿದವು.

ಆ ಭಾಗದಲ್ಲಿ ಒಂದೇ ಹಳಿ ಮೇಲೆ ಸಮಯ ನಿಗದಿಗೊಳಿಸಿ (Time Setting) ರೈಲುಗಳನ್ನು ಓಡಿಸಬೇಕಾಗಿರುವುದರಿಂದ ರೈಲು ಸಂಚಾರ ವಿಳಂಬವಾಗುತ್ತಿದ್ದು, ಬೆಂಗಳೂರು ರೈಲ್ವೇ ವಿಭಾಗದ ಇಂಜಿನಿಯರ್‌ಗಳು ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ನಿರ್ವಹಣೆ ಮಾಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಧ್ಯಾಹ್ನದ ನಂತರ 3 ಮೆಮು ಹಾಗೂ 1 ಪ್ಯಾಸೆಂಜರ್ ರೈಲು ಸಂಚಾರವನ್ನು ರದ್ದುಪಡಿಸಲಾಗಿದೆಯೇ ಹೊರತು, ಉಳಿದ ಎಲ್ಲಾ ರೈಲುಗಳು ಮೈಸೂರು–ಬೆಂಗಳೂರು ನಡುವೆ ಸಂಚರಿಸಿದವು. ಆದರೆ ನಿಲ್ದಾಣಕ್ಕೆ ತಡವಾಗಿ ತಲುಪಿದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪರಿಣಾಮ ಈ ಮಾರ್ಗ ಸಂಚರಿಸುವ ರೈಲು ಪ್ರಯಾಣಿಕರು ಮಾರ್ಗ ಮಧ್ಯೆ ಗಂಟೆಗಟ್ಟಲೆ ಲೈನ್ ಕ್ಲಿಯರೆನ್ಸ್‌ಗಾಗಿ ರೈಲುಗಳು ಕಾಯ್ದು ನಿಂತಿದ್ದರಿಂದ ತೊಂದರೆ ಅನುಭವಿಸುವಂತಾಯಿತು. ಎಲ್ಲಾ ರೈಲುಗಳು ಒಂದೂವರೆಯಿಂದ ಎರಡು ತಾಸು ತಡವಾಗಿ ನಿಲ್ದಾಣ ತಲುಪುತ್ತಿದ್ದವು.

ಮಳೆಯ ಆರ್ಭಟದಿಂದಾಗಿ ನದಿಗಳು ತುಂಬಿ ಹರಿಯುತ್ತಿರುವುದರಿಂದ ಬ್ರಿಡ್ಜ್‌ಗಳ ಬಳಿ ಸುರಕ್ಷತೆ ದೃಷ್ಟಿಯಿಂದ ಅಗತ್ಯ ಕ್ರಮ ವಹಿಸಬೇಕಾಗಿರುವ ಕಾರಣ ರೈಲು ಪ್ರಯಾಣದಲ್ಲಿ ವಿಳಂಬವಾಗುತ್ತಿದ್ದು, ಪ್ರಯಾಣಿಕರು ಸಹಕರಿಸುವಂತೆ ರೈಲ್ವೇ ಅಧಿಕಾರಿಗಳು ಮನವಿ ಮಾಡಿದ್ದಾರೆ.

ರಂಗನತಿಟ್ಟು ಪಕ್ಷಿಧಾಮ ಇನ್ನು ರಾಮ್‌ಸರ್ ವೆಟ್‌ಲ್ಯಾಂಡ್ ಸೈಟ್

●ಅಂತಾರಾಷ್ಟ್ರೀಯ ಮನ್ನಣೆ ಪಡೆದ ರಾಜ್ಯದ ಮೊದಲ ಪಕ್ಷಿಧಾಮ ●ದೇಶದ 64 ಪಕ್ಷಿಧಾಮಗಳಿಗೆ ವಿಶ್ವ ಮಾನ್ಯತೆ



ಎಂ.ಟಿ.ಯೋಗೇಶ್‌ಕುಮಾರ್

ಶ್ರೀರಂಗಪಟ್ಟಣ,ಆ.3– ಪಕ್ಷಿ ಪ್ರಿಯರ ನೆಚ್ಚಿನ ತಾಣ, ವಿದೇಶಿ ಪಕ್ಷಿಗಳ ಸುಂದರ, ಸುರಕ್ಷಿತ ಸ್ಥಳವೂ ಆಗಿರುವ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮ, ಅಂತಾರಾಷ್ಟ್ರೀಯ ಮನ್ನಣೆ ಗಳಿಸಿದ ಕರ್ನಾಟಕದ ಮೊಟ್ಟ ಮೊದಲ ಪಕ್ಷಿಧಾಮ ಕೀರ್ತಿಗೆ ಪಾತ್ರವಾಗಿದೆ. ಕಳೆದ ಆರೇಳು ವರ್ಷದ ಸತತ ಪ್ರಯತ್ನದಿಂದ ಕೊನೆಗೂ ರಂಗನತಿಟ್ಟು ಪಕ್ಷಿಧಾಮಕ್ಕೆ 'ರಾಮಸರ್ ವೆಟ್‌ಲ್ಯಾಂಡ್ ಸೈಟ್' ಮಾನ್ಯತೆ ದೊರೆತಿದೆ.

ಹಲವು ಬಗೆಯ ದೇಶ–ವಿದೇಶಿ ಪಕ್ಷಿಗಳ ಆಕರ್ಷಣೀಯ ಕೇಂದ್ರವೂ ಆಗಿರುವ ರಂಗನತಿಟ್ಟು ಪಕ್ಷಿಧಾಮ, ಮೈಸೂರು ವನ್ಯಜೀವಿ ವಿಭಾಗಕ್ಕೆ ಒಳಪಡಲಿದೆ. ಈ ಅಂತಾರಾಷ್ಟ್ರೀಯ ಮನ್ನಣೆಯಿಂದ ಪಕ್ಷಿ ಸಂಕುಲದ ಅಭಿವೃದ್ಧಿಗೆ ನೆರವಾಗಲಿದೆ. ಅದರೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಜನೆಗಳು ಜಾರಿಗೊಳ್ಳುವುದರೊಂದಿಗೆ ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿಗರು ಹಾಗೂ ಪಕ್ಷಿ ವೀಕ್ಷಕರನ್ನು ಸೆಳೆಯಲು ಸಹಕಾರಿಯಾಗಲಿದೆ. ಈ ಪಕ್ಷಿಧಾಮದಲ್ಲಿ ವಲಸೆ ಬರುವ ಪಕ್ಷಿಗಳ ಸಂತಾನ ಪ್ರಕ್ರಿಯೆಗೆ ಪೂರಕ ವಾತಾವರಣವಿದ್ದು, ವಿವಿಧ ಸೌಕರ್ಯಗಳ ಪಡೆದುಕೊಳ್ಳಲು ವೆಟ್‌ಲ್ಯಾಂಡ್ ವ್ಯಾಪ್ತಿಗೆ ರಂಗನತಿಟ್ಟು ಪಕ್ಷಿಧಾಮ ಸೇರಿಸುವ ಹಿರಿಯ ಅಧಿಕಾರಿಗಳ ಶ್ರಮಕ್ಕೆ ಫಲ ದೊರೆತಿದೆ.


ದೇಶದಲ್ಲಿ 64: ಈ ವರ್ಷ ಭಾರತದ 10 ಪಕ್ಷಿಧಾಮವನ್ನು ರಾಮ್‌ಸರ್ ವೆಟ್‌ಲ್ಯಾಂಡ್ ಸೈಟ್‌ಗೆ ಸೇರಿಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ರಂಗನತಿಟ್ಟು ಪಕ್ಷಿಧಾಮವೂ ಇದರಲ್ಲಿ ಸೇರಿದ್ದು, ಇನ್ನೆರಡು ದಿನದಲ್ಲಿ ಅಧಿಕೃತ ಆದೇಶ ಹೊರಬೀಳಲಿದೆ. ಬುಧವಾರ ಸಂಜೆ ದೆಹಲಿಯಲ್ಲಿನ ಮಿನಿಸ್ಟ್ರೀ ಆಫ್ ಫಾರೆಸ್ಟ್ರೀ ವತಿಯಿಂದ ಮೌಖಿಕ ಆದೇಶ ಬಂದಿದೆ. ಇನ್ನೆರಡು ದಿನದಲ್ಲಿ ಅಧಿಕೃತ ಆದೇಶ ಹೊರಬೀಳಲಿದೆ ಎಂದು ಡಿಸಿಎಫ್ ವಿ.ಕರಿಕಾಳನ್ ತಿಳಿಸಿದ್ದಾರೆ.

ಇವರ ಶ್ರಮವಿದೆ: ರಂಗನತಿಟ್ಟು ಪಕ್ಷಿಧಾಮಕ್ಕೆ ರಾಮ್‌ಸರ್ ವೆಟ್‌ಲ್ಯಾಂಡ್ ಸೈಟ್ ಮಾನ್ಯತೆ ದೊರಕಿಸಿಕೊಡಲು ಕಳೆದ ಆರು ವರ್ಷಗಳಿಂದ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್‌ಗಳಾದ ಕೆ.ಕಮಲಾಕರಿಕಾಳನ್, ವಿ.ಏಡುಕೊಂಡಲು, ಸಿದ್ರಾಮಪ್ಪ ಚಳ್ಕಾಪುರ, ಅಲೆಕ್ಸಾಂಡರ್, ಡಾ.ಕೆ.ಸಿ.ಪ್ರಶಾಂತ್‌ಕುಮಾರ್ ಹಾಗೂ ಹಾಲಿ ಡಿಸಿಎಫ್ ಡಾ.ವಿ.ಕರಿಕಾಳನ್ ಬಹಳ ಪರಿಶ್ರಮಪಟ್ಟಿದ್ದರು.

ಆಕರ್ಷಕ ಪಕ್ಷಿಧಾಮ: ಪಕ್ಷಿ ಸಂಕುಲಕ್ಕೆ ನೈಸರ್ಗಿಕ ಸಹಜ ಸೃಷ್ಟಿಯಾಗಿರುವ ರಂಗನತಿಟ್ಟು ಪಕ್ಷಿಧಾಮವನ್ನು 1940ರಲ್ಲೇ ಅಂದಿನ ಸರ್ಕಾರ ನೋಟಿಫಿಕೇಷನ್ ಮಾಡಿ ರಂಗನತಿಟ್ಟು ಪಕ್ಷಿಧಾಮ ಎಂದು ಘೋಷಿಸಿತ್ತು. ಈ ಪಕ್ಷಿಧಾಮ 67 ಹೆಕ್ಟೇರ್ ಪ್ರದೇಶದಲ್ಲಿದ್ದು, 16 ಎಕರೆ ಪ್ರದೇಶದಲ್ಲಿ ಪಾರ್ಕ್, ವುಡ್ ಲಾಟ್, ಮಾಹಿತಿ ಕೇಂದ್ರ, ವಾಕಿಂಗ್ ಪಾಥ್, ಪರ್ಗೋಲ ಸೇರಿದಂತೆ ಪ್ರವಾಸಿಗರಿಗೆ ಮೂಲಸೌಕರ್ಯ ಕಲ್ಪಿಸಲಾಗಿದೆ. ಆರ್‌ಎಫ್‌ಓ, ಡಿಆರ್‌ಎಫ್‌ಓ ಸೇರಿದಂತೆ 40 ಸಿಬ್ಬಂದಿಗಳಿದ್ದಾರೆ. ಪ್ರವಾಸಿಗರಿಗೆ ಸುಸಜ್ಜಿತ ಕ್ಯಾಂಟೀನ್, ಶೌಚಾಲಯ, ವಿಶ್ರಾಂತಿ ಧಾಮವೂ ಪಕ್ಷಿಧಾಮದಲ್ಲಿದ್ದು, ಪಕ್ಷಿಸಂಕುಲಕ್ಕೆ ಮಾತ್ರವಲ್ಲದೆ ಪ್ರವಾಸಿಗರ ಮನಮೋಹಕ ಸ್ಥಳವಾಗಿದೆ. ರಾಮ್‌ಸರ್ ವೆಟ್‌ಲ್ಯಾಂಡ್ ಸೈಟ್‌ಗೆ ಸೇರಿಸಲು ನೋಟಿಫೈ ಮಾಡಿರುವ 67 ಹೆಕ್ಟೇರ್ ಪ್ರದೇಶ ಸೇರಿದಂತೆ ಕಾವೇರಿ ನದಿ ಹರಿಯುವ ಸ್ಥಳ ಸೇರಿಸಿಕೊಂಡು 518 ಹೆಕ್ಟೇರ್ ಪ್ರದೇಶವನ್ನು ರಾಮ್‌ಸರ್ ವೆಟ್‌ಲ್ಯಾಂಡ್ ಸೈಟ್‌ನಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ರಂಗನತಿಟ್ಟು ಪಕ್ಷಿಧಾಮದ ಹಿರಿಮೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾರಾಜಿಸಲಿದೆ.

25 ದ್ವೀಪಗಳು, 65 ಜಾತಿಯ ಪಕ್ಷಿಗಳು, 200ಕ್ಕೂ ಹೆಚ್ಚು ಮೊಸಳೆ: ರಂಗನತಿಟ್ಟು ಪಕ್ಷಿಧಾಮದಲ್ಲಿ ಓಪನ್ ಬಿಲ್ ಐಲ್ಯಾಂಡ್, ಸ್ಟಾರ್ಕ್ ಬಿಲ್, ಫೆಲಿಕಾನ್, ಸ್ಪೂನ್ ಬಿಲ್, ಸ್ಟೋನ್ ಫ್ಲವರ್ ಐಲ್ಯಾಂಡ್, ಕಾರ್ಮೊರೆಂಟ್ ಐಲ್ಯಾಂಡ್, ಕಾಡುಣಸೆ, ರೈನ್ ಟ್ರೀ, ಮೊಸಳೆ ದ್ವೀಪ, ಲಿಟಲ್ ಮತ್ತು ಲಾರ್ಜ್ ಕಾರ್ಮೊರೆಂಟ್ ಐಲ್ಯಾಂಡ್, ಲಾರ್ಜ್ ಈಗ್ರೇಟ್, ಲಿಟಲ್ ಈಗ್ರೇಟ್ ಐಲ್ಯಾಂಡ್, ಪುಟ್ಟಯ್ಯನ ಕೊಪ್ಪಲು ಐಲ್ಯಾಂಡ್ ಸೇರಿದಂತೆ 25 ದ್ವೀಪಗಳಿವೆ. ಕಳೆದ ವರ್ಷ ಪಕ್ಷಿ ಗಣತಿ ವೇಳೆ 65 ಜಾತಿಯ ಸಾವಿರಾರು ಪಕ್ಷಿಗಳು ಕಂಡು ಬಂದಿತ್ತು. ಅಲ್ಲದೆ ದೈತ್ಯ ಗಾತ್ರದ ಮೊಸಳೆಯೂ ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಮೊಸಳೆಗೂ ರಂಗನತಿಟ್ಟು ಪಕ್ಷಿಧಾಮ ಆಶ್ರಯ ನೀಡಿದೆ.

21 ಬೋಟ್: ರಂಗನತಿಟ್ಟಿನಲ್ಲಿ ಪ್ರವಾಸಿಗರ ಬೋಟಿಂಗ್‌ಗಾಗಿ 21 ಬೋಟ್ ಇವೆ. ಎಲ್ಲರಿಗೂ ಕಡ್ಡಾಯ ಲೈಫ್ ಜಾಕೆಟ್ ಧರಿಸಿದ ನಂತರವೇ ಬೋಟಿಂಗ್‌ಗೆ ಅವಕಾಶ ನೀಡಲಾಗುತ್ತದೆ. 8 ಜನರ ಸಾಮರ್ಥ್ಯದ 2 ಮರದ ಬೋಟ್ ಇದ್ದು, ಫೋಟೋಗ್ರಫಿ ಮಾಡುವವರು ಹೆಚ್ಚಾಗಿ ಈ ಬೋಟ್‌ಗಳಲ್ಲಿ ಹೋಗುವುದಕ್ಕೆ ಇಚ್ಛಿಸುತ್ತಾರೆ. 12 ಜನರದ್ದು 6, 16 ಜನರದ್ದು 4 ಹಾಗೂ 8 ಜನರನ್ನು ಕರೆದೊಯ್ಯುವ 8 ಬೋಟ್‌ಗಳಿವೆ. ಈ ಎಲ್ಲಾ ಬೋಟ್‌ಗಳು ಹರಿಗೋಲು (ಉಟ್ಟು) ಬಳಸಿ ಚಾಲನೆ ಮಾಡಲಾಗುತ್ತದೆ. ಪಕ್ಷಿ ಸಂಕುಲಕ್ಕೆ ಧಕ್ಕೆಯಾಗಬಾರದೆಂಬ ದೃಷ್ಟಿಕೋನದಿಂದ ಮೋಟಾರ್ ಬೋಟ್ ಬಳಸಲು ಅರಣ್ಯ ಇಲಾಖೆ ಮುಂದಾಗಿಲ್ಲ.



ನಮ್ಮ ಪಕ್ಷಿಧಾಮಕ್ಕೆ ಈಗ ರಾಮ್‌ಸರ್ ವೆಟ್‌ಲ್ಯಾಂಡ್ ಸೈಟ್ ಮಾನ್ಯತೆ ದೊರೆಯುತ್ತಿರುವುದರಿಂದ ಇನ್ನು ಮುಂದೆ ಪಕ್ಷಿಗಳ ಸಂಕುಲದ ಸಂರಕ್ಷಣೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೈಗೊಳ್ಳುವ ತೀರ್ಮಾನ ರಂಗನತಿಟ್ಟು ಪಕ್ಷಿಧಾಮಕ್ಕೂ ಅನ್ವಯವಾಗಲಿದೆ. ಇದರಿಂದ ಪಕ್ಷಿ ಸಂರಕ್ಷಣೆಗೆ ಕೈಗೊಳ್ಳುವ ಕಾರ್ಯಕ್ರಮ ರೂಪಿಸಲು ಸಹಕಾರಿಯಾಗಲಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಈ ರ್‍ಯಾಂಕಿಂಗ್ ಸಹಕಾರಿಯಾಗಲಿದೆ. ಇದೊಂದು ಉತ್ತಮ ಬೆಳವಣಿಗೆ. ಅನುದಾನ ನೀಡುವ ಬಗ್ಗೆ ಯಾವುದೇ ಪ್ರಸ್ತಾಪವಾಗಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಅನುದಾನ ದೊರೆಯಲಿದೆ. 6 ವರ್ಷಗಳಿಂದ ಪ್ರಯತ್ನ ನಡೆಯುತ್ತಲೇ ಇತ್ತು. ಕಾಲಕಾಲಕ್ಕೆ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸುತ್ತಾ ಬರಲಾಗಿತ್ತು. ಹಾಗಾಗಿ ಕೊನೆಗೂ ಅಂತಾರಾಷ್ಟ್ರೀಯ ಮಾನ್ಯತೆ ದೊರೆತಿದೆ.

–ಡಿಸಿಎಫ್ ವಿ.ಕರಿಕಾಳನ್

ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಆಟೋಗಳಿಗೆ ಡಿಸ್ ಪ್ಲೇ ಕಾರ್ಡ್ ಕಡ್ಡಾಯ

ಮೈಸೂರು ನಗರದಲ್ಲಿ 11,229 ಕಾರ್ಡ್ ವಿತರಣೆ



ಮೈಸೂರು, ಆ.3(ಎಂಕೆ)– ಪ್ರಯಾಣಿಕರ ಸುರಕ್ಷತೆ, ಸುಗಮ–ಸಂಚಾರ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಆಟೋ ಚಾಲಕರಿಗೆ 'ಆಟೋ ಡಿಸ್ ಪ್ಲೇ ಕಾರ್ಡ್'(ಚಾಲಕನ ಸಂಪೂರ್ಣ ವಿವರವುಳ್ಳ ಕಾರ್ಡ್) ವಿತರಣೆ ಪ್ರಕ್ರಿಯೆ ಚುರುಕಾಗಿದ್ದು, ಮೈಸೂರು ನಗರದಲ್ಲಿ ಇದುವರೆಗೆ 11,229 ಮಂದಿ ಆಟೋ ಚಾಲಕರಿಗೆ ಕಾರ್ಡ್ ನೀಡಲಾಗಿದೆ.

ದೇವರಾಜ ಸಂಚಾರ ಪೊಲೀಸ್ ಠಾಣೆಯಲ್ಲಿ 496, ಕೆ.ಆರ್ ಸಂಚಾರ ಪೊಲೀಸ್ ಠಾಣೆಯಲ್ಲಿ 3155, ಎನ್.ಆರ್. ಸಂಚಾರ ಠಾಣೆಯಲ್ಲಿ 2713, ಸಿದ್ಧಾರ್ಥ ಸಂಚಾರ ಠಾಣೆಯಲ್ಲಿ 2830 ಹಾಗೂ ವಿವಿ ಪುರಂ ಸಂಚಾರ ಠಾಣೆಯಲ್ಲಿ 2035 ಮಂದಿ ಆಟೋ ಚಾಲಕರಿಗೆ ಡಿಸ್ ಪ್ಲೇ ಕಾರ್ಡ್ ನೀಡಲಾಗಿದೆ. ಪ್ರತಿನಿತ್ಯ 30–100 ಆಟೋ ಚಾಲಕರಿಗೆ ಡಿಸ್ ಪ್ಲೇ ಕಾರ್ಡ್ ನೀಡಲಾಗುತ್ತಿದೆ.

ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಆಟೋ ಡಿಸ್ ಪ್ಲೇ ಕಾರ್ಡ್ ಅತ್ಯಂತ ಮುಖ್ಯವಾಗಿದ್ದು, ಡಿಸ್ ಪ್ಲೇ ಕಾರ್ಡ್ ಪಡೆದಿರುವ ಆಟೋ ಚಾಲಕನ ಸಂಪೂರ್ಣ ಮಾಹಿತಿ ಪೊಲೀಸ್ ಠಾಣೆಯಲ್ಲಿ ದಾಖಲಾಗಲಿದೆ. ಆಟೋದಲ್ಲಿ ಪ್ರಯಾಣಿಕರ ವಸ್ತುಗಳ ಕಾಣೆಯಾದರೆ, ಅಪರಾಧ ಕೃತ್ಯಗಳಿಗೆ ಆಟೋರಿಕ್ಷಾಗಳನ್ನು ಬಳಸಿಕೊಂಡಲ್ಲಿ ಪತ್ತೆ ಹಚ್ಚುವುದಕ್ಕೆ ಈ ಡಿಸ್ ಪ್ಲೇ ಕಾರ್ಡ್ ಅನುಕೂಲಕಾರಿ.

ಮೈಸೂರಿನಲ್ಲಿ 25 ಸಾವಿರಕ್ಕೂ ಹೆಚ್ಚು: ಪ್ರವಾಸಿಗರ ನೆಚ್ಚಿನ ತಾಣವಾಗಿರುವ ಮೈಸೂರಿನಲ್ಲಿ ಆಟೋಗಳ ಸಂಚಾರ ಹೆಚ್ಚಾಗಿದ್ದು, 25 ಸಾವಿರಕ್ಕೂ ಹೆಚ್ಚು ಆಟೋಗಳಿವೆ. ಈಗಾಗಲೇ ಅರ್ಧದಷ್ಟು ಆಟೋ ಚಾಲಕರಿಗೆ ಹೊಸದಾಗಿ ಡಿಸ್ ಪ್ಲೇ ಕಾರ್ಡ್ ನೀಡಿದ್ದು, ಇನ್ನೂ ಅರ್ಧದಷ್ಟು ವಿತರಣೆಯಾಗಬೇಕಾಗಿದೆ. ಈ ನಿಟ್ಟಿನಲ್ಲಿ ನಗರದ ಎಲ್ಲಾ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕವಾಗಿ 'ಆಟೋ ಡಿಸ್ ಪ್ಲೇ ಕಾರ್ಡ್' ಕಾರ್ಯಾಚರಣೆ ನಡೆಸಲಾಗುತ್ತಿದೆ.

ವಾಹನ ತಪಾಸಣೆ ಜೊತೆ ಜೊತೆಗೆ ಡಿಸ್ ಪ್ಲೇ ಕಾರ್ಡ್ ಹೊಂದಿಲ್ಲದ ಆಟೋರಿಕ್ಷಾಗಳನ್ನು ಗಮನಿಸಿ, ಆಟೋ ಚಾಲಕರನ್ನು ಠಾಣೆಗೆ ಕರೆದೊಯ್ದು ಕಾರ್ಡ್ ವಿತರಣೆ ಮಾಡಲಾಗುತ್ತಿದೆ. ಸೂಕ್ತ ದಾಖಲೆಗಳನ್ನು ನೀಡಿದ ಕೆಲವೇ ನಿಮಿಷಗಳಲ್ಲಿ ಡಿಸ್ ಪ್ಲೇ ಕಾರ್ಡ್ ನೀಡಲಾಗುತ್ತಿದೆ.

ಸುರಕ್ಷತೆ: ಆಟೋ ಡಿಸ್ ಪ್ಲೇ ಕಾರ್ಡ್ ಇರುವ ಆಟೋಗಳನ್ನು ಪ್ರಯಾಣಿಕರು ಗಮನಿಸಿ ಹತ್ತುವುದರಿಂದ ಸುರಕ್ಷತೆ ಹೆಚ್ಚು. ಆಟೋ ಹತ್ತುವ ಮುನ್ನ ಡಿಸ್ ಪ್ಲೇ ಕಾರ್ಡ್ ಫೋಟೋ ತೆಗೆದುಕೊಳ್ಳುವುದು ಒಳ್ಳೆಯದು. ಪ್ರಯಾಣಿಕರ ಯಾವುದೇ ವಸ್ತು ಕಳ್ಳತನವಾದರೂ ಅಥವಾ ಆಟೋ ಚಾಲಕ ಅನುಚಿತವಾಗಿ ವರ್ತಿಸಿದಲ್ಲಿ ಪತ್ತೆ ಹಚ್ಚಿ ಕಠಿಣ ಕ್ರಮ ತೆಗೆದುಕೊಳ್ಳಲು ಸಹಕಾರಿಯಾಗುತ್ತದೆ. ಅಲ್ಲದೆ ಇತರೆ ಅಪರಾಧ ಪ್ರಕರಣಗಳ ಪತ್ತೆಗೂ ಡಿಸ್ ಪ್ಲೇ ಕಾರ್ಡ್ ಉಪಯುಕ್ತವಾಗಲಿದೆ. ರಸ್ತೆಯಲ್ಲಿ ಅಡ್ಡಹಾಕಿ ಆಟೋ ಹತ್ತುವುದಕ್ಕಿಂತ ಪ್ರೀಪೈಡ್ ಆಟೋಗಳನ್ನು ಬಳಸಿದರೆ ಹೆಚ್ಚು ಉತ್ತಮ ಎಂದು ಡಿಸಿಪಿ ಗೀತಾ ಪ್ರಸನ್ನ ತಿಳಿಸಿದರು.

ಆಟೋ ಬಳಸಿದ ಪ್ರಯಾಣಿಕರು ಮೊದಲು ತಮ್ಮ ಲಗೇಜ್‌ಗಳನ್ನು ಆಟೋದಿಂದ ಕೆಳಗಿಸಿಕೊಂಡ ನಂತರ ಚಾಲಕರಿಗೆ ಹಣ ನೀಡಬೇಕು. ಅದರಂತೆ ಟ್ಯಾಕ್ಸಿಗಳ ಬಳಕೆ ವೇಳೆಯೂ ಪ್ರಯಾಣಿಕರು ಎಚ್ಚರಿಕೆ ವಹಿಸಬೇಕು. ಡಿಸ್ ಪ್ಲೇ ಕಾರ್ಡ್‌ಗಳಿಂದ ಸಾರ್ವಜನಿಕರಿಗೆ ಅನುಕೂಲ ಹೆಚ್ಚು. ಇದರ ಸದ್ಬಳಕೆಯನ್ನು ಆಟೋ ಚಾಲಕರು ಹಾಗೂ ಪ್ರಯಾಣಿಕರು ಪಡೆದುಕೊಳ್ಳಬೇಕು ಎಂದರು.



ಅಕ್ಕ–ಪಕ್ಕದ ಹಳ್ಳಿಗಳು ಹಾಗೂ ನಗರಗಳಿಂದ ಬಂದು ದಿನಪೂರ್ತಿ ನಗರದಲ್ಲಿ ಬಾಡಿಗೆ ಹೊಡೆದು ನಂತರ ವಾಪಸ್ಸಾಗುವವರನ್ನು ಹೊರತುಪಡಿಸಿ ಮೈಸೂರಿನಲ್ಲಿಯೇ 25 ಸಾವಿರಕ್ಕೂ ಹೆಚ್ಚು ಆಟೋರಿಕ್ಷಾಗಳಿವೆ. ಆಟೋ ಡಿಸ್ ಪ್ಲೇ ಕಾರ್ಡ್ ಪಡೆಯುವುದು ಕಡ್ಡಾಯವಾಗಿದ್ದು, ಚಾಲನ ಪರವಾನಗಿ ಹಾಗೂ ಇನ್ಷೂರೆನ್ಸ್ ಇದ್ದರಷ್ಟೇ ಡಿಸ್ ಪ್ಲೇ ಕಾರ್ಡ್ ನೀಡಲಾಗುವುದು. ಇಲ್ಲದಿದ್ದರೆ ಸ್ಥಳದಲ್ಲಿಯೇ 2 ಸಾವಿರ ರೂ. ದಂಡ ವಿಧಿಸಲಾಗುವುದು.

–ಗೀತಾ ಪ್ರಸನ್ನ, ಡಿಸಿಪಿ, ಸಂಚಾರ ವಿಭಾಗ

ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮಕ್ಕೆ ಶಿಕ್ಷಣ ಇಲಾಖೆ ಸಾಥ್

ಮೈಸೂರು ಜಿಲ್ಲೆಯ 20 ಸಾವಿರ ಶಿಕ್ಷಕರು, 4.10 ಲಕ್ಷ ಮಕ್ಕಳು, 5 ಸಾವಿರಕ್ಕೂ ಎಸ್‌ಡಿಎಂಸಿ ಸದಸ್ಯರು 'ಹರ್ ಘರ್ ತಿರಂಗಾ' ಅಭಿಯಾನದಲ್ಲಿ ಭಾಗಿ



ಮೈಸೂರು, ಆ.3(ಎಸ್‌ಪಿಎನ್)–ದೇಶಕ್ಕೆ ಸ್ವಾತಂತ್ರ್ಯ ಬಂದು 75ನೇ ವರ್ಷ ತುಂಬಿದ ಹಿನ್ನೆಲೆಯಲ್ಲಿ 'ಅಮೃತ ಮಹೋತ್ಸವ' ಆಚರಣೆಗೆ 'ಹರ್ ಘರ್ ತಿರಂಗಾ' ಕಾರ್ಯಕ್ರಮಕ್ಕೆ ಮೈಸೂರು ಸಾರ್ವಜನಿಕ ಶಿಕ್ಷಣ ಇಲಾಖೆ ಕೂಡ ಸಾಥ್ ನೀಡುತ್ತಿದ್ದು, ಸುಮಾರು 20 ಸಾವಿರಕ್ಕೂ ಅಧಿಕ ಶಿಕ್ಷಕರು ಹಾಗೂ 4,10,815 ಮಕ್ಕಳು ಹಾಗೂ 5 ಸಾವಿರಕ್ಕೂ ಅಧಿಕ ಎಸ್‌ಡಿಎಂಸಿ ಸದಸ್ಯರು ತಮ್ಮ ತಮ್ಮ ಮನೆಯ ಮೇಲೆ ಆ.13ರಿಂದ 15ರವರೆಗೆ ರಾಷ್ಟ್ರಧ್ವಜ ಹಾರಿಸುವ ಮೂಲಕ ಸ್ವಾತಂತ್ರ್ಯ ಸಂಭ್ರಮಕ್ಕೆ ಮತ್ತಷ್ಟು ಮೆರಗು ನೀಡಲಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಯ 9 ಸಾವಿರ, ಅನುದಾನಿತ ಶಾಲೆಯ 1,500 ಹಾಗೂ ಅನುದಾನ ರಹಿತ ಶಾಲೆಯ 10 ಸಾವಿರಕ್ಕೂ ಹೆಚ್ಚು ಶಿಕ್ಷಕರು ಹಾಗೂ ಆಯಾಯ ಶಾಲೆಯ ಎಲ್ಲಾ ಎಸ್‌ಡಿಎಂಸಿ ಸದಸ್ಯರು ಅವರವರ ಮನೆಗಳಲ್ಲಿ 'ಹರ್ ಘರ್ ತಿರಂಗಾ' ಕಾರ್ಯಕ್ರಮದಡಿ ಆ.13ರಿಂದ 15ರವರೆಗೆ ರಾಷ್ಟ್ರಧ್ವಜ ಹಾರಿಸಲಿದ್ದಾರೆ.

ಆ.15ರಂದು ಎಂದಿನಂತೆ ಎಲ್ಲಾ ಶಾಲೆಗಳಲ್ಲಿ ಧ್ವಜಾರೋಹಣ ಹಾಗೂ ಮೆರವಣಿಗೆ ಕಾರ್ಯಕ್ರಮ ಜರುಗಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಹರ್ ಘರ್ ತಿರಂಗಾ ಕಾರ್ಯಕ್ರಮದ ನೋಡಲ್ ಅಧಿಕಾರಿ ಉದಯ್ ಕುಮಾರ್ ಅವರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪ್ಲಾಸ್ಟಿಕ್ ರಹಿತ ಧ್ವಜ: ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೂಚನೆಯಂತೆ ಹಾಗೂ 2021ರ ರಾಷ್ಟ್ರಧ್ವಜ ತಿದ್ದುಪಡಿ ಕಾಯ್ದೆ ಅನ್ವಯ ಪ್ಲಾಸ್ಟಿಕ್ ರಹಿತ ಬಟ್ಟೆಯಿಂದ ತಯಾರಿಸಿದ ವಿವಿಧ ಅಳತೆಯ ರಾಷ್ಟ್ರಧ್ವಜ ಹಾರಿಸಲು ಹಾಗೂ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಆ.1ರಿಂದ 10ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ.

ರಾಷ್ಟ್ರಧ್ವಜ ಹಾರಿಸಲು ಜಾಗೃತಿ: ಅಲ್ಲದೆ, ಮೈಸೂರು ಜಿಲ್ಲೆಯಲ್ಲಿ 1–10ನೇ ತರಗತಿಯ 4,10,815 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ 75ನೇ ಸ್ವಾತಂತ್ರ್ಯ ದಿನಾಚರಣೆಗೆ ಜೀವಕಳೆ ತರಲಿದ್ದಾರೆ. 1ರಿಂದ 3ನೇ ತರಗತಿಯ 1,15,783 ವಿದ್ಯಾರ್ಥಿಗಳಿಗೆ ರಾಷ್ಟ್ರಧ್ವಜ ಬಾವುಟ ಚಿತ್ರ ಬಿಡಿಸುವುದು. ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗುವುದು. 4ರಿಂದ5ನೇ ತರಗತಿಯ 82,756 ವಿದ್ಯಾರ್ಥಿಗಳಿಗೆ ಹಾಗೂ 6ರಿಂದ 10ನೇ ತರಗತಿಯ 2,12,276 ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಭಾವನೆ ಬಿಂಬಿಸುವ ಗೀತೆ, ಭಾಷಣ ಹಾಗೂ ಪ್ರಬಂಧ ಸ್ಪರ್ಧೆ ಆಯೋಜಿಸುವಂತೆ ಎಲ್ಲಾ ಮುಖ್ಯ ಶಿಕ್ಷಕರಿಗೂ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲೆಗೆ 1.15 ಲಕ್ಷ ರಾಷ್ಟ್ರಧ್ವಜ: ಅಲ್ಲದೆ, ಈಗಾಗಲೇ ಮೈಸೂರು ಜಿಲ್ಲೆಗೆ 1.15ಲಕ್ಷ ಧ್ವಜಗಳು ಸರಬರಾಜು ಆಗಿದ್ದು, 256 ಗ್ರಾಪಂಗಳಲ್ಲಿ ಹಾಗೂ ಮೈಸೂರು ನಗರ ಪಾಲಿಕೆ ಸೇರಿದಂತೆ ಒಟ್ಟು 14 ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಅಂಚೆ ಕಚೇರಿಗಳಲ್ಲೂ ರಾಷ್ಟ್ರಧ್ವಜ ಕಡಿಮೆ ದರದಲ್ಲಿ(ವಿವಿಧ ಅಳತೆಯ ರಾಷ್ಟ್ರಧ್ವಜಗಳು ಕನಿಷ್ಠ 25ರೂನಿಂದ 42 ರೂ.ಗಳಿಗೆ ಸಿಗುತ್ತವೆ) ಲಭ್ಯವಿದೆ ಎಂದು ತಿಳಿಸಿದರು.

3 ಭಾವಚಿತ್ರ ಅಪ್‌ಲೋಡ್: ಅಮೃತ ಮಹೋತ್ಸವ ಅಂಗವಾಗಿ ಶಾಲೆಗಳಲ್ಲಿ ನಡೆಸಿದ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ ಭಾವಚಿತ್ರ ಹಾಗೂ ಶಿಕ್ಷಕರು ತಮ್ಮ ತಮ್ಮ ಮನೆಗಳಲ್ಲಿ ಧ್ವಜ ಹಾರಿಸಿದ ಭಾವಚಿತ್ರ ಹಾಗೂ ಶಾಲಾ ಹಂತದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡ ಭಾವಚಿತ್ರಗಳನ್ನು ಒಂದು ಶಾಲೆಗೆ ಮೂರು ಫೋಟೋಗಳಂತೆ 'ಅಜಾದಿ ಕಾ ಅಮೃತ್' ವೆಬ್‌ಸೈಟ್‌ನಲ್ಲಿ ಆಯಾಯ ಶಾಲೆಯ ಮುಖ್ಯಶಿಕ್ಷಕರು ಅಪ್‌ಲೋಡ್ ಮಾಡಬೇಕು ಎಂದು ತಿಳಿಸಿದರು.

ಇದಕ್ಕಾಗಿ ಕ್ಲಸ್ಟರ್ ಹಾಗೂ ಬ್ಲಾಕ್ ಮಟ್ಟದಲ್ಲಿ ಶಾಲಾ ಮುಖ್ಯ ಶಿಕ್ಷಕರಿಗೆ ಕಾರ್ಯಕ್ರಮ ಮಾರ್ಗಸೂಚಿಗಳನ್ನು ತಿಳಿಸಲಾಗುವುದು ಹಾಗೂ ಎಸ್‌ಡಿಎಂಸಿ ಸದಸ್ಯರು ತಮ್ಮತಮ್ಮ ಮನೆಗಳಲ್ಲಿ ಧ್ವಜಗಳನ್ನು ಹಾರಿಸುವ ಸಮಯದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಶಿಕ್ಷಕರ ಮೂಲಕ ಜಾಗೃತಿ ಮೂಡಿಸಲಾಗುವುದು. ಒಟ್ಟಿನಲ್ಲಿ 75ನೇ ವರ್ಷದ ಅಮೃತ ಮಹೋತ್ಸವ ಯಶಸ್ವಿಗೊಳ್ಳಲು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಾಲಾ ಹಂತದ ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಸ್ವಾತಂತ್ರ್ಯ ದಿನಾಚರಣೆ ಮಹತ್ವ ತಿಳಿಸಲಾಗುತ್ತಿದೆ ಎಂದು ತಿಳಿಸಿದರು.

ಕೆ.ಆರ್.ಕ್ಷೇತ್ರದ ವ್ಯಾಪ್ತಿಯಲ್ಲಿ ವಿಶೇಷ ಆಚರಣೆ: ಕೆ.ಆರ್. ವಿಧಾನ ಸಭಾ ವ್ಯಾಪ್ತಿಯ ಶಾಲೆಗಳಲ್ಲಿ ಆ.10ರಿಂದ 31ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಇದು ಇಡೀ ಜಿಲ್ಲೆಗೆ ಮಾದರಿಯಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 75ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಗೆ ವಿಶೇಷ ಮೆರಗು ತರುವ ವಿವಿಧ ಕಾರ್ಯಕ್ರಮಗಳನ್ನು ಪ್ರತಿದಿನ ಆಯೋಜಿಸಲಾಗಿದೆ ಎಂದು ತಿಳಿಸಿದರು.

1–10ನೇ ತರಗತಿ ವಿದ್ಯಾರ್ಥಿಗಳ ತಾಲೂಕುವಾರು ವಿವರ

ಹೆಚ್.ಡಿ.ಕೋಟೆ	35,053
ತಿ.ನರಸೀಪುರ	35,278
ಪಿರಿಯಾಪಟ್ಟಣ	31,346
ನಂಜನಗೂಡು	72,376
ಹುಣಸೂರು	40,531
ಕೆ.ಆರ್.ನಗರ	28,162
ಮೈಸೂರು ಉತ್ತರ	72,376
ಮೈಸೂರು ದಕ್ಷಿಣ	45,009
ಮೈಸೂರು ತಾಲೂಕು	73,898
ಒಟ್ಟು	**4,10,815**

ಮೋಟಾರ್ ಲಿಫ್ಟಿಂಗ್ ವಾಹನಗಳ ಸರ್ವೆ ಮಾಡಿಸಿ ಪರವಾನಗಿ ನೀಡಲು ಆಗ್ರಹ

ಮೈಸೂರು, ಆ.3(ಎಂಕೆ)– ರೈತರ ಜಮೀನಿನ ಪಂಪ್‌ಸೆಟ್‌ಗಳಲ್ಲಿ ನೀರೆತ್ತುವ ಮೋಟಾರ್‌ಗಳನ್ನು ರಿಪೇರಿ ಮಾಡಿ, ಮತ್ತೆ ಅಳವಡಿಸಲು ಬಳಸುವ 'ಮೋಟಾರ್ ಲಿಫ್ಟಿಂಗ್ ವಾಹನ'ಗಳ ಸರ್ವೆ ಮಾಡಿಸಿ, ಪರವಾನಗಿ ನೀಡುವಂತೆ ಕರ್ನಾಟಕ ರಾಜ್ಯ ರೈತ ಮಿತ್ರ ಎಲೆಕ್ಟ್ರಿಕಲ್ ಮೋಟಾರ್ ರಿವೈಂಡಿಂಗ್ ಹಾಗೂ ಲಿಫ್ಟಿಂಗ್ ಕಾರ್ಮಿಕರ ಸಂಘದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಘಟಕದ ವತಿಯಿಂದ ಸಾರಿಗೆ ಸಚಿವ ಶ್ರೀರಾಮುಲು ಅವರಿಗೆ ಮನವಿ ಸಲ್ಲಿಸಲಾಯಿತು.



ಬೆಂಗಳೂರಿನಲ್ಲಿ ಸಚಿವರನ್ನು ಭೇಟಿ ಮಾಡಿದ ಸಂಘದ ಪದಾಧಿಕಾರಿಗಳು, ರಾಜ್ಯದಲ್ಲಿ ಮೋಟಾರ್ ಲಿಫ್ಟಿಂಗ್ ಹಾಗೂ ರಿವೈಂಡಿಂಗ್ ವೃತ್ತಿಯನ್ನೇ ನಂಬಿಕೊಂಡು ಲಕ್ಷಾಂತರ ಕಾರ್ಮಿಕರು ಹಾಗೂ ಅವರ ಕುಟುಂಬಸ್ಥರಿದ್ದಾರೆ. ಸುಮಾರು 30 ಸಾವಿರ ಮೋಟಾರ್ ಲಿಫ್ಟಿಂಗ್ ವಾಹನಗಳಿದ್ದು, ರೈತರ ಜಮೀನು ಹಾಗೂ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಕೆಟ್ಟ ಮೋಟಾರ್‌ಗಳನ್ನು ಸರಿಪಡಿಸಿ ಮತ್ತೆ ಅಳವಡಿಸಲು ಬಳಸಲಾಗುತ್ತಿದೆ. ಆದರೆ ಈ ವೇಳೆ ಸಾರಿಗೆ ಹಾಗೂ ಪೊಲೀಸ್ ಇಲಾಖೆಯಿಂದ ತೊಂದರೆ ಉಂಟಾಗುತ್ತಿದೆ. ಅಲ್ಲದೆ ಲಿಫ್ಟಿಂಗ್ ವಾಹನಗಳಿಂದ ಕಾರ್ಮಿಕರಿಗೆ ತೊಂದರೆ ಉಂಟಾದರೆ ಯಾವುದೇ ರೀತಿ ವಿಮಾ ಸೌಲಭ್ಯವಿಲ್ಲ. ಆದ್ದರಿಂದ ರಾಜ್ಯದಲ್ಲಿರುವ ಮೋಟಾರ್ ಲಿಫ್ಟಿಂಗ್ ವಾಹನಗಳ ಸರ್ವೆ ಮಾಡಿಸಿ, ಕೊಡಿಸುವಂತೆ ಮನವಿ ಮಾಡಿದರು. ಈ ವೇಳೆ ಮೈಸೂರು ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ, ಚಾ.ನಗರ ಜಿಲ್ಲಾಧ್ಯಕ್ಷ ನಾಗೇಶ್, ಪದಾಧಿಕಾರಿಗಳಾದ ರೆಹಮಾನ್ ಪಾಷ, ಕುಮಾರಸ್ವಾಮಿ, ರವೀಶ್, ಸೈಯದ್ ಅಲಿ, ನಾಗರಾಜ್ ಮತ್ತಿತರರಿದ್ದರು.



ಮೈಸೂರಿನ ಗಂಗೋತ್ರಿ ಲಯನ್ಸ್ ಸಂಸ್ಥೆ ವತಿಯಿಂದ ಏರ್ಪಡಿಸಲಾಗಿದ್ದ ವೈದ್ಯರ ದಿನಾಚರಣೆಯ ಪ್ರಯುಕ್ತ ಜಯನಗರದ ನೇಗಿಲಯೋಗಿ ಭವನದಲ್ಲಿ ಕೆಆರ್ ಆಸ್ಪತ್ರೆ ಅರಿವಳಿಕೆ ವಿಭಾಗದ ಮುಖ್ಯಸ್ಥೆ ಡಾ. ವಿಜಯಲಕ್ಷ್ಮಿ, ಅರ್ಬುದ ರೋಗ ತಜ್ಞ ವೈದ್ಯ ಡಾ.ನಿಶ್ಚಲ್ ರಾಜ್ ಮತ್ತು ಜೆಎಸ್‌ಎಸ್ ಆಸ್ಪತ್ರೆಯ ಐಸಿಯು ತಜ್ಞ ವೈದ್ಯೆ ಡಾ.ಸುಮಲತಾ ಅವರನ್ನು ಸನ್ಮಾನಿಸಲಾಯಿತು. ಗಂಗೋತ್ರಿ ಲಯನ್ಸ್ ಸಂಸ್ಥೆ ಮಹಿಳಾ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಚುಟುಕು ಕವಿಗೋಷ್ಠಿಗೆ ಚುಟುಕುಗಳ ಆಹ್ವಾನ

ಮೈಸೂರು, ಆ.3– 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಚುಟುಕು ಕವಿಗೋಷ್ಠಿಯನ್ನು ಆ.13ರಂದು ಬೆಳಗ್ಗೆ 10.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಚುಟುಕು ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವವರು 4 ಸಾಲಿನ 3 ಚುಟುಕುಗಳನ್ನು ಪೂರ್ಣ ವಿಳಾಸ ಮತ್ತು ಚುಟುಕು ಪರಿಚಯದೊಂದಿಗೆ ಆ.8ರೊಳಗೆ ಕಳುಹಿಸಲು ಕೋರಲಾಗಿದೆ. ಮಾಹಿತಿಗೆ ಮೊ. 94484 02092 ಸಂಪರ್ಕಿಸಬಹುದು.

ಶಿವಾರ್ಚಕ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರ

ಮೈಸೂರು,ಆ.3–ಕರ್ನಾಟಕ ರಾಜ್ಯ ಶಿವಾರ್ಚಕ ಟ್ರಸ್ಟ್ ವತಿಯಿಂದ ಈ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಜನಾಂಗದ ಪ್ರತಿಭಾನ್ವಿತ ಮಕ್ಕಳಿಗೆ ಆ.20ರಂದು ಬೆಳಗ್ಗೆ 11 ಗಂಟೆಗೆ ಕುವೆಂಪುನಗರದ ಸಂಘದ ಕಚೇರಿಯಲ್ಲಿ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿದೆ. ಆಸಕ್ತರು ಆ.15ರೊಳಗೆ ನಕಲು ಅಂಕಪಟ್ಟಿಯನ್ನು ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ. 9448576450, 9731357585 ಸಂಪರ್ಕಿಸಬಹುದು.

ಮೂರ್ನಾಲ್ಕು ತಿಂಗಳಲ್ಲಿ ಪೌರಕಾರ್ಮಿಕರ ಖಾಲಿ ಹುದ್ದೆ ಭರ್ತಿ

●ಮೈಸೂರು ಜಿಪಂ ಸಿಇಓ ಪೂರ್ಣಿಮಾ ಭರವಸೆ ●ಪೌರಕಾರ್ಮಿಕರ ಬಹುತೇಕ ಸಮಸ್ಯೆಗಳು ಈಗಾಗಲೇ ನಿವಾರಣೆ

ಮೈಸೂರು,ಆ.3(ಜಿಎ)–ಪೌರಕಾರ್ಮಿಕರ ಬಹುತೇಕ ಸಮಸ್ಯೆಗಳನ್ನು ಈಗಾಗಲೇ ಬಗೆಹರಿಸಲಾಗಿದೆ. 3 ಅಥವಾ 4 ತಿಂಗಳ ಅವಧಿಯೊಳಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ಜಿಲ್ಲಾ ಪಂಚಾಯಿತಿ ಸಿಇಓ ಪೂರ್ಣಿಮಾ ಭರವಸೆ ನೀಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ನಡೆದ ಪೌರಕಾರ್ಮಿಕರ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿರುವ ವಾಟರ್ ಮ್ಯಾನ್, ಪೌರಕಾರ್ಮಿಕರು ಸೇರಿದಂತೆ ಎಲ್ಲಾ ವರ್ಗದ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ತತಕ್ಷಣವೇ ಬಗೆಹರಿಸಿದ್ದೇವೆ. ಈ ಹಿಂದೆಯೇ ಈ ಸಭೆ ನಡೆಯಬೇಕಿತ್ತು. ಕಾರಣಾಂತರದಿಂದ ಸಾಧ್ಯವಾಗಿರಲಿಲ್ಲ. ಈ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಡಿ.ಆರ್.ರಾಜು ಮಾತನಾಡಿ, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ 700 ಮಂದಿಗೆ ಒಬ್ಬರು ಹಾಗೂ ಗ್ರಾಮಾಂತರ ಭಾಗದಲ್ಲಿ 5,000 ಜನರಿಗೆ ಒಬ್ಬರು ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮ ಪಂಚಾಯಿತಿಗಳಲ್ಲಿ ಒಬ್ಬರು ನಾಲ್ಕೈದು ಗ್ರಾಮಗಳನ್ನು ಹೇಗೆ ನೋಡಿಕೊಳ್ಳಬೇಕು ಹಾಗೂ ವಿವಿಧ ಭಾಗಗಳಲ್ಲಿ ತಿಂಗಳಿಗೆ ಸರಿಯಾಗಿ ವೇತನ ನೀಡುತ್ತಿಲ್ಲ. ಈವರೆಗೂ 95 ಪೌರಕಾರ್ಮಿಕರ ಕೆಲಸ ಕಾಯಂ ಮಾಡಿದ್ದಾರೆ. ಉಳಿದ 228 ಮಂದಿ ಗುತ್ತಿಗೆ ಆಧಾರದಲ್ಲೇ ಕೆಲಸಕ್ಕೆ ನಿಯೋಜಿಸಲಾಗಿದೆ. ಎಲ್ಲ ಸಭೆಗಳಲ್ಲೂ ಈ ಕುರಿತು ಪ್ರಸ್ತಾಪಿಸಿದ್ದರೂ ಯಾವುದೇ ಕ್ರಮ ವಹಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೊರೊನಾ ಸಂದರ್ಭದಲ್ಲಿ ಎಷ್ಟೋ ಪೌರಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ. ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸವನ್ನು ಕೊಟ್ಟಿಲ್ಲ ಹಾಗೂ ಮೈಸೂರು ಜಿಲ್ಲೆಯ 256 ಗ್ರಾಮ ಪಂಚಾಯಿತಿಗಳಿಗೆ 323 ಪೌರಕಾರ್ಮಿಕರಿದ್ದಾರೆ. ದಿನವಿಡೀ ದುಡಿದರೂ ಕೆಲಸ ಮುಗಿಯುತ್ತಿಲ್ಲ. ಅವಧಿಗಿಂತಲೂ ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ಪಾಲಿಕೆ, ನಗರಸಭೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅನೇಕ ಸೌಲಭ್ಯ ದೊರೆಯುತ್ತಿಲ್ಲ. ಹಾಗೂ ವಿದ್ಯಾರ್ಹತೆ 10ನೇ ತರಗತಿ ಇರಬೇಕು ಎಂದು ಹೇಳಲಾಗಿದೆ ಅದನ್ನು 7ನೇ ತರಗತಿಗೆ ಇಳಿಸಬೇಕು ಎಂದು ಸಮಸ್ಯೆಗಳನ್ನು ಅಧಿಕಾರಿಗಳ ಮುಂದಿಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ, 1993ರ ಪಂಚಾಯತ್ ರಾಜ್ ಕಾಯ್ದೆಯಂತೆ ಜನಸಂಖ್ಯೆಗೆ ಅನುಗುಣವಾಗಿ ಇಷ್ಟೇ ಪೌರಕಾರ್ಮಿಕರಿರಬೇಕೆಂಬ ನಿಯಮವಿದೆ. ವಿದ್ಯಾರ್ಹತೆಯನ್ನು ಕೈಬಿಡುವಂತೆ ಈಗಾಗಲೇ ತಿಳಿಸಲಾಗಿದೆ. ಮತ್ತೊಮ್ಮೆ ನಿಯಮ ಬದಲಾವಣೆ ಪರಿಶೀಲಿಸುವಂತೆ ಕೋರಲಾಗುವುದು ಎಂದರು.

ಪೌರಕಾರ್ಮಿಕರ ಮಕ್ಕಳು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣವನ್ನು ಪಡೆಯಬೇಕು. ಪೌರಕಾರ್ಮಿಕರು ಕೆಲಸವನ್ನು ನಿರ್ವಹಿಸುವಾಗ ಅಗತ್ಯ ಸುರಕ್ಷಾ ಪರಿಕರಗಳನ್ನು ಬಳಸಬೇಕು. ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಏನೇ ಸಮಸ್ಯೆಯಾದರೂ ತಪಾಸಣೆಯನ್ನು ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು ಸಲಹೆ ನೀಡಿದರು.

ಸಭೆಯಲ್ಲಿ ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಪೌರಕಾರ್ಮಿಕ ಮಹಿಳೆಯೊಬ್ಬರು ಮಾತನಾಡಿ, ಬೆಳಗ್ಗೆ 5ಕ್ಕೆ ಕೆಲಸ ಆರಂಭಿಸಿದರೆ ಸಂಜೆ 5ರವರೆಗೂ ದುಡಿಯುತ್ತಿದ್ದೇವೆ. ಮಧ್ಯದಲ್ಲಿ ವಿಶ್ರಾಂತಿಯೂ ಸಿಗದಂತೆ ಪಂಚಾಯಿತಿ ಅಧಿಕಾರಿಗಳು ಕೆಲಸ ವಹಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು. ಪೌರಕಾರ್ಮಿಕರು 8 ಗಂಟೆಯಷ್ಟೇ ಕೆಲಸ ಮಾಡಬೇಕು. ಅವಧಿ ಮೀರಿ ಕೆಲಸ ಮಾಡಿದರೆ ಹೆಚ್ಚುವರಿ ಭತ್ಯೆ ನೀಡಬೇಕಾಗುತ್ತದೆ. ಪರಿಶೀಲನೆ ನಡೆಸಿ ಕ್ರಮ ವಹಿಸಲಾಗುವುದು ಎಂದು ನಂಜನಗೂಡು ತಾಪಂ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್ ತಿಳಿಸಿದರು.

ಸಭೆಯಲ್ಲಿ ಮುಖ್ಯ ಯೋಜನಾಧಿಕಾರಿ ಎಸ್. ಧನುಷ್, ಎಚ್.ಡಿ.ಕೋಟೆ ತಾಲೂಕು ಪಂಚಾಯಿತಿ ಇಓ ರಾಜೇಶ್, ಹುಣಸೂರು ಇಓ ಮನು, ಪಿರಿಯಾಪಟ್ಟಣ ಇಓ ಕೃಷ್ಣಕುಮಾರ್, ತಿ.ನರಸೀಪುರ ಇಓ ಕೃಷ್ಣ, ಸರಗೂರು ಇಓ ಸುಷ್ಮಾ ಇದ್ದರು.



ಪೌರಕಾರ್ಮಿಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಜಿಲ್ಲಾ ಪಂಚಾಯಿತಿ ಸಿಇಓ ಪೂರ್ಣಿಮಾ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಪೌರಕಾರ್ಮಿಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆ ಶಿಕ್ಷಕಿ ಹತ್ಯೆ ಪ್ರಕರಣ

ನಂ.ಗೂಡು ನಗರಸಭೆ ಸದಸ್ಯೆ ಸೇರಿ ನಾಲ್ವರ ಬಂಧನ?

ನಂಜನಗೂಡು, ಆ.3– ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಿಕ್ಷಕಿ ಹತ್ಯೆ ಪ್ರಕರಣವನ್ನು ಭೇದಿಸಿರುವ ನಂಜನಗೂಡು ಪೊಲೀಸರು, ನಗರ ಸಭಾ ಸದಸ್ಯೆ ಸೇರಿ ನಾಲ್ವರನ್ನು ಬಂಧಿಸಿದ್ದಾರೆ.



ಸುಲೋಚನಾ

ನಂಜನಗೂಡು ನಗರ ಸಭೆಯ ಮಹಿಳಾ ಸದಸ್ಯೆ ಸೇರಿದಂತೆ ಅವರ ಸಂಬಂಧಿಕರೇ ಆದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಹೇಳಲಾಗಿದೆ.

ತಾಲೂಕಿನ ಮಹದೇವ ನಗರದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹಿಂದಿ ಶಿಕ್ಷಕಿ ಸುಲೋಚನಾ (45) ಮಾ.9ರಂದು ಹತ್ಯೆಗೀಡಾಗಿದ್ದರು. ಈ ಪ್ರಕರಣದ ಪತ್ತೆಗಾಗಿ ನಂಜನಗೂಡು ಟೌನ್ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಈ ತಂಡವು ಕೊಲೆ ನಡೆದ 5 ತಿಂಗಳಲ್ಲಿ ಆರೋಪಿಗಳನ್ನು ಬಂಧಿಸಿದೆ.

ನಗರ ಸಭಾ ಸದಸ್ಯೆ, ಪತಿಯೊಂದಿಗೆ ಶಿಕ್ಷಕಿ ಸುಲೋಚನಾ ಅಕ್ರಮ ಸಂಬಂಧ ಹೊಂದಿದ್ದಾರೆ ಎಂಬ ಕಾರಣಕ್ಕಾಗಿ ನಗರ ಸಭಾ ಸದಸ್ಯೆ ತನ್ನ ಸಂಬಂಧಿಕರ ಸಹಕಾರದೊಂದಿಗೆ ಸುಲೋಚನಾ ಅವರನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ. ಶಿಕ್ಷಕಿ ಸುಲೋಚನಾ ತಾಲೂಕಿನ ದೇವರಸನಹಳ್ಳಿ ಗ್ರಾಮದ ಸುರೇಶ್ ಎಂಬಾತನನ್ನು ವಿವಾಹವಾಗಿದ್ದು, ಕಳೆದ ನಾಲ್ಕು ವರ್ಷದ ಹಿಂದೆ ಪತಿ ನಿಧನ ಹೊಂದಿದ್ದರು. ಶಿಕ್ಷಕಿಯು ನಂಜನಗೂಡಿನ ಮಹದೇಶ್ವರ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಮಾ.8ರಂದು ಶಾಲೆಯ ಅಡುಗೆ ಕೆಲಸ ಮಾಡುವ ಶಾರದಮ್ಮ ಅವರಿಗೆ ತನ್ನ ಮನೆಗೆ ಬರುವಂತೆಯೂ, ಇಬ್ಬರೂ ಒಟ್ಟಿಗೆ ಶಾಲೆಗೆ ಹೋಗೋಣವೆಂದು ತಿಳಿಸಿದ್ದರು. ಅದರಂತೆ ಮಾ.9ರಂದು ಶಾರದಮ್ಮ ತೆರಳಿದಾಗ ಸುಲೋಚನಾ ಅವರ ಮನೆ ಬಾಗಿಲು ತೆರೆದಿತ್ತು. ಚಾಪೆ ಮೇಲಿದ್ದ ಶಿಕ್ಷಕಿಯ ಮೃತದೇಹಕ್ಕೆ ಬೆಡ್‌ಶೀಟ್ ಹೊದಿಸಲಾಗಿದ್ದು, ಕತ್ತು ಮತ್ತು ಮುಖದ ಮೇಲೆ ಗಾಯದ ಗುರುತು ಇತ್ತು. ಈಕೆಯನ್ನು ಕತ್ತು ಹಿಸುಕಿ ಹತ್ಯೆ ಮಾಡಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ ಪೊಲೀಸರು ಹತ್ಯೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು.

ನಗರ ಸಭಾ ಸದಸ್ಯೆಯ ಪತಿ ರಾಜಕಾರಣದಲ್ಲಿ ಆಸಕ್ತಿ ಹೊಂದಿದ್ದ. ಕಳೆದ ನಗರ ಸಭೆ ಚುನಾವಣೆಯಲ್ಲಿ 5ನೇ ವಾರ್ಡ್‌ನಿಂದ ಪತ್ನಿಯನ್ನು ಕಣಕ್ಕಿಳಿಸಿದ್ದ. ಆತನ ಪತ್ನಿ ಜಯ ಗಳಿಸಿದ್ದರು. ಆತ ಶಿಕ್ಷಕಿ ಸುಲೋಚನಾ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಎಂದು ಹೇಳಲಾಗಿದ್ದು, ಈ ಕುರಿತು ಆತನ ಪತ್ನಿ ಹಲವಾರು ಬಾರಿ ಪತಿ ಹಾಗೂ ಸುಲೋಚನಾ ಜೊತೆ ಗಲಾಟೆ ಮಾಡಿದ್ದರು ಎನ್ನಲಾಗಿದ್ದು, ಇದರ ಜಾಡನ್ನು ಹಿಡಿದು ವಿಚಾರಣೆ ನಡೆಸಿದಾಗ ಕೊಲೆ ಪ್ರಕರಣ ಬಯಲಾಗಿದೆ ಎಂದು ಮೂಲಗಳು ತಿಳಿಸಿವೆ.



ಬನ್ನೂರಿನಲ್ಲಿ ಮಂಗಳವಾರ ರಾತ್ರಿ ಸುರಿದ ಭಾರೀ ಮಳೆಗೆ ಹೆಗ್ಗೆರೆ ಕೋಡಿ ಒಡೆದು ಅಡ್ಡಾಳ ತುಂಬಿ ಹೊಲ ಗದ್ದೆಯಲ್ಲಿ ಹರಿಯುತ್ತಿರುವ ನೀರು.

ಭಾರೀ ಮಳೆಗೆ ಮನೆ ಗೋಡೆ ಕುಸಿತ

ಸರಗೂರು, ಆ.3– ಭಾರೀ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ತಾಲೂಕಿನ ಹುಲ್ಲೇಮಾಳ ದಡದಹಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ಮಹೇಶ್ ಎಂಬುವರಿಗೆ ಸೇರಿದ ಮನೆ ಗೋಡೆ ಕುಸಿದಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ನಿನ್ನೆ ರಾತ್ರಿ ಎಡೆಬಿಡದೆ ಸುರಿದ ಮಳೆ ಸುರಿದ ಪರಿಣಾಮ ಗೋಡೆ ಕುಸಿದಿದೆ. ಇದರಿಂದ ದಿನಬಳಕೆಯ ವಸ್ತುಗಳು, ಹಲವು ದಾಖಲೆಗಳು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಅದೃಷ್ಟವಶಾತ್ ಮನೆ ಮಾಲೀಕ ಮಹೇಶ್, ಪತ್ನಿ ಯಮುನಾ ಹಾಗೂ ಇಬ್ಬರು ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೆಚ್.ಡಿ.ಕೋಟೆಯಲ್ಲಿ ಚಿರತೆಗಳ ಹಾವಳಿ

ನಾಯಿಗಳ ಬೇಟೆ, ಸಿಸಿ ಕ್ಯಾಮರಾದಲ್ಲಿ ಸೆರೆ, ನಿವಾಸಿಗಳಲ್ಲಿ ಆತಂಕ

ಹೆಚ್.ಡಿ.ಕೋಟೆ, ಆ.3– ಚಿರತೆಗಳು ಪಟ್ಟಣದ ಸ್ಟೇಡಿಯಂ ಬಡಾವಣೆಯಲ್ಲಿ ಕಾಣಿಸಿಕೊಂಡಿದ್ದು, ಸಾಕು ನಾಯಿಗಳನ್ನು ಹೊತ್ತೊಯ್ದಿರುವ ಘಟನೆ ನಡೆದಿದೆ.

ಪಟ್ಟಣದ ಸ್ಟೇಡಿಯಂ ಬಡಾವಣೆಯಲ್ಲಿ ಎರಡು ಚಿರತೆಗಳು ಮಧ್ಯರಾತ್ರಿ ದಾಸ ನಾಯಕ ಅವರ ಮನೆಯ ಸಾಕು ನಾಯಿಗಳನ್ನು ಹೊತ್ತೊಯ್ಯುತ್ತಿರುವ ದೃಶ್ಯ ಸಮೀಪದ ಸೋಲಾರ್ ರಾಘವೇಂದ್ರ ಅವರ ಮನೆಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಇದರಿಂದ ಬಡಾವಣೆಯ ಜನತೆ ಆತಂಕಗೊಂಡಿದ್ದಾರೆ. ಕಳೆದ ಒಂದು ತಿಂಗಳಿಂದ ಸುತ್ತಮುತ್ತಲಿನ ಜಮೀನಿನಲ್ಲಿ ವಾಸವಾಗಿರುವ ರೈತರ ಮನೆಗಳಲ್ಲಿ ಮೇಕೆಗಳನ್ನು ಚಿರತೆ ಬೇಟೆ ಆಡುತ್ತಿದೆ ಎನ್ನಲಾಗಿದೆ. ರೈತರಗಳು ಪ್ರತಿ ರಾತ್ರಿ ಪಟಾಕಿ ಸಿಡಿಸುತ್ತಿರುವ ಕಾರಣ. ರೈತರ ಜಮೀನು ಕಡೆ ಹೋಗದೆ ಬಡಾವಣೆಗಳತ್ತ ಮಧ್ಯರಾತ್ರಿ ವೇಳೆ ಮನೆಗಳಲ್ಲಿ ನಾಯಿಗಳನ್ನು ಬೇಟೆ ಆಡುತ್ತಿದೆ ಎಂದು



ಬಡಾವಣೆಯ ನಿವಾಸಿಗಳು ತಿಳಿಸಿದ್ದಾರೆ.

ಬಡಾವಣೆಯಲ್ಲಿ ಗಿಡ–ಗಂಟಿಗಳು ಭಾರೀ ಪ್ರಮಾಣದಲ್ಲಿ ಬೆಳೆದು ನಿಂತಿದ್ದು, ಚಿರತೆ ಗಳು, ಹಂದಿಗಳು ಹಾವಳಿ ಜಾಸ್ತಿಯಾಗಿವೆ. ಪುರಸಭಾ ಅಧಿಕಾರಿಗಳಿಗೆ ಹಾಗೂ ಈ ಭಾಗದ ಸದಸ್ಯರುಗಳಿಗೆ ಹಲವಾರು ಬಾರಿ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿ ಎಂದು ಹಲವಾರು ಬಾರಿ ಮನವಿ ಮಾಡಿಕೊಂಡರು ಪ್ರಯೋಜನವಾಗಿಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಚಿರತೆ



ಬಂದಿರುವ ಸ್ಥಳಕ್ಕೆ ಭೇಟಿ ನೀಡಿ ದ್ದೇನೆ ಸ್ಟೇಡಿಯಂ ಬಡಾವಣೆಯಲ್ಲಿ ಬೆಳೆದು ನಿಂತಿರುವ ಗಿಡ ಗಂಟೆಗಳನ್ನು ಸ್ವಚ್ಛತೆ ಮಾಡಿ ಕೊಡಲಾಗುವುದು ಎಂದು. ಪುರಸಭಾ ಮುಖ್ಯಾಧಿಕಾರಿ ಸುರೇಶ್ ತಿಳಿಸಿದ್ದಾರೆ.

ಚಿರತೆಯನ್ನು ಸೆರೆ ಹಿಡಿಯಲು ಸ್ಟೇಡಿಯಂ ಬಡಾವಣೆಯ. ದಾಸನಾಯಕ, ರಾಘವೇಂದ್ರ, ಎಂಬುವರ ಮನೆ ಬಳಿ ಬೋನನ್ನು ಇಡಲಾಗಿದ್ದು ಈ ಭಾಗದಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಅರಣ್ಯಾಧಿಕಾರಿ ಪ್ರಸನ್ನಕುಮಾರ್ ತಿಳಿಸಿದ್ದಾರೆ.


ದಸರಾ ಆನೆಗಳ ಮೂಲಕ ನರಭಕ್ಷಕ ಹುಲಿ ಸೆರೆಗೆ ಕಾರ್ಯಾಚರಣೆ

ಒಡೆಯನಪುರದಲ್ಲಿ ರೈತನನ್ನು ಬಲಿ ಪಡೆದಿದ್ದ ಹುಲಿ

ಮಲ್ಕುಂಡಿ, ಆ.3– ರೈತನೊಬ್ಬನನ್ನು ಬಲಿ ತೆಗೆದುಕೊಂಡ ಹುಲಿ ಸೆರೆಗೆ ದಸರಾ ಆನೆಗಳ ಮೂಲಕ ಕಾರ್ಯಾಚರಣೆ ಆರಂಭಿಸಲಾಗಿದೆ.

ನಂಜನಗೂಡು ತಾಲೂಕಿನ ಹಾದನೂರು ಒಡೆಯನಪುರ ಗ್ರಾಮದ ಪುಟ್ಟಸ್ವಾಮಿಗೌಡ ಎಂಬ ರೈತನನ್ನು ಬಲಿ ಪಡೆದ ಹಿನ್ನೆಲೆಯಲ್ಲಿ ಗ್ರಾಮದ ನಂಜದೇವರಬೆಟ್ಟ ಹಾಗೂ ಸುತ್ತಮುತ್ತಲಿನಲ್ಲಿ ಕಾರ್ಯಾಚರಣೆ ನಡೆಯುತ್ತಿದೆ. ಎಸಿಎಫ್ ಪರಮೇಶ್ ನೇತೃತ್ವದಲ್ಲಿ ಕೂಂಬಿಂಗ್ ಆಪರೇಷನ್ ಆರಂಭವಾಗಿದೆ. ಸುಮಾರು 20ಕ್ಕೂ ಹೆಚ್ಚು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ.

ದಸರಾದಲ್ಲಿ ಭಾಗವಹಿಸುವ ನಾಲ್ಕು ಆನೆಗಳನ್ನು ಹುಲಿ ಸೆರೆಗೆ ಬಳಸಲಾಗಿದೆ.



ಹುಲಿ ಹೆಜ್ಜೆ ಗುರುತುಗಳ ಜಾಡನ್ನು ಹಿಡಿದು ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೆಲವಡೆ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ದನಗಾಹಿ ಪುಟ್ಟಸ್ವಾಮಿಗೌಡರನ್ನು ಬಲಿ ಪಡೆದ ಜಮೀನಿನ ಬಳಿ ಬೋನ್ ಇರಿಸಲಾಗಿದೆ. ಗ್ರಾಮಸ್ಥರು ತಮ್ಮ ಜಮೀನಿಗೆ ಹೋಗಲು ಭಯಭೀತರಾಗಿದ್ದಾರೆ. ನರಭಕ್ಷಕ ಹುಲಿ ಸೆರೆ ಹಿಡಿಯುವ ತನಕ ಗ್ರಾಮಸ್ಥರು ಆತಂಕದಲ್ಲಿದ್ದಾರೆ

ಮೇಕೆ ಸಾಕಾಣಿಕೆ ತರಬೇತಿ

ನಂಜನಗೂಡು, ಆ.3– ತಾಲೂಕಿನ ತಾಂಡವಪುರ ಗ್ರಾಮದಲ್ಲಿ ಏಷ್ಯಾನ್ ಪೈಂಟ್ಸ್ ಹಾಗೂ ನ್ಯಾಷನಲ್ ಆಗ್ರೋ ಫೌಂಡೇಶನ್ ಸಂಸ್ಥೆ ವತಿಯಿಂದ ರೈತರಿಗೆ ಮೇಕೆ ಹಾಗೂ ಕುರಿ ಸಾಕಾಣಿಕೆ ಬಗ್ಗೆ ತರಬೇತಿ ನೀಡಲಾಯಿತು. ಪಶು ವೈದ್ಯಾಧಿಕಾರಿ ಜಗದೀಶ್ ಮಾತನಾಡಿ ರೈತರು ಮೇಕೆ ಹಾಗೂ ಕುರಿ ಸಾಕಾಣಿಕೆಯಿಂದ ರೈತರಿಗೆ ಅನುಕೂಲವಾಗುತ್ತದೆ. ಮೇಕೆ ಹಾಗೂ ಕುರಿಗಳಿಗೆ ಹಸಿರು ಮೇವು ನೀಡಿದಾಗ ಉತ್ತಮ ಆರೋಗ್ಯದಿಂದ ಇರಲು ಸಾಧ್ಯವಾಗುತ್ತದೆ. ಅವುಗಳಿಗೆ ಶೆಡ್ಡುಗಳನ್ನು ನಿರ್ಮಾಣ ಮಾಡಿ ಸಾಕಾಣಿಕೆ ಮಾಡಬೇಕು ಎಂದು ಸಲಹೆ ನೀಡಿದರು.

ಸರಗೂರಲ್ಲಿ ಶ್ರೀ ಲಲಿತಾ ಕಲಾ ಶಾಲೆ ಉದ್ಘಾಟನೆ



ಸರಗೂರು, ಆ.3– ಕಲೆಯನ್ನು ಉಳಿಸಿ ಬೆಳೆಸುವುದು ಮಾನವನ ಧರ್ಮ ಎಂದು ಬಿಡಗಲುವಿನ ಪಡುವಲು ವಿರಕ್ತ ಮಠದ ಮಹದೇವಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಪಟ್ಟಣದಲ್ಲಿ ನೂತನವಾಗಿ ಪ್ರಾರಂಭಗೊಂಡ ಶ್ರೀ ಲಲಿತಾ ಕಲಾ ಶಾಲೆ ಉದ್ಘಾಟಿಸಿ ಮಾತನಾಡಿದ ಅವರು, ಸಂಗೀತ, ನೃತ್ಯ, ಸಂಗೀತ ಸಾಧನಗಳು, ಯೋಗ, ಕಲಿಯುವಿಕೆಗೆ ಬೇಕಾದ ಆರ್ಥಿಕ ಅವಕಾಶ, ಸಮಯದ ಅವಕಾಶ, ಇದರ ಜೊತೆಗೆ ಕಲಾಶಕ್ತಿ ಇದ್ದರೆ ಗುರುಗಳ ಲಭ್ಯತೆಯು ಪೂರಕವಾಗಿರುತ್ತದೆ ಎಂದರು.

ಕಲೆಗಳು ಸಂಗೀತದ ಕೌಟುಂಬಿಕ ಹಿನ್ನೆಲೆ ಇಲ್ಲದವರಿಗೂ ಆಸಕ್ತಿ ಮೂಡಿಸುತ್ತದೆ. ಉತ್ಸಾಹಿ ಮಕ್ಕಳು ಮತ್ತು ಪೋಷಕರು ಲಲಿತಾ ಕಲಾ ಶಾಲೆ ಸಂಗೀತ ಅಭ್ಯಾಸವನ್ನು ಬಳಸಿಕೊಳ್ಳಿ. ಸಂಗೀತ ಕಲಾ ಕ್ಷೇತ್ರದಲ್ಲಿ ಮಹತ್ತರ ಸಾಧನೆಗೈದು ಸಾಂಪ್ರದಾಯಿಕ ಸಂಗೀತಕ್ಕೆ ಮೆರಗು ನೀಡಿದ್ದ ಪಂಡಿತ್ ಭೀಮ್‌ಸೇನ್ ಜೋಷಿ, ಪಂಡಿತ್ ಬಸವರಾಜ ರಾಜಗುರು, ದೊರೆಸ್ವಾಮಿ ಅಯ್ಯಂಗಾರ್, ಗಂಗೂ ಬಾಯಿ ಹಾನಗಲ್, ಕುಮಾರಗಂಧರ್ವ, ಚೌಡಯ್ಯ, ವೀಣೆ ಶೇಷಣ್ಣ ಅವರಂತಹ ದಿಗ್ಗಜರು ನೆಲಸಿದ್ದ ಕರುನಾಡು ನಮ್ಮದು. ಇಂತಹ ಮಹಾ ಪುರುಷರ ನಾಡಿನಲ್ಲಿ ಯುವ ಸಮೂಹ ರಾಕ್, ಪಾಪ್ ಹಾಗೂ ಮತ್ತಿತರ ಪಾಶ್ಚಿಮಾತ್ಯ ಸಂಗೀತದತ್ತ ಹೆಚ್ಚಿನ ಒಲವು ತೋರುತ್ತಿರುವ ಈ ದಿನಗಳಲ್ಲಿ ಶಾಸ್ತ್ರೀಯ ಸಂಗೀತ ವಚನ ಸಾಹಿತ್ಯ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರಗೂರು ಪಟ್ಟಣದ ಕಲಾ ತೇಜಸ್ವಿನಿ ಎಸ್.ವಿ.ಗೋಪಿನಾಥ್ ಅವರ ಮಕ್ಕಳಾದ ಶ್ರೀವತ್ಸ ಅವರು ಲಲಿತಾ ಕಲಾ ಶಾಲೆ ಎಲ್ಲರಿಗೂ ಮಾದರಿಯಾಗಲಿ ಎಂದರು.

ಪೂಜಾ ಕಾರ್ಯಕ್ರಮದಲ್ಲಿ ವಿಪ್ರ ಸಮಾಜದ ಅಧ್ಯಕ್ಷ ಶಾಂಬುಮೂರ್ತಿ, ಹರೀಶ್ ಪುರೋಹಿತ್, ವರ್ತಕರ ಸಂಘದ ಮಾಜಿ ಅಧ್ಯಕ್ಷ ಎಸ್. ನಾರಾಯಣ್, ಎನ್.ಎಸ್.ಪ್ರತಾಪ್, ಸೋಮಪ್ರಭ, ಪದ್ಮಣ್ಣ, ಹಿರಿಯ ಸಂಗೀತ ವಿದ್ವಾನ್ ದಾಸೇಗೌಡ್ರು, ಪಟ್ಟಣ ಪಂಚಾಯಿತಿ ಸದಸ್ಯ ನೂರಾಳಸ್ವಾಮಿ, ವೀರೇಶ್, ರಾಮು, ಜೆಡಿಎಸ್ ಮುಖಂಡ ಎಂ. ನಾಗರಾಜು ಹಾಗೂ ಮಹಿಳೆಯರು–ಮಕ್ಕಳು ಉಪಸ್ಥಿತರಿದ್ದರು.

ಅಬಕಾರಿ ಇಲಾಖೆಯಿಂದ ಮದ್ಯ, ಸೇಂದಿ ನಾಶ

ತಿ.ನರಸೀಪುರ, ಆ.3– ಪಟ್ಟಣದ ಅಬಕಾರಿ ಇಲಾಖೆಯು ವಿವಿಧ ಪ್ರಕರಣಗಳಲ್ಲಿ ಜಪ್ತಿಗೊಳಿಸಲಾದ ಮಾದಕ ದ್ರವ್ಯಗಳಾದ ಮದ್ಯ ಮತ್ತು ಸೇಂದಿಯನ್ನು ನಾಶಪಡಿಸಲಾಯಿತು.

ತಾಲೂಕಿನ ವಿವಿದೆಡೆ ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದ್ದ 79,020 ಲೀಟರ್ ಮದ್ಯ ಹಾಗೂ 29 ಲೀಟರ್ ಸೇಂದಿ ಯನ್ನು ಪಟ್ಟಣದ ಅಬಕಾರಿ ಇಲಾಖೆಯು ವಶಪಡಿಸಿ ಕೊಂಡಿತ್ತು. ಮೈಸೂರು ಜಿಲ್ಲೆಯ ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ರವರ ಆದೇಶದ ಮೇರೆಗೆ ನಾಶಪಡಿಸಲಾಯಿತೆಂದು ಅಬಕಾರಿ ನಿರೀಕ್ಷಕರಾದ ಎನ್.ರಾಜೇಶ್ ತಿಳಿಸಿದ್ದಾರೆ. ಈ ವೇಳೆ ನಂಜನಗೂಡು ಉಪ ವಿಭಾಗದ ಅಬಕಾರಿ ಉಪ ನಿರೀಕ್ಷಕ ಎಲ್.ಬಿ.ವಿಕ್ರಮ್, ಶಿರಸ್ತೇದಾರ್ ಪ್ರಭುರಾಜ್,



ಕರ್ನಾಟಕ ರಾಜ್ಯ ಪಾನೀಯ ನಿಗಮದ ವ್ಯವಸ್ಥಾಪಕ ಲೋಕೇಶ್, ಸಿಬ್ಬಂದಿಗಳಾದ ಹೆಚ್.ಜಿ.ಶ್ರೀನಿವಾಸ್, ಪರಶಿವಮೂರ್ತಿ, ಬಿ.ಇರ್ಫಾನ್ ಅಹಮದ್ ಮತ್ತಿತರರಿದ್ದರು.




ನಂಜನಗೂಡಿನ ಒಡೆಯನಪುರ ಗ್ರಾಮದಲ್ಲಿ ಹುಲಿ ದಾಳಿಗೆ ಬಲಿಯಾಗಿದ್ದ ರೈತ ಪುಟ್ಟಸ್ವಾಮಿಯವರ ನಿವಾಸಕ್ಕೆ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಭೇಟಿ ನೀಡಿ, ಕುಟುಂಬವರ್ಗಕ್ಕೆ ಸ್ವಾಂತನ ಹೇಳಿ, ಧನಸಹಾಯ ಮಾಡಿದರು. ಇದೇ ವೇಳೆ ಮುಂದಿನ ದಿನಗಳಲ್ಲಿ ಈ ರೀತಿ ಪ್ರಾಣಿ ದಾಳಿಗೆ ಯಾವುದೇ ಮನುಷ್ಯರು ಬಲಿಯಾಗದೆ ಇರುವಂತೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟಂತ ಅರಣ್ಯಾಧಿಕಾರಿಗಳಿಗೆ ಮನವಿ ಮಾಡಿದರು.

ಆ.13ರಿಂದ ನರಸೀಪುರದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಸಾಧಕರಿಗೆ ಸನ್ಮಾನ, ಮನೆಗಳ ಮೇಲೆ ಧ್ವಜ ಹಾರಿಸಲು ನಿರ್ಧಾರ

ತಿ.ನರಸೀಪುರ, ಆ.3– ದೇಶ 75ನೇ ವರ್ಷದ ಸ್ವತಂತ್ರ್ಯಕ್ಕೆ ಕಾಲಿಡು ತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನ ದಂತೆ ಶಾಸಕರು, ಸ್ಥಳೀಯ ಚುನಾಯಿತ ಜನ ಪ್ರತಿನಿಧಿಗಳು ಹಾಗೂ ಸಂಘ ಸಂಸ್ಥೆ ಮುಖಂಡರ ಸಲಹೆ ಸಹಕಾರ ಪಡೆದು ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ವಿಶಿಷ್ಟವಾಗಿ ಆಚರಣೆ ಮಾಡಲು ತೀರ್ಮಾನಿಸಲಾಯಿತು

ತಾಪಂ ಸಭಾಂಗಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವದ ಪೂರ್ವಭಾವಿ ಸಭೆಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ದಿನಾಚರಣೆ ಪೂರ್ವ ಸಿದ್ಧತಾ ಸಭೆಯಲ್ಲಿ ಆಗಸ್ಟ್ 13 ರಿಂದಲೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಪ್ರಾರಂಭಿಸಿ ಆಗಸ್ಟ್ 15 ರಂದು ವಿದ್ಯೋದಯ ಶಿಕ್ಷಣ ಸಂಸ್ಥೆ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲು ಒಮ್ಮತದ




ಅಭಿಪ್ರಾಯಕ್ಕೆ ಬರಲಾಯಿತು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ತಾಲೂಕು ಆಡಳಿತ ನಿರ್ಧರಿಸಿರುವಂತೆ ಕಾರ್ಯಕ್ರಮಗಳೊಂದಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ. ಹಾಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ಮಕ್ಕಳನ್ನು ಸನ್ಮಾನಿಸುವುದರ ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ ಗಣ್ಯರನ್ನು ಸನ್ಮಾನಿಸಿ ಅರ್ಥ ಪೂರ್ಣ ಸ್ವಾತಂತ್ರ ದಿನಾಚರಣೆ ಆಚರಿಸೋಣ ಎಂದು ಸಲಹೆ ನೀಡಿದರು.

ತಾಲೂಕು ದಂಡಾಧಿಕಾರಿ ಸಿ.ಜೆ ಗೀತಾ ಮಾತನಾಡಿ, ಸರ್ಕಾರ ಈ ಬಾರಿಯ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಆಚರಣೆಗೆ ಹಲವು ನಿರ್ದೇಶನಗಳನ್ನು ನೀಡಿದೆ. ಅದರಲ್ಲಿ ಪ್ರಮುಖವಾಗಿ ಆಗಸ್ಟ್ 13 ರಿಂದ ಆಗಸ್ಟ್ 15 ರವರೆಗೆ ಸಾರ್ವಜನಿಕರು ತಮ್ಮ ಮನೆಗಳ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಿ ರಾಷ್ಟ್ರಕ್ಕೆ ಗೌರವ ಸಲ್ಲಿಸುವುದು ಒಂದಾಗಿದೆ ಎಂದರು.

ಸಭೆಯಲ್ಲಿ ಪುರಸಭೆ ಅಧ್ಯಕ್ಷ ಎಸ್.ಮದನ್ ರಾಜ್, ಮಾಜಿ ಜಿಪಂ ಸದಸ್ಯ ಜೈಪಾಲ್ ಭರಣಿ, ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ, ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ಮುಖಂಡರುಗಳಾದ ಕರೋಹಟ್ಟಿ ಮಹದೇವಯ್ಯ, ಕಿರಗಸೂರು ಶಂಕರ್, ಸಿ.ಡಿ.ಪಿ.ಓ ಬಸವರಾಜು, ಉಪ ತಹಶೀಲ್ದಾರ್ ಜೆ.ಕೆ. ಪ್ರಭುರಾಜ್, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಪುರಸಭೆ ಮುಖ್ಯಾಧಿಕಾರಿ ಬಸವರಾಜು, ಲೋಕೋಪಯೋಗಿ ಇಲಾಖೆ ಎಇಇ ನಟೇಶ್, ಆರೋಗ್ಯಾಧಿಕಾರಿ ಡಾ.ರವಿಕುಮಾರ್, ನೀರಾವರಿ ಇಲಾಖೆ ಎಇಇ ನಟೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಬಿಸಿಯೂಟ ಸಹಾಯಕ ನಿರ್ದೇಶಕ ಮದ್ದಾನಪ್ಪ, ಸಹಾಯಕ ಕೃಷಿ ನಿರ್ದೇಶಕಿ ಸುಹಾಸಿನಿ ಹಾಜರಿದ್ದರು.

> ತಾಲೂಕು ಪಂಚಾಯತಿ ವತಿಯಿಂದ ಪ್ರತಿ ಗ್ರಾಮ ಪಂಚಾಯತಿಗೆ ರಾಷ್ಟ್ರ ಧ್ವಜ ಸರಬರಾಜು ಮಾಡಲಾಗುತ್ತದೆ. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ನಾಗರೀಕರು ಚುನಾಯಿತ ಪ್ರತಿನಿಧಿಗಳು ಹಾಗೂ ಸಂಘ ಸಂಸ್ಥೆಗಳ ಮುಖಂಡರಿಗೆ ಕೊಟ್ಟು ರಾಷ್ಟ್ರ ಧ್ವಜವನ್ನು ಹಾರಿಸಬೇಕು ಎಂಬ ನಿರ್ದೇಶನವನ್ನು ಪಿಡಿಓಗಳಿಗೆ ನೀಡುವುದರ ಜೊತೆಗೆ ಪಂಚಾಯತಿ ಕಟ್ಟಡಗಳನ್ನು ವಿದ್ಯುತ್ ದೀಪಾಲಂಕಾರದಿಂದ ಶೃಂಗಾರ ಮಾಡಲು ಸೂಚನೆ ನೀಡಲಾಗುವುದು.
>
> –ಸಿ.ಕೃಷ್ಣ, ತಾಪಂ ಇಓ



ತಿ.ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವಿರೋಧ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75 ವರ್ಷದ ಅಮೃತ ಮಹೋತ್ಸವದ ಅಂಗವಾಗಿ ತಿರುಮಕೂಡಲಿನ ಕಾಂಗ್ರೆಸ್ ಯುವ ಮುಖಂಡ ಸಂದೇಶ್ ಸ್ವಾಮಿ ನಾಥ್ ಗೌಡ ಅವರು ಪಟ್ಟಣದ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು–ಹಂಪಲು ಹಾಲು ಮತ್ತು ಬ್ರೆಡ್ ವಿತರಿಸಿದರು. ಪಂಚಾಯಿತಿ ಮಾಜಿ ಸದಸ್ಯ ಎಂ.ರಮೇಶ್‌ಸಾಗರ್, ತಿರುಮಕೂಡಲು ರಘು, ಮುರಳಿ, ಮೆಡಿಕಲ್ ಪ್ರಕಾಶ್, ರಘು, ಪಾರುಪತ್ತೆದಾರ್ ಪವನ್, ಯೋಗೇಶ್, ಹಾಲಿನ ಸತ್ಯ ರವಿಕುಮಾರ್, ನವೀನ್‌ಕುಮಾರ್, ಸಂಜು ಹಾಜರಿದ್ದರು.



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಅವರನ್ನು ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಹೆಚ್.ಡಿ.ಕೋಟೆ ಅಭಿಮಾನಿ ಬಳಗದ ವತಿಯಿಂದ ಸನ್ಮಾನಿಸಿ ಶುಭ ಕೋರಲಾಯಿತು. ಅಭಿಮಾನಿ ಬಳಗದ ಅಧ್ಯಕ್ಷ ಹೆಚ್.ಸಿ. ನರಸಿಂಹಮೂರ್ತಿ, ವನಸಿರಿ ಶಂಕರ್, ಪ್ರೇಮ್ ಸಾಗರ್, ನಾಗರಾಜು, ಮಂಜುನಾಥ್, ಮಲ್ಲೇಶ್, ಮಾರ್ಕಂಡಯ್ಯ, ಮರಿದೇವಯ್ಯ, ಯೂಥ್ ಅಧ್ಯಕ್ಷ ಶಿವರಾಜ್, ಅಭಿ, ನಾಗರಾಜ್, ನಾಗೇಶ್, ಭಾಗ್ಯಲಕ್ಷ್ಮಿ ಹಾಗೂ ಅಭಿಮಾನಿ ಬಳಗದ ಎಲ್ಲಾ ಸದಸ್ಯರು ಕೂಡ ಭಾಗಿಯಾಗಿ ಶುಭಹಾರೈಸಿದರು.

WANTED ACCOUNTANT

B.Com Graduate with English & Kannada Typing, DTP & Tally

Send your CV Within 7 Days to mes_eduction@rediffmail.com



ಜನುಮದಿನದ ಶುಭಾಶಯಗಳು

ಮೋನಿಷ್.ಎನ್. ಆರಾಧ್ಯ (ಬಿ.ಇ)

ಶುಭಕೋರುವವರು : ಅಪ್ಪ, ಅಮ್ಮ ಹಾಗೂ ಅಜ್ಜಿ, ಎಸ್.ಕೆಬ್ಬೆಹುಂಡಿ, ಟಿ. ನರಸೀಪುರ ತಾಲ್ಲೂಕು

ASSISTANT / DRIVER REQUIRED

12th Pass with 5 years Experience, Car Maintenance. Driving Manual and Automatic car. Handsome Salery. Contact

9019368646

43 ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:

Ph: 0821-2496522 / 23

Email: ad@mysurumithra.com

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಸಿದ್ದಮ್ಮನವರು (ಲೇಟ್ ಕೆಂಪಯ್ಯರವರ ಧರ್ಮಪತ್ನಿ)

ಇವರು ದಿ:25.07.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ.04.08.2022 ಗುರುವಾರ ಬೆಳಗ್ಗೆ 10.55ಕ್ಕೆ, #37/4, ಬನ್ನೂರು ರಸ್ತೆ, ಗೋಪಿಕ ಶಾಲೆ ಹತ್ತಿರ, ಯರಗನಹಳ್ಳಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.ದುಃಖತಪ್ತರು: ಉಮಾ ಲೈಟಿಂಗ್ಸ್ ಮಾಲೀಕರಾದ ಶ್ರೀಮತಿ ಸಾವಿತ್ರಿ.ಕೆ ಮತ್ತು ಶ್ರೀ ಕೆ.ಭೈರಪ್ಪ, ಕುಟುಂಬವರ್ಗ.

ಮೊದಲನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಪುಟ್ಟಸ್ವಾಮಿಗೌಡರು
ಮಾಜಿ ಮಂಡಲ ಪಂಚಾಯಿತಿ ಸದಸ್ಯರು

ಇವರು ದಿನಾಂಕ 04-08-2022 ನೇ ಗುರುವಾರಕ್ಕೆ ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷವಾಗಿದ್ದು ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ.

ಕುಟುಂಬ ವರ್ಗದವರು, ಶ್ರೀಮತಿ ಶಿವಮ್ಮ, ಲೇ. ಪುಟ್ಟಸ್ವಾಮಿ ಗೌಡರು,
ಶ್ರೀಮತಿ ಸವಿತ ಎಸ್.ಪಿ, ಕೃಷ್ಣಮೂರ್ತಿರವರು ಗ್ರಾಂ. ಪಂ. ಸದಸ್ಯರು, ಡಿ. ಸಾಲುಹುಂಡಿ.

ದುಃಖತಪ್ತರು : ಕುಟುಂಬ ವರ್ಗದವರಾದ ಲೇ. ಚಿಕ್ಕತಾಯಮ್ಮ & ಶ್ರೀ ಲೇ. ಹಲಗೂರೆಗೌಡರು, ಲೇ. ಬಸವೇಗೌಡರು ಮತ್ತು ಲೇ. ದೊಡ್ಡತಮ್ಮೇಗೌಡ , ಲೇ. ಚಿಕ್ಕತಮ್ಮೇಗೌಡ ಕುಟುಂಬ ವರ್ಗದವರು ಹಾಗು ಬಂದು ಮಿತ್ರರು, ಡಿ. ಸಾಲುಹುಂಡಿ ಗ್ರಾಮ.

Neminath Steels



TRADEMARK FOR TRUST AND QUALITY.

Near Taluk Office, Nazarbad
+91 97420 06656

Saanvi PERFECT COLOURS / PHOTOGRAPHY

PROFESSIONAL MAKEUP & HAIR COURSE

* COLOUR THEORY
* BASIC TO ADVANCE MAKEUP
* BASIC TO ADVANCE HAIRSTYLING
* SAREE PREPLEATING, FOLDING AND DRAPPING
* AIRBRUSH
* WATERPROOF
* FLORAL ART
* PORTFOLIO
* CERTIFICATION



CLASS STARTS FROM AUGUST 18TH 2022

FOR FURTHER DETAILS PING US:
9900630404, 9035363041

2858/1, 2ND MAIN, 3RD CROSS JAYNAGAR, MYSORE-570014

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎಸ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು–10. (Ph No: 0821-2449772. E-mail:- khsdrp.divmys@gmail.com Fax No: 0821-2449772)

ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–4/ಟೆಂಡರ್–22–2ನೇ ಕರೆ 2022–23 ದಿನಾಂಕ: 28.07.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಸಿವಿಲ್ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ:

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಕಾಲಾವಧಿ (ಮಳೆಗಾಲ ಸೇರಿದಂತೆ)	ಗುತ್ತಿಗೆದಾರರ ಅರ್ಹತೆ
1.	Repairs and Renovation to Government Ayurveda Hi-Tech Panchakarma Hospital, Brindavan Extension KRS Road Mysuru ಕಾಮಗಾರಿ.	17.75	44,375.00	2 ತಿಂಗಳು	ನಾಲ್ಕನೇ ದರ್ಜೆ & ಮೇಲ್ಪಟ್ಟು

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:

(1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **11.08.2022 ಸಂಜೆ 16.00 ಘಂಟೆಯವರೆಗೆ**

(2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **12.08.2022 ಸಂಜೆ 16.01 ಘಂಟೆಗೆ**

ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/315/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು

ಮೈಸೂರು–ನಂಜನಗೂಡು ರಸ್ತೆ, ಬಂಡೀಪಾಳ್ಯ,ಮೈಸೂರು–570 025.
E-Mail:apmcmysore@rediffmail.com, apmcmys@gmail.com ದೂ:0821–2482389

ಸಂ. ಕೃಉಮಾಸ(ಮೈ)/820/2022–23 ದಿನಾಂಕ:28.07.2022

ಮರು ಪ್ರಕಟಣೆ

ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬಂಡೀಪಾಳ್ಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಎ–ಬ್ಲಾಕ್‌ನಲ್ಲಿ ಈರುಳ್ಳಿ–ಆಲುಗಡ್ಡೆ ಗೋದಾಮಿನ ಬಳಿ 2017–18 ನೇ ಸಾಲಿನ ಆರ್.ಕೆ.ವಿ.ವೈ ಯೋಜನೆಯಡಿ ನಿರ್ಮಿಸಿರುವ ಹತ್ತು ಸಂಖ್ಯೆ ಮುಚ್ಚು ಹರಾಜುಕಟ್ಟೆಗಳನ್ನು ಸಮಿತಿಯಿಂದ ಅಧಿಕೃತ ಪರವಾನಗಿ ಪಡೆದು ವ್ಯವಹರಿಸುತ್ತಿರುವ ಈರುಳ್ಳಿ–ಆಲೂಗೆಡ್ಡೆ ವ್ಯಾಪಾರಸ್ಥರುಗಳಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ)ಶಾಸನ 1966 ನಿಯಮ 1968 ಮತ್ತು 2004ರ ಆಸ್ತಿ ಹಂಚಿಕೆ ನಿಯಮ 13 ರನ್ವಯ ಕೇಳಿದಾಗ ಬಿಟ್ಟು ಕೊಡುವ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಅರ್ಹ ಪೇಟೆ ಕಾರ್ಯಕರ್ತರುಗಳಿಂದ ನೊಂದಣಿ ಮೂಲಕ ಹಂಚಿಕೆ ಮಾಡಲು ಅರ್ಜಿಗಳನ್ನು ಮರು ಆಹ್ವಾನಿಸಲಾಗಿದೆ.

ಕ್ರ ಸಂ	ಕಟ್ಟಡದ ವಿವರ	ನಿಗಧಿಪಡಿಸಿರುವ ಮಾಸಿಕ ಲೀವ್ & ಲೈಸೆನ್ಸ್ ಶುಲ್ಕ	ಮುಂಗಡ ಠೇವಣಿ	ಮೀಸಲಾತಿ	ಅರ್ಜಿ ಶುಲ್ಕ (ತೆರಿಗೆ ಪ್ರತ್ಯೇಕ) (ರೂ.)
	ಮುಖ್ಯ ಮಾರುಕಟ್ಟೆ ಪ್ರಾಂಗಣ ಎ–ಬ್ಲಾಕ್				
1	ಮುಚ್ಚು ಹರಾಜುಕಟ್ಟೆ 01 (ಅಂಗಡಿ/ಶಾಪ್ ಸಂ.01)	19,740–00	39,480–00	ಸಾಮಾನ್ಯ	1,000–00
2	ಮುಚ್ಚು ಹರಾಜುಕಟ್ಟೆ 01 (ಅಂಗಡಿ/ಶಾಪ್ ಸಂ.02)	23,620–00	47,240–00	ಪ.ಜಾತಿ	
3	ಮುಚ್ಚು ಹರಾಜುಕಟ್ಟೆ 02 (ಅಂಗಡಿ/ಶಾಪ್ ಸಂ.03)	19,740–00	39,480–00	ಸಾಮಾನ್ಯ	
4	ಮುಚ್ಚು ಹರಾಜುಕಟ್ಟೆ 02 (ಅಂಗಡಿ/ಶಾಪ್ ಸಂ.04)	23,620–00	47,240–00	ಸಾಮಾನ್ಯ	
5	ಮುಚ್ಚು ಹರಾಜುಕಟ್ಟೆ 03 (ಅಂಗಡಿ/ಶಾಪ್ ಸಂ.05)	19,740–00	39,480–00	ಪ.ಪಂಗಡ	
6	ಮುಚ್ಚು ಹರಾಜುಕಟ್ಟೆ 03 (ಅಂಗಡಿ/ಶಾಪ್ ಸಂ.06)	23,620–00	47,240–00	ಸಾಮಾನ್ಯ	
7	ಮುಚ್ಚು ಹರಾಜುಕಟ್ಟೆ 04 (ಅಂಗಡಿ/ಶಾಪ್ ಸಂ.07)	19,740–00	39,480–00	ರೈ.ಉ.ಸಂಸ್ಥೆ	
8	ಮುಚ್ಚು ಹರಾಜುಕಟ್ಟೆ 04 (ಅಂಗಡಿ/ಶಾಪ್ ಸಂ.08)	23,620–00	47,240–00	ಸಾಮಾನ್ಯ	
9	ಮುಚ್ಚು ಹರಾಜುಕಟ್ಟೆ 05 (ಅಂಗಡಿ/ಶಾಪ್ ಸಂ.09)	19,740–00	39,480–00	ಮಹಿಳೆ	
10	ಮುಚ್ಚು ಹರಾಜುಕಟ್ಟೆ 05 (ಅಂಗಡಿ/ಶಾಪ್ ಸಂ.10)	23,620–00	47,240–00	ಸಾಮಾನ್ಯ	

(1) ಸಮಿತಿಯಿಂದ ಅರ್ಜಿ ಫಾರಂ ಪಡೆಯಲು ಕೊನೆಯ **ದಿನಾಂಕ:12–08–2022. ಸಂಜೆ 5–00 ಗಂಟೆಯೊಳಗಾಗಿ.** (2) ಭರ್ತಿ ಮಾಡಿದ ನಿಗಧಿತ ಅರ್ಜಿ ಫಾರಂಗಳನ್ನು ದ್ವಿಪ್ರತಿಗಳಲ್ಲಿ ಸಲ್ಲಿಸಲು ಕೊನೆಯ **ದಿನಾಂಕ:18–08–2022. ಸಂಜೆ 5–00 ಗಂಟೆಯೊಳಗಾಗಿ.** (3) ನೋಂದಣಿ ಶುಲ್ಕ ರೂ.500–00 ಗಳನ್ನು ಡಿ.ಡಿ. ಮುಖಾಂತರ ಪಾವತಿಸುವುದು. (4) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ)ಶಾಸನ 1966 ನಿಯಮ 1968. ಮತ್ತು 2004ರ ಆಸ್ತಿ ಹಂಚಿಕೆ ನಿಯಮಾವಳಿಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. (5) ಆಸ್ತಿ ಹಂಚಿಕೆ ನಿಯಮ–2004ರ ನಿಯಮ–17 ರನ್ವಯ ಸರ್ಕಾರವು ನಿರ್ಧಿಷ್ಟಪಡಿಸಬಹುದಾದ ಸಂಖ್ಯೆಯಷ್ಟು ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ, ಅಂಗವಿಕಲ, ಮಹಿಳೆಯರಿಗೆ ಮತ್ತು ರೈತ ಉತ್ಪಾದಕ ಸಂಸ್ಥೆ ಮುಂತಾದ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿರಿಸಿದೆ. (6) ಅರ್ಜಿ ಶುಲ್ಕ ಹಾಗೂ ನೊಂದಣಿ ಶುಲ್ಕವನ್ನು ಕಾರ್ಯದರ್ಶಿ , ಕೃ.ಉ.ಮಾ.ಸ.,ಮೈಸೂರು ಇವರ ಹೆಸರಿಗೆ ಡಿ.ಡಿ. ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು. (7) ಈಗಾಗಲೇ ನೋಂದಣಿ ಮಾಡಿಕೊಂಡಿರುವವರು ಮರು ನೋಂದಣಿ ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. (8) ಮೀಸಲಾತಿಯಡಿ ಅರ್ಜಿಗಳು ಸ್ವೀಕೃತಗೊಳ್ಳದಿದ್ದಲ್ಲಿ ಸಾಮಾನ್ಯ ವರ್ಗದವರನ್ನು ಪರಿಗಣಿಸಲಾಗುವುದು. (9) ಹೆಚ್ಚಿನ ವಿವರಗಳನ್ನು ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಕಾರ್ಯದರ್ಶಿ, ಕೃ.ಉ.ಮಾ.ಸ.,ಮೈಸೂರು ಸಹಿ/–ಆಡಳಿತಾಧಿಕಾರಿ, ಕೃ.ಉ.ಮಾ.ಸ.,ಮೈಸೂರು

ವಾಸಾಸಂಇ/ಉನಿ–ಮೈ/ಎಂಸಿ&ಎ/323/2022–23

AN OCEAN OF OPPORTUNITIES AWAITS THE AMBITIOUS



JOIN INDIAN NAVY

Indian Navy invites online applications from unmarried men & women candidates, to join as Short Service Commission Officers.

Branch/Cadre	Educational Qualification	Vacancies	Born Between (Both Dates Inclusive)
SSC EXECUTIVE (Information Technology)	Minimum 60% marks in English in class X or XII and one of the undermentioned educational qualification with minimum 60% overall qualifying marks, in either or a combination of the following:- (a) MSc/BE/BTech/MTech (Computer Science/Computer Science & Engineering/ Computer Engineering/ Information Technology/Software Systems/Cyber Security/ System Administration & Networking/ Computer Systems & Networking Data Analytics/Artificial Intelligence) OR (b) MCA with BCA/ BSc (Computer Science/ Information Technology)	50	02 Jan 1998 to 01 Jul 2003

Entry is open from **05 Aug 22.**
The last date for submission of online application is **15 Aug 22.**

For eligibility criteria and details, visit **www.joinindiannavy.gov.in** and Employment News dated **06 Aug 22.**

Scan this QR Code to apply online

CBC 10701/13/0008/2223

7ನೇ ವರ್ಷದ ಪುಣ್ಯಸ್ಮರಣೆ



ಎಂ.ಮಹದೇವು

ಮಾಜಿ ಸಚಿವರು, ಕರ್ನಾಟಕ ಸರ್ಕಾರ

"ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ;
ಲೋಕವಿರೋಧಿ, ಶರಣನಾರಿಗಂಜುವನಲ್ಲ
ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪನಾಗಿ"

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ
ನೀವು ಹಾಕಿಕೊಟ್ಟ ಮಾರ್ಗದಲ್ಲೇ ನಡೆಯುತ್ತ
ಸದಾ ನಿಮ್ಮ ನೆನಪಿನಲ್ಲಿರುವ

ಧರ್ಮಪತ್ನಿ : ಪಿ. ರಾಜಮ್ಮ ಎಂ.ಮಹದೇವು ಮತ್ತು ಮಕ್ಕಳು ಹಾಗೂ ಕುಟುಂಬವರ್ಗ, ನಂಜನಗೂಡು